ತ್ರೈಮಾಸಿಕ
ಸಂಚಿಕೆ 53

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸೆಪ್ಟೆಂಬರ್, ೨೦೨೫




KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


- ಸಂಪಾದಕೀಯ....3
- ಸಂಪಾದಕೀಯ ತಂಡ....4
- ಅಧ್ಯಕ್ಷರ ನುಡಿ....5
- ಜ್ಞಾನ ದೀವಿಗೆ....6
- 5 ಕಿಮೀ ಮ್ಯಾರಥಾನ್....8
- ಗಣೇಶೋತ್ಸವ....9

**ಸವಿನೆನಪು**

- ಮಿಲನ (2015 – 16) ತಂಡದ ನೆನಪಿನ ಅಂಗಳದಿಂದ ....11
- ಮನಸ್ಸಾಗಿದೆ ಮತ್ತೊಮ್ಮೆ....13

**ಹಬ್ಬ ಹರಿದಿನ**

- ರಾಯರ ಆರಾಧನೆ ....14
- ಕೃಷ್ಣಾಷ್ಟಮಿ ....15
- ನ್ಯೂ ಜೆರ್ಸಿಯಲ್ಲಿ ದಸರಾ ಸಂಭ್ರಮ....17
- ಹಬ್ಬಗಳ ಸರಮಾಲೆ....18
- ರಕ್ಷಾ ಬಂಧನ....20

**ಭಾವಪೂರ್ಣ ಶ್ರದ್ಧಾಂಜಲಿ**

- ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ....21
- ಎಸ್. ಎಲ್. ಭೈರಪ್ಪ ತತ್ವಗಳ ಶಿಲ್ಪಿ....23
- ಯಶವಂತ ಸರ್ದೇಶಪಾಂಡೆ ಹಾಸ್ಯದ ಸರದಾರ....24

- ಸಂಪದ್ಭರಿತವಾದ ಜಿಲ್ಲೆ "ನಮ್ಮ ಕೊಡಗು"....25

**ಕಥಾ ಸಂಕಲನ**

- ತಪ್ಪೊಂದ ಹೇಳುವೆ ....27

**ಕವನ ಸಂಕಲನ**

- ಬೃಂದಾವನ ನಡಿಗೆ....36
- ಇನ್ನು ತಾಳೆನು ಹೇಳಿಬಿಡು....37
- ಶ್ರೀಕೃಷ್ಣ ನಾಮ ಚೈತನ್ಯ ಧಾಮ....38
- ಯಾರಿವರು?....39

**ಅಡಿಗೆ ಅರಮನೆ**

- ಗಣೇಶನಿಗೆ ಅರ್ಪಿಸಲು ಪಂಚಕಜ್ಜಾಯ....41
- ಗಣೇಶನಿಗೆ ಮೋದಕ ಕರಿಗಡುಬು....42
- ಖಾರ ಬ್ರೆಡ್....43

- ಚಿಣ್ಣರ ಲೋಕ....44
- ಕ್ಯಾಮರಾ ಕಣ್ಣಲ್ಲಿ....49
- ಅನಿಸಿಕೆ-ಅಭಿಪ್ರಾಯ ....54



# ಶ್ರಾವಣ ಬಂತು ಶ್ರಾವಣ

**ಜೇ**ಷ್ಠ ಹೋಗಿ, ಆಷಾಢ ಕಳೆದು, ಶ್ರಾವಣ ಬಂತೆಂದರೆ ಹಬ್ಬಗಳ ತೋರಣ ಮನೆ ಬಾಗಿಲಿಗೆ ಕಟ್ಟಿದಂತೆ, ಹಾಗಾಗಿ ಹಿರಿಯರು ಹೇಳ್ತಾರೆ 'ಶ್ರಾವಣ ಹಬ್ಬಗಳ ಹೆಬ್ಬಾಗಿಲು ಅಂತ'.

ಶ್ರಾವಣ ಬಂತು ಕಾಡಿಗೆ,
ಬಂತು ನಾಡಿಗೆ

ಎಂಬ ಹಾಡಿನಂತೆ ಪರಿಸರದಲ್ಲೂ ಸಕಾರಾತ್ಮಕ ಬದಲಾವಣೆ, ನಾಡಿನಲ್ಲೂ ಸಂಭ್ರಮದ ವಾತಾವರಣ.

ಹಬ್ಬಗಳೆಂದರೆ ಹೆಣ್ಣುಮಕ್ಕಳಿಗೆ ಎಲ್ಲಿಲ್ಲದ ಸಂಭ್ರಮ. ಅದರಲ್ಲೂ ಶ್ರಾವಣದ ಹಬ್ಬಗಳೆಂದರೆ ಅವು ಕೇವಲ ಹೆಣ್ಣುಮಕ್ಕಳಿಗೆ ಸೀಮಿತ ಎಂದು ಹೇಳಬಹುದು, ಅಂದರೆ ಹಬ್ಬಕ್ಕೆ ತಯಾರಿ ಮಾಡುವುದರಿಂದ ಹಿಡಿದು ತಾವು ತಯಾರಾಗುವವರೆಗೂ ಈ ಉತ್ಸಾಹ ಮುಂದುವರೆಯುತ್ತದೆ.

ಶ್ರಾವಣ ಮಾಸವು ಮಂಗಳಗೌರಿ, ಶುಕ್ರಗೌರಿ ಮತ್ತು ವರಮಹಾಲಕ್ಷ್ಮಿ ಎಂಬ ವ್ರತಗಳ ಮೂಲಕ ಪ್ರಾರಂಭವಗುತ್ತದೆ. ಇಲ್ಲಿಂದಲೇ ಹೆಂಗಳೆಯರ ಸಂಭ್ರಮ ಆರಂಭ. ಮಾಸ ಪ್ರಾರಂಭಕ್ಕೂ ಮೊದಲೇ ಮನೆಯನ್ನೆಲ್ಲ ಶುಚಿಗೊಳಿಸಿ, ಹಬ್ಬದ ಸಮಯದಲ್ಲಿ ಮನೆಯನ್ನೆಲ್ಲ ಹೂವು, ತಳಿರು-ತೋರಣಗಳಿಂದ ಅಲಂಕರಿಸುತ್ತಾರೆ. ಅಷ್ಟೆ  ಅಲ್ಲದೆ,ದೇವರಿಗೆ ಹೊಸ ಸೀರೆ ತರುವುದು, ವಿವಿಧ ಆಭರಣಗಳಿಂದ ಅಲಂಕರಿಸುವುದು, ನಂತರ ತಾವೂ ಸಹ ಸುಂದರವಾಗಿ ತಯಾರಾಗಿ ಅಕ್ಕ-ಪಕ್ಕದ ಮನೆಯವರು, ಸಂಬಂಧಿಕರನ್ನು ಕರೆದು ಅವರಿಗೆ ಅರಿಶಿನ-ಕುಂಕುಮ, ತಾಂಬೂಲವನ್ನು ಕೊಟ್ಟು ಅವರಿಂದ ಆಶೀರ್ವಾದವನ್ನು ಪಡೆಯುತ್ತಾರೆ. ಇದರಿಂದ ಮನೆ ಮತ್ತು ಮನಗಳೆರಡು ಪ್ರಶಾಂತವಾಗಿರುತ್ತವೆ.

ಈ ವ್ರತಗಳ ನಡುವೆಯೇ ಬರುವುದು ನಾಗರಪಂಚಮಿ. ಈ ಹಬ್ಬವನ್ನು ನಾವು ಪರಿಸರದೊಂದಿಗೆ ಆಚರಿಸುತ್ತೆವೆ. ಕೆಲವರು ಹುತ್ತವನ್ನು ಹುಡುಕಿ ನಿಜ ನಾಗನಿಗೆ ಹಾಲೆರೆದರೆ, ಇನ್ನು ಕೆಲವರು ದೇವಸ್ಥಾನಕ್ಕೆ ಹೋಗಿ ಕಲ್ಲು ನಾಗನಿಗೆ ಹಾಲೆರೆಯುತ್ತಾರೆ. ಹೇಗೇ ಇದ್ದರು ಇದರ ಹಿಂದಿನ ಭಕ್ತಿ, ಉದ್ದೇಶ, ನಂಬಿಕೆ ಮಾತ್ರ ಒಂದೇ.

ಶ್ರಾವಣ ಮಾಸವು ಸಂಸ್ಕೃತಿಯ ಒಂದು ಭಾಗವಾಗಿದೆ. ಅಂತೆಯೇ ಬರುವುದು ರಕ್ಷಾ ಬಂಧನ, ಸಂಬಂಧಗಳನ್ನು ಗಟ್ಟಿಗೊಳಿಸುವ ಹಬ್ಬ. ಇಲ್ಲಿ ಸಹೋದರಿ ತನ್ನ ಸಹೋದರ ಎಲ್ಲಾ ಕಷ್ಟ ಮತ್ತು ತೊಂದರೆಗಳಿಂದ ತನ್ನನ್ನು ರಕ್ಷಿಸುತ್ತಾನೆ ಎಂಬ ನಂಬಿಕೆ ಮತ್ತು ವಿಶ್ವಾಸದೊಂದಿಗೆ ತನ್ನ ಸಹೋದರನ ಕೈಗೆ ರಾಖಿಯನ್ನು ಕಟ್ಟುವ ಹಬ್ಬ.

ನಂತರ ಬರುವುದು ಶ್ರೀ ಕೃಷ್ಣ ಜನ್ಮಾಷ್ಟಮಿ. ಕಳ್ಳ ಕೃಷ್ಣನ ತುಂಟತನವನ್ನು ಮುಗ್ಧ ಕಂದಮ್ಮಗಳಿಂದ ಅನುಕರಣೆ ಮಾಡಿಸಿ ಶ್ರೀ ಕೃಷ್ಣನ ಜನ್ಮ ದಿನವನ್ನು, ಅವನ ಲೀಲೆಗಳನ್ನು ಆನಂದಿಸುವ ಹಬ್ಬ.

ಮೊದಲೇ ಹೇಳಿದಂತೆ ಶ್ರಾವಣ ಮಾಸ ಮಳೆಯಾಗುವ ಮೂಲಕ ಪರಿಸರದಲ್ಲಿ ಸಕರಾತ್ಮಕ ಬದಲಾವಣೆಯನ್ನು ತರುತ್ತದೆ. ಇದರಿಂದ ರೈತನು ಸಹ ತನ್ನನ್ನು ತಾನು ಅತ್ಯಂತ ಉತ್ಸಾಹದಿಂದ ಪರಿಸರದೊಂದಿಗೆ ತೊಡಗಿಸಿಕೊಳ್ಳುತ್ತಾನೆ.

ಹೀಗೆ ಶ್ರಾವಣ ಮಾಸವು ಎಲ್ಲಾ ವರ್ಗದವರು ಸೇರಿಕೊಂಡು ಪ್ರಕೃತಿಯೊಂದಿಗಿನ ಸಂಬಂಧ, ತಮ್ಮ ನಡುವಿನ ಸಂಬಂಧ ಮತ್ತು ದೇವರ ಮೇಲಿನ ಭಕ್ತಿಯನ್ನು ಹೆಚ್ಚಿಸುವಂತಹ ಸಾಲು ಸಾಲು ಹಬ್ಬಗಳನ್ನು ಹೊತ್ತು ತರುವ ಮಾಸವಾಗಿದೆ.

ಶ್ರಾವಣದಲ್ಲಿ ಬರುವ ಸಾಲು ಹಬ್ಬಗಳಂತೆಯೇ ಈ ನಮ್ಮ ಸಂಚಿಕೆಯಲ್ಲಿ ಅನೇಕ ವಿಧವಾದ ಕಥೆ-ಕವನಗಳು, ಸ್ವಾರಸ್ಯಕರ ಸುದ್ದಿ-ಸಮಾಚಾರಗಳು, ರುಚಿಕರ ಆಡುಗೆ, ಹೀಗೆ ಹತ್ತು-ಹಲವು ವಿಷಯಗಳು ಅಡಗಿವೆ. ಓದಿ ಆನಂದಿಸಿ.  ಅಷ್ಟೇ ಅಲ್ಲದೆ ಶ್ರಾವಣ ಮಾಸದ ಹಬ್ಬಗಳನ್ನು ವಿವಿಧ ಭಾಗಗಳಲ್ಲಿ ವಿವಿಧ ರೀತಿ ಆಚಾರಿಸುತ್ತಾರೆ. ಅಂತೆಯೇ ನಿಮ್ಮ ಕಡೆಗೆ ಯಾವ ಹಬ್ಬವನ್ನು ಯಾವ ರೀತಿ ಆಚಾರಿಸುತ್ತೀರಿ ಎಂದು ನಮಗೆ ತಿಳಿಸಿ ಹಾಗು ಈ ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಲು ಮರೆಯದಿರಿ. ನಿಮ್ಮ ಅನಿಸಿಕೆಗಳನ್ನು ನಾವು ನಮ್ಮ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ಧನ್ಯವಾದಗಳು

**ಸೌಮ್ಯ ರವಿ**
ಸಾಹಿತ್ಯ ಬೃಂದಾವನ
"ಸಂಕಲ್ಪ" ತಂಡ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿ.

# ಸಂಪಾದಕೀಯ ತಂಡ



**ಶ್ರೀವಿದ್ಯಾ ಪ್ರಶಾಂತ್**
ಪ್ರಧಾನ ಸಂಪಾದಕರು



**ರೋಹಿಣಿ ಮಹೇಶ್**
ಸಂಚಿಕೆ ವಿನ್ಯಾಸ



**ರಾಗಿಣಿ ದರ್ಶನ್**
ವಿಷಯ ನಿರ್ವಹಣೆ



**ಪಲ್ಲವಿ ಮಂಜುನಾಥ್**
ವಿಷಯ ನಿರ್ವಹಣೆ



**ವಾಣಿ ಗಿರೀಶ್**
ವಿಷಯ ನಿರ್ವಹಣೆ



**ಸೌಮ್ಯ ರವಿ**
ವಿಷಯ ನಿರ್ವಹಣೆ

ಮುಖಪುಟ ಚಿತ್ರ ಕೃಪೆ : ಸಂಧ್ಯಾ ಮಲ್ಲಿಕ್



# ಅಧ್ಯಕ್ಷರ ನುಡಿ

**ಬೃಂ**ದಾವನ ಕನ್ನಡ ಕೂಟದ ಎಲ್ಲ ಕನ್ನಡ ಬಂಧುಗಳಿಗೆ ಸಂಕಲ್ಪ ತಂಡದಿಂದ ದಸರಾ-ವಿಜಯದಶಮಿಯ ಹಾರ್ದಿಕ ಶುಭಾಶಯಗಳು!

ಈ ವರ್ಷದ ಗಣೇಶೋತ್ಸವ ಕಾರ್ಯಕ್ರಮವು ಸಾಮರ್ಸೆಟ್‌ನ ಫ್ರಾಂಕ್ಲಿನ್ ಮಿಡಲ್ ಸ್ಕೂಲ್‌ನಲ್ಲಿ 450ಕ್ಕೂ ಹೆಚ್ಚು ಜನರ ಸಮ್ಮಿಲನದೊಂದಿಗೆ, ಬಾಳೆ ಎಲೆಯ ಮೇಲಿನ ಹೋಳಿಗೆ, ಹಬ್ಬದ ಊಟ ಮತ್ತು ಉಪಚಾರದೊಂದಿಗೆ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಬೃಂದಾವನದ ಕಾರ್ಯಕ್ರಮಗಳು ಹೆಚ್ಚಿನ ಜನರ ಭಾಗವಹಿಸುವಿಕೆಯೊಂದಿಗೆ ಆಚರಣೆಗೊಳ್ಳುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆಯಾಗಿದ್ದು, ಕನ್ನಡಿಗರೆಲ್ಲರೂ ಒಂದೆಡೆ ಸೇರಿ, ಹಬ್ಬದ ವಾತಾವರಣದಲ್ಲಿ ವಿಶೇಷ ಉಡುಗೆ-ತೊಡುಗೆಗಳೊಂದಿಗೆ ಸಂಭ್ರಮ-ಸಡಗರದಿಂದ ಕೂಡಿರುವುದು ನೋಡಲು ಒಂದು ಸೊಗಸಾಗಿದೆ.

ಈ ಬಾರಿಯ ವಿಶೇಷತೆಯೆಂದರೆ, ನಮ್ಮ ಸಂಕಲ್ಪ ತಂಡಕ್ಕೆ ಕನ್ನಡದ ಹೆಸರಾಂತ ಕಥೆಗಾರ ಮತ್ತು ಬರಹಗಾರರಾದ ಜೋಗಿ (ಗಿರೀಶ್ ಹತ್ವಾರ್) ಅವರು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದರು. “ಜೋಗಿಯೊಡನೆ ಸಂವಾದ” ಕಾರ್ಯಕ್ರಮವು ಸುಮಾರು ಎರಡು ಗಂಟೆಗಳ ಕಾಲ, ತಿಳಿಹಾಸ್ಯದೊಂದಿಗೆ ರೋಚಕವಾಗಿ ನಡೆಯಿತು.

ನಮ್ಮ ಗಣೇಶೋತ್ಸವ ಕಾರ್ಯಕ್ರಮವನ್ನು ಜೋಗಿಯವರು ಉದ್ಘಾಟಿಸಿದರು. ಮಕ್ಕಳ ಕಾರ್ಯಕ್ರಮಗಳು, ಸಂಗೀತ, ನೃತ್ಯ ಕಾರ್ಯಕ್ರಮಗಳು ಮನಸೆಳೆದವು. ಎಸ್. ಎಚ್. ವೆಂಕಟೇಶಮೂರ್ತಿ ಅವರ ನೆನಪಿಗಾಗಿ “ಗೀತ ನಮನ” ಕಾರ್ಯಕ್ರಮವು ಜನಮನ ಗೆದ್ದಿತು. ಸ್ಥಳೀಯ ಶ್ರೀನಿಧಿ ಯಕ್ಷಗಾನ ತಂಡದಿಂದ ಧುರ್ಯೋಧನ-ಭೀಮ ಸಂವಾದದ ಯಕ್ಷಗಾನವು ತುಂಬಾ ಸುಂದರವಾಗಿ ಮೂಡಿಬಂದಿತು. ದೀಪ್ತಿ-ಪ್ರಶಾಂತ್ ಅವರ ಸುಮಧುರ ಸಂಗೀತ ಸಂಜೆ ಕಾರ್ಯಕ್ರಮವು ನಮ್ಮ ಗಣೇಶೋತ್ಸವಕ್ಕೆ ಮುಕುಟದಂತೆ ಮುಕ್ತಾಯಕ್ಕೆ ನಾಂದಿ ಹಾಡಿತು. ಸ್ವಲ್ಪ ತಾಂತ್ರಿಕ ತೊಂದರೆಯಿಂದಾಗಿ ಊಟದ ವ್ಯವಸ್ಥೆಯಲ್ಲಿ ವಿಳಂಬವಾದರೂ, ನಮ್ಮ ಕನ್ನಡಿಗರ ತಾಳ್ಮೆ ಮತ್ತು ಪ್ರಬುದ್ಧತೆ ನಮ್ಮ ಬೆನ್ನೆಲುಬಾಗಿ ನಿಂತಿತು. ನಿಮ್ಮೆಲ್ಲರಿಗೂ ಸಂಕಲ್ಪ ತಂಡವು ಕೃತಜ್ಞವಾಗಿದೆ.

ಅಕ್ಕ ಕನ್ನಡ ಕೂಟದೊಂದಿಗೆ ಸಹಯೋಗದಲ್ಲಿ ನಡೆದ Red Cross “ರಕ್ತದಾನ” ಕಾರ್ಯಕ್ರಮವು ನಮ್ಮ 5K ಓಟದ ಕಾರ್ಯಕ್ರಮದೊಂದಿಗೆ ಯಶಸ್ವಿಯಾಗಿ ನಡೆಯಿತು. ಸುಮಾರು 50 ಜನರು ರಕ್ತದಾನ ಮಾಡಿದರೆ, 100ಕ್ಕೂ ಹೆಚ್ಚು ಜನರು ಓಟದ ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ಸಿಗೆ ಕಾರಣರಾದರು.

ನಮ್ಮ ಪ್ರಾಯೋಜಕರ ಕಾರ್ಯಕ್ರಮಗಳು Zoom ಮೂಲಕ ಆಯೋಜಿತವಾಗಿದ್ದು, CareUnified, NYLife 529 ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಅವರ ಸೇವೆಗಳನ್ನು ಉಪಯೋಗಿಸಿ. ಪ್ರಾಯೋಜಕರಿಗೂ ಮತ್ತು ನಿಮಗೂ ಧನ್ಯವಾದಗಳು.

ಮತ್ತೊಂದು ದುಃಖಕರ ವಿಷಯವೆಂದರೆ, ನಮ್ಮೆಲ್ಲರ ನೆಚ್ಚಿನ ಕಥೆಗಾರ, ಸರಸ್ವತಿ ಸಮ್ಮಾನ್ ಪ್ರಶಸ್ತಿ ವಿಜೇತ, ಪದ್ಮಭೂಷಣ ಶ್ರೀ ಎಸ್. ಎಲ್. ಭೈರಪ್ಪ ಅವರ ನಿಧನವು ಕನ್ನಡ ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟವನ್ನುಂಟುಮಾಡಿದೆ. ‘ಪರ್ವ’, ‘ಭಿತ್ತಿ’, ‘ಯಾನ’, ‘ಗೃಹಭಂಗ’, ‘ಧರ್ಮಶ್ರೀ’ ಇತ್ಯಾದಿ ಉತ್ತಮ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ಕೊಡುಗೆಯಾಗಿ ನೀಡಿ, ಲಕ್ಷಾಂತರ ಓದುಗರನ್ನು ದಶಕಗಳ ಕಾಲ ಸಮಯಾತೀತವಾಗಿ ರಂಜಿಸಿದರು. ಬೃಂದಾವನ ಸಂಕಲ್ಪ ತಂಡವು ಈ ಮಹಾನ್ ಕಥೆಗಾರನಿಗೆ ಅಶ್ರುತರ್ಪಣೆ ಸಲ್ಲಿಸುತ್ತದೆ.

ಈ ತಿಂಗಳಲ್ಲಿ ಬೃಂದಾವನದಲ್ಲಿ ಪ್ರಪ್ರಥಮ ಬಾರಿಗೆ **“Drive-In Movie Night”**ನಲ್ಲಿ ‘Bell Bottom’ ಚಲನಚಿತ್ರ ಪ್ರದರ್ಶನಗೊಳ್ಳಲಿದೆ. ಈ ಹೊಸ ಅನುಭವಕ್ಕೆ ನಿಮ್ಮೆಲ್ಲರ ಸಹಕಾರವಿರಲಿ. ಮತ್ತೊಮ್ಮೆ ಭೇಟಿಯಾಗೋಣ!

ನಿಮ್ಮ,

**ಸುನೀಲ್ ಹುಲಿಕೆರೆ,**
ಅಧ್ಯಕ್ಷರು,
"ಸಂಕಲ್ಪ ತಂಡ",
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



**ಶ್ರೀ ಯೋಗೀಂದ್ರ ಭಟ್ ಉಳಿ**
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

# ಯಾಕೆ ಹೀಗೆ?

**ಹಿಂ**ದಿನವರಿಗೆ ಹೋಲಿಸಿದರೆ ನಮ್ಮ ಪೀಳಿಗೆಯ ಜನರ ದೈಹಿಕ ಸಾಮರ್ಥ್ಯ ಕಡಿಮೆಯಾಗಿದೆ ಎಂದೆನಿಸುವುದಿಲ್ಲವೇ? ಮಾನಸಿಕ ಸ್ಥೈರ್ಯವೂ ಕುಸಿದಂತೆ ಕಂಡುಬರುತ್ತದೆಯಲ್ಲವೇ? ಯಾಕೆ ಹೀಗೆ?

ನಮ್ಮ ಪೂರ್ವಜರ ಕಾಲದವರು ಕಲ್ಪನೆಯನ್ನೂ ಮಾಡಿರದ ಸುಖ ಸವಲತ್ತುಗಳು ಈಗ ನಮ್ಮ ಬಳಿಯಲ್ಲಿವೆ. ಮೈಲುಗಟ್ಟಲೆ ನಡೆಯುವ ಅವಶ್ಯಕತೆ ಈಗ ನಮಗಿಲ್ಲ. ಬೇಕಾದಾಗ ಬೇಕೆನಿಸಿದಲ್ಲಿಗೆ ಓಡಾಡಲು ತರಹೇವಾರಿ ವಾಹನಗಳ ವ್ಯವಸ್ಥೆಯಿದೆ. ಬಹುತೇಕ ಎಲ್ಲ ಕೆಲಸಗಳಿಗೂ ವೈವಿಧ್ಯಮಯ ಮತ್ತು ಚಿತ್ರವಿಚಿತ್ರ ಯಂತ್ರಗಳು ಬಂದುಬಿಟ್ಟಿವೆ. ಹಿಂದೆ ಗಂಟೆಕಟ್ಟಲೆ ಸಮಯ ಮತ್ತು ಅಪಾರ ಶ್ರಮವನ್ನು ಕಬಳಿಸುತ್ತಿದ್ದ ನಮ್ಮ ದೈನಂದಿನ ಕೆಲಸಗಳನ್ನು ಇದೀಗ ಕ್ಷಣಾರ್ಧದಲ್ಲಿ ಅಚ್ಚುಕಟ್ಟಾಗಿ ಮುಗಿಸಿಕೊಳ್ಳುವ ಆಧುನಿಕ ವ್ಯವಸ್ಥೆಗಳಿವೆ. ಆದರೂ ನಮಗೆ ನಿತ್ಯವೂ ನಿಃಶಕ್ತಿ. ಸುಸ್ತು, ಆಯಾಸ ಮತ್ತು ಅನಾರೋಗ್ಯಾದಿ ನೂರಾರು ಬಾಧೆಗಳು! ಯಾಕೆ ಹೀಗೆ?

ಹಿಂದೆ ಪ್ರತಿಯೊಂದು ಪರಿಶ್ರಮದ ಪ್ರತಿಫಲ ಮತ್ತು ಫಲಿತಾಂಶಗಳಿಗೂ ದೀರ್ಘಕಾಲ ಕಾಯಬೇಕಾದ ಪರಿಸ್ಥಿತಿಯಿತ್ತು. ಉದ್ಯೋಗ, ಸಂಪಾದನೆಗೆಂದು ದೂರದೂರಿಗೆ ತೆರಳಿದವರು ಗಮ್ಯಸ್ಥಾನಕ್ಕೆ ಕ್ಷೇಮವಾಗಿ ತಲುಪಿದ್ದಾರೆ ಎಂಬ ಸುದ್ದಿಯನ್ನು ತಿಳಿಯಲೂ ದಿನಗಟ್ಟಲೆ ಕಾಯಬೇಕಿತ್ತು. ಇನ್ನುಳಿದಂತೆ ಅವರ ಯೋಗಕ್ಷೇಮ, ಕಾರ್ಯಸಾಧನೆ ಇತ್ಯಾದಿಗಳ ಬಗ್ಗೆ ಪತ್ರಮುಖೇನ ಸ್ಥೂಲವಾಗಿ ತಿಳಿಯಬೇಕಾದರೂ ತಿಂಗಳುಗಟ್ಟಲೆ ಸಮಯ ಹಿಡಿಯುತ್ತಿತ್ತು. ಆದರೂ ಆಗಿನ ಕಾಲದ ಜನರು ದೇವರ ಮೇಲೆ ಭಾರಹಾಕಿ ನಿಶ್ಚಿಂತೆಯಿಂದ ಇರುತ್ತಿದ್ದರು. ವೃದ್ಧರು ಮತ್ತು ಪುಟ್ಟ ಮಕ್ಕಳ ಪೋಷಣೆಯ ಜೊತೆಗೆ ಮನೆಯನ್ನು, ಹೊಲಗದ್ದೆಗಳನ್ನು ಸಂಭಾಳಿಸುತ್ತಿದ್ದ ಹೆಂಗಸರೂ ಹುಮ್ಮಸ್ಸಿನಿಂದ, ಧೈರ್ಯದಿಂದ ಜೀವನ ಸಾಗಿಸುತ್ತಿದ್ದರು. ಈಗಿನ ಕಾಲದಲ್ಲಿ ಸಿಸಿ ಕ್ಯಾಮೆರಾ, ವೀಡಿಯೋ ಕಾಲ್ ನಿಂದ ಹಿಡಿದು ಸ್ಯಾಟಲೈಟ್ ಗೂಗಲ್ ಮ್ಯಾಪಿನ ತನಕ ಯಾರು ಎಲ್ಲಿ ಹೋದರೂ ಟ್ರ್ಯಾಕ್ ಮಾಡಲು ಬರುತ್ತದೆ. ಎಲ್ಲಿದ್ದಾರೆ, ಹೇಗಿದ್ದಾರೆ, ಏನು ಮಾಡುತ್ತಿದ್ದಾರೆ ಎಂಬುವುದರ ಬಗ್ಗೆ ಅನುಕ್ಷಣದ ಮಾಹಿತಿಯೂ ನಮಗೆ ಸಿಗುತ್ತದೆ. ನಮ್ಮ ಸುತ್ತಮುತ್ತ ಹೆಜ್ಜೆಗೊಂದೆಂಬಂತೆ ಹೊಸ ಹೊಸ ದೇಗುಲಗಳೂ ನಿರ್ಮಾಣಗೊಂಡಿವೆ. ಆದರೂ ನಮ್ಮ ಮನಸ್ಸಿನೊಳಗೆ ಇನ್ನಿಲ್ಲದ ಕೆಟ್ಟ ಯೋಚನೆಗಳು, ಚಿಂತೆಗಳು! ಏನಾಗುತ್ತದೋ ಏನೋ ಎಂಬ ಭಯ, ಆತಂಕಗಳು! ಒಟ್ಟಿನಲ್ಲಿ ನೆಮ್ಮದಿಯಿಂದ ನಿದ್ರಿಸಲೂ ನಮ್ಮಿಂದ ಸಾಧ್ಯವಾಗುತ್ತಿಲ್ಲ! ಯಾಕೆ ಹೀಗೆ?

ಹಾಗೆ ನೋಡಿದರೆ ಯಾವುದೇ ದೊಡ್ಡ ದೊಡ್ಡ ಆಸ್ಪತ್ರೆಗಳು, ಸ್ಕ್ಯಾನಿಂಗ್ ಯಂತ್ರಗಳು, ಆಪರೇಷನ್ ಥಿಯೇಟರ್ಗಳು ಇತ್ಯಾದಿ ಸೌಲಭ್ಯಗಳನ್ನು ನಮ್ಮ ಪೂರ್ವಜರೂ ಕಂಡೇ ಇರಲಿಲ್ಲ! ಗೈನೊಕಾಲಜಿಸ್ಟ್, ಪೀಡಿಯಾಟ್ರಿಷಿಯನ್ ಇತ್ಯಾದಿ ವೈದ್ಯಪ್ರಭೇದಗಳನ್ನು ಬಿಡಿ, ಅಂತಹ ಶಬ್ದಗಳನ್ನು ಕೂಡ ನಮ್ಮ ಹಿರಿಯರು ಕೇಳಿದವರಲ್ಲ! ಈಗಿನ ಕಾಲದಲ್ಲಿ ತೀರಾ ಸಾಮಾನ್ಯವೆಂಬಂತೆ ಎಲ್ಲ ಕಡೆಯಲ್ಲಿಯೂ ಲಭ್ಯವಿರುವ ಎಪಿಡ್ಯುರಲ್, ಸಿಸೇರಿಯನ್ ಡೆಲಿವರಿ ಎಂಬಿತ್ಯಾದಿ ಯಾವ ಸುಖ ಪ್ರಸವವ್ಯವಸ್ಥೆಗಳನ್ನೂ ನಮ್ಮ ಪೂರ್ವಜರು ಪಡೆದಿರಲಿಲ್ಲ! ಆದರೂ ಹತ್ತಾರು ಮಕ್ಕಳನ್ನು ಮನೆಯಲ್ಲಿಯೇ ಹೆತ್ತು, ಬೆಳೆಸಿ, ಕಷ್ಟಪಟ್ಟು ದುಡಿದು ಸಾಕಿ, ಸಲಹಿದ್ದು ಮಾತ್ರವಲ್ಲದೆ ಇದೀಗ ತಮ್ಮ ಇಳಿವಯಸ್ಸಿನಲ್ಲಿಯೂ ಗಟ್ಟಿಮುಟ್ಟಾಗಿರುವ, ಮನೆಯ ಎಲ್ಲಕೆಲಸಗಳನ್ನೂ ಮಾಡಿಕೊಂಡು ನಮಗಿಂತ ಉತ್ತಮ ಆರೋಗ್ಯದಿಂದಿರುವ ಅನೇಕ ಅಜ್ಜಿಯರು ನಮಗೆ ಇಂದಿಗೂ ಕಾಣಸಿಗುತ್ತಾರೆ! ಆದರೆ ಒಂದೋ ಎರಡೋ ಮಕ್ಕಳನ್ನು ಸುಸಜ್ಜಿತ ಆಸ್ಪತ್ರೆಯಲ್ಲಿ ಹೆತ್ತ ಮತ್ತು ತವರು ಮನೆಯ ಎಲ್ಲ ಆರೈಕೆ, ಸಹಾಯಗಳನ್ನೂ ಪಡೆಯುವ ಆಧುನಿಕ ಅಮ್ಮಂದಿರು ಮಾತ್ರ ಬಲುಬೇಗ ದುರ್ಬಲರಾಗಿ ಬಿಡುತ್ತಿದ್ದಾರೆ! ಬೆನ್ನುನೋವು, ಸೊಂಟನೋವು, ಗಂಟುನೋವು ಇತ್ಯಾದಿ ಅನೇಕ ಸಮಸ್ಯೆಗಳೊಂದಿಗೆ ನಿತ್ಯದ ಮನೆಕೆಲಸಗಳನ್ನು ನಿರ್ವಹಿಸಲೂ ಕಷ್ಟಪಡುತ್ತಿದ್ದಾರೆ! ಯಾಕೆ ಹೀಗೆ?

ಪೂರ್ವಕಾಲದ ಗಂಡಸರೂ ಗಟ್ಟಿಮುಟ್ಟಾಗಿದ್ದರು. ಎದೆಗುಂದದೆ ಎಂತಹ ಕಠಿಣ ಕೆಲಸಗಳನ್ನು ಮಾಡಿಯಾದರೂ ತಮ್ಮ ಸಂಸಾರವನ್ನು ನಡೆಸಿಕೊಂಡು ಹೋಗುತ್ತಿದ್ದರು. ಸಂಪಾದನೆ ಕಡಿಮೆಯಿದ್ದರೂ ಮಡದಿ ಮಕ್ಕಳನ್ನು ಗೌರವಯುತವಾಗಿ ನೋಡಿಕೊಳ್ಳುವ ಧೈರ್ಯ ಸ್ಥೈರ್ಯಗಳಿಗೆ, ಬುದ್ಧಿವಂತಿಕೆಗಳಿಗೆ ಯಾವ ಕೊರತೆಯೂ ಅವರಲ್ಲಿರಲಿಲ್ಲ. ಪ್ರಸ್ತುತ ಕಾಲದಲ್ಲಿ ಕಷ್ಟಪಟ್ಟುದುಡಿಯಲು ಸಿದ್ಧರಿರುವವರು ಸಿಗುವುದು ಅತಿ ವಿರಳ. ಹೆಚ್ಚುಸಂಬಳ ಮತ್ತು ಕಡಿಮೆ ಪರಿಶ್ರಮದ ಉದ್ಯೋಗವನ್ನು ಅರಸುವವರೇ ಹೆಚ್ಚು! ವಾರಕ್ಕೊಂದೆರಡು ರಜೆ ಬೇಕೇ ಬೇಕು. ಸಹಾಯಕರಿಲ್ಲದೆ ಸಣ್ಣಪುಟ್ಟ ಕೆಲಸಗಳನ್ನೂ ಮಾಡಲು ನಮಗೆ ಸಾಧ್ಯವಾಗುವುದಿಲ್ಲ. ಆದರೂ ನಮ್ಮ ಸಮಸ್ಯೆಗಳಿಗೆ ಕೊನೆಯೆಂಬುವುದಿಲ್ಲ. ನೆಮ್ಮದಿಯೆಂಬುವುದು ಇಲ್ಲವೇ ಇಲ್ಲ! ಎಲ್ಲರೂ ಕೆಲಸಗಳ್ಳರೇ ಆದರೆ, ಪರಸ್ಪರ ದೋಷಾರೋಪ, ರಾಜಕೀಯಗಳನ್ನೇ ಮಾಡುತ್ತಾ ಕುಳಿತರೆ

ಯಾವ ಕೆಲಸವಾದರೂ ಹೇಗೆ ನಡೆಯುತ್ತದೆ? ಹಾಗಾಗಿ ಕೆಲಸಕ್ಕೆ ಜನಗಳೇ ಸಿಗುತ್ತಿಲ್ಲ ಎಂಬ ಕೂಗು ಒಂದು ಕಡೆಯಾದರೆ, ನಮಗೆ ಕೆಲಸಗಳೇ ಸಿಗುತ್ತಿಲ್ಲ ಎಂದು ಕೊರಗುವವರು ಮತ್ತೊಂದು ಕಡೆ! ಯಾಕೆ ಹೀಗೆ?

ಒಟ್ಟಿನಲ್ಲಿ ನಮ್ಮ ಬದುಕಿನ ಶೈಲಿ ದಿನೇ ದಿನೇ ಒತ್ತಡಗಳನ್ನು ಅನಗತ್ಯವಾಗಿ ಹೆಚ್ಚಿಸಿಕೊಳ್ಳುತ್ತಿದೆ. ಅನುಕೂಲಗಳು, ಸುಖ ಸವಲತ್ತು ಗಳು ಹೆಚ್ಚಿದಂತೆಲ್ಲ ನಮ್ಮ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳು ಕ್ಷೀಣವಾಗುತ್ತಾ ಬರುತ್ತಿವೆ! ಯಾಕೆ ಹೀಗೆ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನವೂ ನಿರಂತರವಾಗಿ ನಡೆಯುತ್ತಿದೆ. ಆದರೂ ಸಂತೃಪ್ತಿ, ನೆಮ್ಮದಿಯೆಂಬುವುದು ನಮ್ಮ ಬದುಕಿನಲ್ಲಿ ಮರೀಚಿಕೆಯಾಗಿಯೇ ಉಳಿದುಬಿಟ್ಟಿದೆ! ಯಾಕೆ ಹೀಗೆ?





**ಶಿವಶಂಕರಶಾಸ್ತ್ರಿ A**
ಬೆಂಗಳೂರು

# ಕನ್ನಡ ಕೂಟದ 'ಓಡು-ನೆಡಿಗೆ' ಯಲ್ಲಿ ನನ್ನ ಸವಿನೆನಪುಗಳು

**ನಾ**ನು ಬೆಂಗಳೂರಿನಲ್ಲಿ ವಾಸವಾಗಿರುವ ಶಿವಶಂಕರಶಾಸ್ತ್ರಿಯು ನನ್ನ ಶ್ರೀಮತಿ ವಿಶಾಲಾಕ್ಷಿಯವರೊಂದಿಗೆ ಈ ವರ್ಷದ ಜುಲೈ ಮೊದಲವಾರ ಮೋರ್ಗನ್ವಿಲ್ಲೆ ನಲ್ಲಿ ವಾಸವಾಗಿರುವ ನನ್ನ ಮಗಳಾದ ಶುಭ ಶಾಸ್ತ್ರಿ ಮತ್ತು ಅಳಿಯರಾದ ಕಿರಣ್ ಅವರ ಮನೆಗೆ ಬಂದೆವು. ನನ್ನ ಮಗಳು ಕನ್ನಡ ಕೂಟದವರು ಆಯೋಜಿಸಿರುವ 'ಓಡು-ನೆಡಿಗೆ'ಯಾ ಸ್ಪರ್ಧೆಯಲ್ಲಿ ಭಾಗವಹಿಸಲು ನೋಂದಾಯಿಸುವೆ ಎಂದಾಗ ಸ್ವಲ್ಪ ಹಿಂಜರಿಕೆಯಿಂದ ಆಯಿತೆಂದು ತಿಳಿಸಿದೆ. ಆಗಸ್ಟ್ ೨ ರಂದು ಸ್ಪರ್ಧೆಗೆ ಪ್ರಾತಃ ಕಾಲ ೬:೩೦ ಕ್ಕೆ ಮನೆಯಿಂದ ಹೊರಟು ಸ್ಪರ್ಧೆಯ ಸ್ಥಳವಾದ ರೂಸ್ವೆಲ್ಟ್ ಉದ್ಯಾನವನಕ್ಕೆ ಮಗಳು-ಅಳಿಯರ ಜೊತೆ ಬಂದಿಳಿದೆವು.


ಈ ಉದ್ಯಾನವು ತುಂಬಾ ಸುಂದರ, ಸ್ವಚ್ಛ, ಪ್ರಶಾಂತ ಸ್ಥಳ. ಮಧ್ಯದಲ್ಲಿ ಸುಂದರವಾದ ತಿಳಿನೀರಿನ ಕೊಳ. ಇದರ ಸುತ್ತ ಓಡು-ನೆಡಿಗೆಯ ದಾರಿ. ಸ್ವಲ್ಪ ಚುಮು-ಚುಮು ಛಳಿ. ಆಹ್ಲಾದಕರವಾದ ತಿಳಿ ಬಿಸಿಲು, ನೆಡಿಗೆಗೆ ಬಹಳ ಆನಂದಕರವಾದ ವಾತಾವರಣ.

ನಾವು ಆಯೋಜಕರು ತಿಳಿಸಿದ ಸ್ಥಳಕ್ಕೆ ಬಂದು ಸುಂದರವಾದ ನೀಲವರ್ಣದ ಬ್ಯಾಡ್ಜ್ ಪಡೆದೆವು. ಆಗ ಅಲ್ಲಿ ಸೇರಿದ್ದ ಹಿರಿಯರು,ಗಣ್ಯರು,ಕಿರಿಯರು ಹಾಗು ಮಕ್ಕಳು ತಾವೇ ಬಂದು ನನ್ನನ್ನು ಮಾತನಾಡಿಸಿ ಪರಿಚಯ ಮಾಡಿಕೊಂಡರು. ಈ ರೀತಿಯ ಆತ್ಮೀಯ ಪರಿಚಯದಿಂದ ನನಗೆ ನಾವೆಲ್ಲರೂ ಒಂದು ಕುಟುಂಬದ ಸದಸ್ಯರೆಂಬ ಭಾವನೆಯನ್ನುಂಟುಮಾಡಿತು.

ಅನಂತರ ಆಯೋಜಕರು ಓಟ ಅಥವಾ ನೆಡಿಗೆಗೆ ಅನುಕೂಲಕರವಾದ ಕೆಲವು ಲಘು ವ್ಯಾಯಾಮವನ್ನು ಮಾಡಿಸಿದರು. ಇದರಿಂದ ನನಗೆ ಹೊಸ ಚೈತನ್ಯ ಬಂದಿತು. ನಾನು ನನ್ನ ನೆಡಿಗೆಯನ್ನು ಆರಂಭಿಸಿದೆ. ಎಲ್ಲಾ ಸ್ಪರ್ಧಿಗಳು ತುಂಬಾ ಸ್ನೇಹದಿಂದ ನಡೆಯಲು ಆರಂಭಿಸಿದರು. ಸುಮಾರು 5k ನೆಡಿಗೆಯನ್ನು ೫ ಸಲ ಸುತ್ತುವ ಮೂಲಕ ಪೂರ್ಣಗೊಳಿಸಿದೆ. ವಾತಾವರಣ ಆಹ್ಲಾದಕರವಾಗಿದ್ದರಿಂದ ನನಗೆ ದಣಿವಾಗಲಿಲ್ಲ. ಈ ನಡಿಗೆಯ ಸ್ಪರ್ಧೆಯು ಸದಾ ಸವಿನೆನಪಿನಲ್ಲಿರುವ ಸುಂದರ ಘಟನೆ. ನಡಿಗೆಯ ನಂತರ ಕೊಂಚ ವಿಶ್ರಾಂತಿ ಪಡೆದು, ಆಯೋಜಕರು ಏರ್ಪಡಿಸಿದ್ದ ಲಘು ಉಪಹಾರ ಕೊಡುವ ಸ್ಥಳಕ್ಕೆ ಬಂದೆ. ಅಲ್ಲಿ ಪ್ರೀತಿಯಿಂದ ಸ್ವಾಗತಿಸುವ ಪ್ರತಿನಿಧಿಗಳು, ಆಯೋಜಕರು, ಸದಸ್ಯರು ಸ್ನೇಹದಿಂದ ಮಾತನಾಡಿಸಿದರು. ಲಘು ಉಪಾಹಾರದಲ್ಲಿ ಕೊಟ್ಟಿದ್ದ ರುಚಿಕರವಾದ ಪೊಂಗಲ್ ಬಹಳ ಇಷ್ಟವಾಯಿತು. ತದನಂತರ ಕೊಟ್ಟ ಟೀ ತುಂಬಾ ರುಚಿಯಾಗಿತ್ತು. ಬಾಳೆಹಣ್ಣು,ನೀರು,ಜ್ಯೂಸು,ಕುಕೀ ಎಲ್ಲವು ರುಚಿಕರ.

ನಂತರ ಅಕ್ಕ-ಬೃಂದಾವನ ಕನ್ನಡ ಕೂಟದಿಂದ ಆಯೋಜಿಸಿದ್ದ ರಕ್ತದಾನ ಶಿಬಿರ ಬಹಳ ಉತ್ಕೃಷ್ಟ ಕಾರ್ಯ. ರಕ್ತವು ಎಲ್ಲ ರೋಗಿಗಳಿಗೆ ಅತಿ ಅವಶ್ಯಕ. ರಕ್ತದಾನ ಶಿಬಿರದಲ್ಲಿ ಸುಮಾರು ೪೦-೪೫ ಜನ ಸ್ವ ಇಚ್ಚೆಯಿಂದ ರಕ್ತದಾನ ಮಾಡಿದರು. ಈ ಮಹತ್ಕಾರ್ಯದಲ್ಲಿ ನನ್ನ ವಯಸ್ಸಿನಿಂದ ಭಾಗವಹಿಸಲು ಆಗಲಿಲ್ಲವಾದರೂ, ಉಳಿದವರು ಉತ್ಸಾಹದಿಂದ ರಕ್ತದಾನ ಮಾಡುವುದನ್ನು ನೋಡಿ ತುಂಬಾ ಸಂತೋಷವಾಯಿತು.

ಒಟ್ಟಿನಲ್ಲಿ ಆಗಸ್ಟ್ ೨ ರಂದು ಆಯೋಜಿಸಿದ್ದ ಸ್ನೇಹಕೂಟವು ತುಂಬಾ ಅಪ್ಯಾಯಮಾನವಾಗಿತ್ತು. ಇದನ್ನು ಆಯೋಜಿಸಿದವರಿಗೂ, ಭಾಗವಹಿಸಿದವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.








**ಅನಿಲ್ ಭಾರದ್ವಾಜ್**
ನ್ಯೂ ಜೆರ್ಸಿ

# ಮಂಗಳಮೂರ್ತಿಯ ಮಹೋತ್ಸವ

ನ್ಯೂಜೆರ್ಸಿಯ ಸೋಮರ್ಸೆಟ್ ನ ಫ್ರಾಂಕ್ಲಿನ್ ಮಿಡಲ್ ಸ್ಕೂಲ್ ಸೆಪ್ಟೆಂಬರ್ 20ರಂದು ಕನ್ನಡದ ಸಂಸ್ಕೃತಿ–ಸಂಪನ್ನತೆ, ಭಕ್ತಿ–ಭಾವನೆ ಹಾಗೂ ಕಲಾ–ಸೃಜನಶೀಲತೆಯ ಮಿಲನಕ್ಷೇತ್ರವಾಗಿ ಅರಳಿತು. ಬೃಂದಾವನ ಕನ್ನಡ ಕೂಟದ ಸಂಕಲ್ಪ ತಂಡವು ಆಯೋಜಿಸಿದ್ದ ಗಣೇಶೋತ್ಸವ 2025 ಹಬ್ಬದ ಸಂಭ್ರಮವನ್ನು ಹರಡಿತು.

ಆರಂಭದಲ್ಲಿ ಗಣಪತಿಯ ಮಂಗಳಮೂರ್ತಿಯನ್ನು ಭಕ್ತಿಭಾವದಿಂದ ಪೂಜಿಸಲಾಯಿತು. ಸಾಹಿತ್ಯ ಬೃಂದಾವನದ ವತಿಯಿಂದ ನಡೆದ ಸಾಹಿತಿ-ಸನ್ಮಾನ ಕಾರ್ಯಕ್ರಮದಲ್ಲಿ, ಪ್ರಸಿದ್ಧ ಸಾಹಿತಿ–ಪತ್ರಕರ್ತ ಜೋಗಿ ಅವರನ್ನು ಸನ್ಮಾನಿಸಿದ್ದು ಸಮಾರಂಭದ ಗೌರವವನ್ನು ಮತ್ತಷ್ಟು ಎತ್ತರಕ್ಕೆ ಎತ್ತಿತು. ನಂತರ ಎಲ್ಲರೂ ನಿರೀಕ್ಷಿಸುತ್ತಿದ್ದ ಸಾಂಪ್ರದಾಯಿಕ ಬಾಳೆ ಎಲೆಯ ಊಟ. ಅಧಿಕಾರಿಗಳಿಂದ ಕೆಲವು ಅನಿರೀಕ್ಷಿತ ಅಡಚಣೆಗಳು ಬಂದರೂ, ವಿಘ್ನನಾಶಕನ ದಯದಿಂದ ಸ್ವಲ್ಪ ಸಮಯದ ನಂತರ ವಿಶೇಷ ಭೋಜನದ ಕಾರ್ಯ ಸಲೀಸಾಗಿ ನಡೆಯಿತು. ಹೋಳಿಗೆಯ ಹಬ್ಬದ ಊಟ ಅತಿಥಿಗಳ ಮನಸನ್ನುಗೆದ್ದಿತು.

ಕನ್ನಡ ಶಾಲೆಯ ಮಕ್ಕಳ ಮಧುರ ಕಂಠದಿಂದ ಮೊಳಗಿದ ಎರಡು ರಾಷ್ಟ್ರಗೀತೆಗಳು ಮತ್ತುಸಂಕೇತ ಗೀತೆಗಳು ಸಾಂಸ್ಕೃತಿಕ ಕಾರ್ಯಕ್ರಮಕ್ಕೆಚಾಲನೆ ನೀಡಿತು. ಹುಲಿಕೆರೆ ಸಹೋದರಿಯರ ಗಾನದಲ್ಲಿಗಣೇಶನ ಭಕ್ತಿಮಧುರವಾಗಿ ಹರಿದುಬಂದಿತು. ಬೃಂದಾವನ ಸದಸ್ಯರಿಂದ ನಡೆದ ಎಚ್.ಎಸ್. ವೆಂಕಟೇಶಮೂರ್ತಿ ಅವರಿಗೆ ಸಲ್ಲಿಸಿದ ಕಾವ್ಯನಮನವು ಸಂಗೀತ-ಸಾಹಿತ್ಯಪ್ರಿಯರನ್ನು ನೆನಪಿನ ದೋಣಿಯಲ್ಲಿ ಕರೆದೊಯ್ದಿತು.

ಮಕ್ಕಳ ಮುದ್ದಾದ ನೃತ್ಯ, ಯುವಕರ ಚೈತನ್ಯಮಯ ನೃತ್ಯ ಹಾಗೂ ಹಿರಿಯರ ಸೊಗಸಾದ ಹೆಜ್ಜೆಗಳು ವೇದಿಕೆಯ ಮೇಲೆ ಸಾಂಸ್ಕೃತಿಕ ಬಣ್ಣಗಳನ್ನು ಚೆಲ್ಲಿದವು. ಬೃಂದಾವನ ಸದಸ್ಯರ ಚಂಡೆ ವಾದನದ ನಾದವು ಪ್ರೇಕ್ಷಕರ ಹೃದಯದಲ್ಲಿ ಧ್ವನಿಯ ಅಲೆಗಳನ್ನು ಎಬ್ಬಿಸಿತು. ಇದೆ ಶಕ್ತಿ ಮುಂದೆ ಶ್ರೀನಿಧಿ ಹೊಳ್ಳ ಮತ್ತು ಅವರ ಬಳಗದ ಯಕ್ಷಗಾನದಿಂದ ಪ್ರೇಕ್ಷಕರನ್ನು ಕರಾವಳಿಯ ತಾಳ–ರಂಗದ ಲೋಕಕ್ಕೆರವಾನಿಸಿತು.

ಅಂತಿಮ ಘಟ್ಟದಲ್ಲಿ ದೀಪ್ತಿ ಮತ್ತು ಪ್ರಶಾಂತ್ ಅವರ ಸಂಗೀತ ಕಛೇರಿ ಭಾವನಾಸಾಗರದಲ್ಲಿ ಎಲ್ಲರನ್ನೂ ತೇಲಿಸಿತು. ಅವರು ಆಯ್ಕೆಮಾಡಿದ್ದ ಜನಪ್ರಿಯ ಭಾವಗೀತೆಗಳು ಮತ್ತು ಚಲನಚಿತ್ರ ಗೀತೆಗಳು ಹಬ್ಬದ ಸಂಜೆಗೆ ಮೆರಗು ನೀಡಿದವು. ಸಮಾರಂಭದ ಮಧುರ ಕೊನೆಗೆ ರಮೇಶ್ ಭಟ್ ಅವರು ಕೃತಜ್ಞತೆಪೂರ್ಣ ವಂದನಾರ್ಪಣೆ ನೀಡಿ ನೆರೆದ ಅತಿಥಿಗಳನ್ನು ಬೀಳ್ಕೊಟ್ಟರು.

ಈ ಗಣೇಶೋತ್ಸವ ಕೇವಲ ಹಬ್ಬವಲ್ಲ, ಕನ್ನಡದ ಸುಗಂಧವನ್ನು ನ್ಯೂಜೆರ್ಸಿ ನೆಲದಲ್ಲಿ ಹರಡಿದ ಭಾವಗೀತೆ, ಸಂಸ್ಕೃತಿಯ ನವಿಲುಹಕ್ಕಿ ಪಿಸುಗುಡಿದ ರಂಗು, ಎಲ್ಲರ ಮನದ ಮಧುರ ನೆನಪುಗಳ ಹೂವಿನ ಹಾರವಾಗಿ ಉಳಿಯಿತು.








# ಗಣೇಶೋತ್ಸವ


ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ


ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ
KARNATAKA CULTURAL ORGANIZATION
(KCOB) BRINDAVANA
NEW JERSEY, USA


ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ















ಮಲ್ಲಿಕ್ ಪ್ರಸಾದ್
ನ್ಯೂ ಜೆರ್ಸಿ

# ಮಿಲನ (2015 - 16) ತಂಡದ ನೆನಪಿನ ಅಂಗಳದಿಂದ

**ಮೊ**ನ್ನೆ ತಾನೇ ಆರು ತಿಂಗಳ ಹಿಂದೆ ಬೃಂದಾವನ ವಿಂಶತಿ - ಎರಡು ದಶದ ಸಂಭ್ರಮಿಸುತ್ತಿರಿವಾಗ ನನ್ನ ಮನದಲ್ಲಿ ಮಿಲನ ತಂಡದ ಸಮಯದಲ್ಲಿ ನಡೆದ ಸ್ವರಾಸ್ಯಗಳ ನೆನಪಿನ ಅಂಗಳಕ್ಕೆ ಜಾರಿದೆ. ಅದನ್ನ ನಿಮ್ಮ ಮುಂದೆ ಇಡುವ ಅವಕಾಶ ಇಲ್ಲಿದೆ.

ಬೃಂದಾವನದ ದಶಕದ ಸಂಭ್ರಮ ಮುಗಿಸಿದ ನಂತರ, ಬೃಂದಾವನ ಮಿಲನ ತಂಡದ ಅಧ್ಯಕ್ಷರಾಗಿ (2015 -16) ಜವಾಬ್ದಾರಿಯನ್ನು ಸ್ವೀಕರಿಸಿದೆ. ಮಿಲನ ತಂಡ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ 1) ಬೃಂದಾವನ ಕನ್ನಡ ಶಾಲೆ 2) ಸಾಹಿತ್ಯ ಬೃಂದಾವನ,3) ಬೃಂದಾವನ ವಾಣಿ 4) ಬೃಂದಾವನ ಅಕ್ಷರ ಭಂಡಾರ 5) ಯುವ ಬೃಂದಾವನ'ದಂತಹ ಹೊಸ ಚಟುವಟಿಕೆಗಳನ್ನ ಪ್ರಾರಂಭಿಸಿ, ನ್ಯೂ ಜೆರ್ಸಿ ಸ್ವಯಂಸೇವಕ ಸಮೂಹದೊಂದಿಗೆ ಯಶಸ್ವಿಗೊಳಿಸಿದ ಸಾರ್ಥಕ ಬಾವನೆ. ಅಮೇರಿ'ಗನ್ನಡಮ್ಮನ ಕಿರೀಟದಲ್ಲಿ ಮುಕುಟ ಮಣಿಗಳಾದ ಬೃಂದಾವನ ಕನ್ನಡ ಶಾಲೆ ಮತ್ತು ಯುವ ಬೃಂದಾವನ ಮತ್ತಷ್ಟು ಎತ್ತರಕ್ಕೆ ಬೆಳೆದು ಕೀರ್ತಿ ಪತಾಕೆಯಾಗುತ್ತಿದೆ.

ಮಿಲನ ತಂಡದ ನೇತೃತ್ವದಲ್ಲಿ ಹಲವಾರು ಕಾರ್ಯಕ್ರಮಗಳು ನಡೆದವು ಅದರಲ್ಲಿ ಮೆಲಕು ಹಾಕುವಂತ ಕೆಲವು ಅವಿಸ್ಮರಣೀಯ ಘಟನೆಗಳು ನಿಮ್ಮ ಮುಂದೆ...

- ಎರಡನೇ ದಶಕಕ್ಕೆ ಬೃಂದಾವನ ಸದೃಢವಾಗಿ ಕಾಲಿಡುತಿದ್ದಾಗ; ಹೊಸ ಹುಮ್ಮಸ್ಸನ್ನ ತರಬೇಕೆಂಬ ಆಲೋಚನೆ, ಹಂಬಲ ದೊಂದಿಗೆ ಮಿಲನ ತಂಡದ ಮೊದಲ ಮೀಟಿಂಗ್ ನಮ್ಮ ಮನೆ - 'ನಂದನ ವನ'ದಲ್ಲಿ Jan 15 ರಂದು ನಡೆಸಿ ಎಲ್ಲರೊಡನೆ 2 ವರುಷಗಳ ನೀಲಿ ನಕ್ಷೆ ರಚಿಸಿದೆವು !
- ಬ್ರಿಜ್ ವಾಟರ್ ದೇವಸ್ಥಾನದ ಆಡಿಟೋರಿಯಂ ನಲ್ಲಿ ವೆಂಕಟೇಶ್ವರನ ಆಶೀರ್ವಾದದೊಂದಿಗೆ ಮಿಲನ ತಂಡದ ಮೊದಲ ಕಾರ್ಯಕ್ರಮ - ನಗೆ ಹಬ್ಬ Feb 15 ರಂದು ಕಿರ್ಲೋಸ್ಕರ್ ಸತ್ಯ ಮತ್ತು ರಿಚರ್ಡ್ ಲೂಯಿಸ್ ಕನ್ನಡದ ಬಾಂಧವರನ್ನು ನಗೆಗಡಲಲ್ಲಿ ತೇಲಿಸಿದರು
- 800ಕ್ಕೂ ಹೆಚ್ಚು ಹೌಸ್ ಫುಲ್ ಪ್ರದರ್ಶನ ಕಂಡ "ಮುಖ್ಯ ಮಂತ್ರಿ ನಾಟಕ" ಡಾ. ಬಿ ವಿ ರಾಜಾರಾಮ್ ನಿರ್ದೇಶನದ ನೇತೃತ್ವದಲ್ಲಿ ಚಂದ್ರು ಮತ್ತು ಅವರ ವೃಂದದೊಂದಿಗೆ ನಮ್ಮ ೧೦ ಸ್ಥಳೀಯ ಕಲಾವಿದರೂ ಸೇರಿ ನ್ಯೂ ಜೆರ್ಸಿ ಯಲ್ಲಿ June 2nd ರಂದು ನಾಟಕ ಭರ್ಜರಿ ಪ್ರದರ್ಶನ ಕಂಡಿತು.
- Aug 22, 2015 ರಂದು ಸೂಪರ್ ಹಿಟ್ ಚಲನಚಿತ್ರ "ರಂಗಿತರಂಗ" ನಿರ್ದೇಶಕ ಅನೂಪ್ ಭಂಡಾರಿ ಮತ್ತು ತಮ್ಮ ನಾಯಕ ನಟ ನಿರೂಪ್ ಭಂಡಾರಿ; ಪ್ರೊಡ್ಯೂಸರ್ ಮತ್ತು ಡಿಸ್ಟ್ರಿಬ್ಯೂಟರ್ ಜೊತೆ ನ್ಯೂ ಜೆರ್ಸಿ ಯಲ್ಲೇ ಒಡನಾಡುವ ಅವಕಾಶ ಸೊಗಸಾಗಿತ್ತು
- ಉಪ್ಪಿ - ರಿಯಲ್ ಸ್ಟಾರ್ ಉಪೇಂದ್ರ ಅವರು ನ್ಯೂ ಯಾರ್ಕ್'ಗೆ ಆಗಮಿಸಿದ್ದರು ! ನ್ಯೂ ಜೆರ್ಸಿ ಎಡಿಸನ್ ಚಿತ್ರಮಂದಿರದಲ್ಲಿ ಉಪ್ಪಿ-2 Sept 24ರಂದು ಉಪ್ಪಿ ಜೊತೆ ನೋಡುವ ಅವಕಾಶ; Sept 25ರ ಸಂಜೆ ಉಪ್ಪಿ ಜೊತೆ ಪಾರ್ಟಿ; ಒಂದು ಅಮೋಘ ಅನುಭವವೇ ಸರಿ...
- ಸೆಪ್ಟೆಂಬರ್ 4, 5 ರಿಂದ 6, 2015 ರೇಲಿ, ನಾರ್ತ್ ಕ್ಯಾರೊಲಿನಾದಲ್ಲಿ ನಡೆದ 3ನೇ ನಾವಿಕಾ - ವಿಶ್ವ ಕನ್ನಡ ಸಮ್ಮೇಳನದಲ್ಲಿ 75 ಜನರ ನ್ಯೂ ಜೆರ್ಸಿ'ಯ ಗುಂಪು ಪ್ರಣಯ ರಾಜ - ಶ್ರೀನಾಥ್ ಅವರ ಕನ್ನಡ ಚಿತ್ರ ರಂಗದ ಮೈಲಿಗಲ್ಲನ್ನು ಸಂಭ್ರಮಿಸಿದ ಸವಿ ನೆನಪು
- 2015ರ ಶರದ್ ಋತುವಿನಲ್ಲಿ 55 ಕಂದಮ್ಮಗಳು ಸೌತ್ ಬ್ರುನ್ಸ್ವಿಕ್ 'ನಲ್ಲಿ ಮೊದಲ ಕನ್ನಡ ಶಾಲೆಯಲ್ಲಿ ಕನ್ನಡ ಕಲಿಯಲು ಆರಂಭಿಸಿದ ನೆನಪು ಇಂದಿಗೂ ಶಾಶ್ವತ! ತದನಂತರ ಎಡಿಸನ್, ಈಸ್ಟ್ ವಿಂಡ್ಸರ್ ಶಾಲೆ ಉತ್ಸಾಹಿತ ಶಾಲಾ ಸ್ವಯಂಸೇವಕರ ಸಹಕಾರದಿಂದ ಚಲನೆಗೊಂಡಿತು . 9 ವರುಷಗಳಲ್ಲಿ ಅಧ್ಯಕ್ಷರು, ತಂಡಗಳು ಅತಿ ಅಕ್ಕರೆಯಿಂದ ಪೋಷಿಸಿ ಇಂದಿಗೆ ೮ ಶಾಲೆಗಳು, ೨೫೦ ಮಕ್ಕಳು, ಸ್ವಯಂಸೇವಕ ಶಿಕ್ಷರ ವೃಂದದಿಂದ ಕನ್ನಡದ ಕಾಯಕಲ್ಪ ನಿರಂತರವಾಗಿ ನಡೆಯುತ್ತಿದೆ ಎಂಬುದು ತುಂಬಾ ಸಂತೋಷ ತರುವ ಸಂಗತಿ
- ಸನ್ಮಾನ್ಯ ಕರ್ನಾಟಕ ಸರ್ಕಾರ ಆರೋಗ್ಯ ಸಚಿವರಾದ ಶ್ರೀ. ಯು . ಟಿ ಖಾಧರ್ ಅವರು ನ್ಯೂ ಯಾರ್ಕ್'ಲ್ಲಿ ನಡೆಯುತ್ತಿದ್ದ UN Health Conferenceಗೆ ಆಗಮಿಸಿದ್ದಾಗ Nov 8thರಂದು ಅರೋಗ್ಯ ಸಚಿವರ ಸನ್ಮಾನ ಕಾರ್ಯಕ್ರಮ ಡಾ. ರಾಮ್ ಬೆಂಗಳೂರು,ಶ್ರೀ ಸಾಯಿ ಗೌಡರ ನೇತೃತ್ವದಲ್ಲಿ ನಡೆಸಿದ್ದು ಒಂದು ಅನುಭವವೇ ಸರಿ

- Jan 17, 2016 ರಂದು"ಜೋಗದ ಸಿರಿ ಬೆಳಕಿನಲ್ಲಿ" ಕವಿತೆಯ ಖ್ಯಾತಿಯ ಶ್ರೀ. ನಿಸಾರ್ ಅಹ್ಮದ್ ಅವರನ್ನ ಭೇಟಿ ಮಾಡುವ ಅವಕಾಶ "ಪ್ರಸ್ತಾಪ'ದ ಜೊತೆ ಒದಗಿ ಬಂತು, ಶ್ರೀ. ನಿಸಾರ್ ಅಹ್ಮದ್ ಅವರ ಜೊತೆಗಿನ ಅಂದಿನ ಸಂವಾದ ಇಂದಿಗೂ ಸ್ಮರಣೀಯ.
- ಇನ್ಫೋಸಿಸ್ ಪಿತಾಮಹ ಶ್ರೀ. ನಾರಾಯಣ ಮೂರ್ತಿಗಳು May 7th ರಂದು ಬೆಟ್ಟಿ ಮಾಡುವ ಸದವಕಾಶ ದೊರೆತಿತ್ತು; ಮೂರ್ತಿಗಳು ಮತ್ತು ಮೈಸೂರಿನ ಏನ್ ಐ ಈ ಇಂಜಿನಿಯರಿಂಗ್ ಕಾಲೇಜ್'ನ ಹಳೆಯ ವಿದ್ಯಾರ್ಥಿಗಳೆಲ್ಲಾ ನ್ಯೂ ಜೆರ್ಸಿ'ಯಲ್ಲಿ ಸೇರಿ ದೇಣಿಗೆ ಎತ್ತಿ ಹೊಸ ಕಟ್ಟಡಕ್ಕೆ ನಾಂದಿ ಹೇಳುವ ಆ ಸುಸಂದರ್ಭ ಮತ್ತು ಅವರ ಜೊತೆ ಒಡನಾಟ ಒಂದು ಸುಂದರ ಸಂಜೆ
- May 8ರಂದು ಹೊಸ ಬಗೆಯ ಚಿತ್ರಕ್ಕೆ ಹೆಸರಾದ ನಿರ್ದೇಶಕ ಪವನ್ ಕುಮಾರ್'ಅವರ "ಯು-ಟರ್ನ್" ಚಿತ್ರವನ್ನು ನಾಯಕಿ ಶ್ರದ್ಧಾ ಶ್ರೀನಾಥ್, ನಾಯಕ ರೋಜರ್ ನಾರಾಯಣ್ ಜೊತೆ ಸಿನಿಮಾ ನೋಡುವ ಅವಕಾಶ ನ್ಯೂ ಜೆರ್ಸಿ ಕನ್ನಡಿಗರಿಗೆ ದೊರೆತಿತ್ತು
- ಬೃಂದಾವನದ July 9 ಪಿಕ್ನಿಕ್ - ವನ ವಿಹಾರ'ದಲ್ಲಿ ಮೊದಲ ಬಾರಿಗೆ ದೋಸೆ ಕ್ಯಾಂಪ್ ! ನಮ್ಮ ವುಡ್ ಲ್ಯಾಂಡ್ಸ್ ಲೋಕೇಶ್ ತಯಾರಿಸಿದ ತರಾವರಿ ದೋಸೆ… ಹಲವಾರು ಬೃಂದಾವನ ಮಿತ್ರರ ಪ್ರೀತಿ ಪಾತ್ರವಾಗಿ ಸೂಪರ್ ಹಿಟ್ ಆಗಿತ್ತು
- ಸೆಪ್ಟೆಂಬರ್ 2, 3 & 4 2016ರಂದು ಬೃಂದಾವನ ಮತ್ತು ಹತ್ತಿರದ ಕನ್ನಡ ಸಂಘಗಳ ಆಶ್ರಯದಲ್ಲಿ ಅಟ್ಲಾಂಟಿಕ್ ಸಿಟಿ ನಗರದಲ್ಲಿ **ಆದ್ದೂರಿ ೯ನೇ ಅಕ್ಕ - ವಿಶ್ವ ಕನ್ನಡ ಸಮ್ಮೇಳನ ಯಶಸ್ವಿಯಾಗಿ ನಡೆಯಿತು!** . ನಮ್ಮ ಮಿಲನ ತಂಡ, ಬೃಂದಾವನದ ಸದಸ್ಯರು ಹಲವಾರು ಜವಾಬ್ದಾರಿಗಳನ್ನು ಹೊತ್ತು ಸಮ್ಮೇಳನ ಅಮೋಘವಾಗಿ ನಡೆಸಲು ಎಲ್ಲ ರೀತಿಯಲ್ಲೂ ಕೈ ಜೋಡಿಸಿ ಯಶಸ್ಸಿನ ಪಾತ್ರದಾರಿಗಳಾದರು.
- **ಅಕ್ಕ** ಸಮ್ಮೇಳನದಲ್ಲಿ ಕನ್ನಡ ಚಲನ ಚಿತ್ರ ರಂಗದ ದಿಗ್ಗಜರ ಜೊತೆ **ರೆಬೆಲ್ ಸ್ಟಾರ್ ಅಂಬರೀಷ್** ಅವರಿಗೆ ಲೈಫ್ ಟೈಮ್ ಅಚಿವೆಮೆಂಟ್ ಪ್ರಶಸ್ತಿ ಪ್ರಧಾನ ಸಮಾರಂಭ
- Oct 28ರಂದು ಜನಪ್ರಿಯ ಮುಖ್ಯ ಮಂತ್ರಿ ಕುಮಾರಸ್ವಾಮಿ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರ ಚೊಚ್ಚಲ ಚಿತ್ರ - ಜಾಗ್ವರ್; ನಿಖಿಲ್ ಅವರ ಜೊತೆಗೂಡಿ ಚಲನ ಚಿತ್ರ ನೋಡುವ ಅವಕಾಶ; ನಂತರ ಸಂಭ್ರಮ ಕೂಟ ದಲ್ಲಿ ಮುಖ್ಯ ಮಂತ್ರಿ ಕುಮಾರ ಸ್ವಾಮಿ, ಕೇಂದ್ರ ಸಚಿವ ಪುಟ್ಟ ರಾಜು ಮತ್ತು ಇತರ ಗಣ್ಯರ ಜೊತೆ ಜಾಗ್ವರ್ ಚಿತ್ರ ಸಂಭ್ರಮಾಚರಣೆ ಅಂದಿನ ಸಂಜೆಗೆ ಮೆರೆಗು ನೀಡಿತ್ತು.

2015 - 16 ಎರೆಡು ವರುಷಗಳ ಸತತ ಉನ್ನತ ಕಾರ್ಯಕ್ರಮಗಳ ಮತ್ತು ಅನೇಕ ಹೊಸ ಕೈಂಕರ್ಯಗಳೊಂದಿಗೆ ನ್ಯೂ ಜೆರ್ಸಿಯಲ್ಲಿ ಕನ್ನಡ ಚಟುವಟಿಕೆಗಳ ಭರಾಟೆ ಜೋರಿತ್ತು, ಅದಕ್ಕೆ ಕಾರಣೀಕೃತರಾದ ನಮ್ಮ ಮಿಲನ ತಂಡದ ಸದಸ್ಯರು, ಸ್ವಯಂ ಸೇವಕರು, ಉತ್ಸಾಹಿ ಕನ್ನಡ ಸ್ನೇಹಿತರ ಕೊಡುಗೆಗೆ ಮತ್ತು ಪ್ರೋತ್ಸಾಹಕ್ಕೆ ಇಂದಿಗೂ ನಾನು ಋಣಿ.








**ಗೀತಾ ಭಟ್**
ಬೆಂಗಳೂರು

# ಮನಸ್ಸಾಗಿದೆ ಮತ್ತೊಮ್ಮೆ

**ಹೊ**ರಗೆ ಧೋ ಎಂದು ಮಳೆ ಸುರಿಯುವಾಗ ಬೆಚ್ಚಗೆ ಬೆಂಕಿಯ ಒಲೆಯ ಮುಂದೆ ಕುಳಿತು ಹಲಸಿನ ಬೇಳೆ, ಗೇರು ಬೀಜಗಳನ್ನು ಸುಟ್ಟು ತಿನ್ನುವ ಮನಸ್ಸಾಗಿದೆ ಮತ್ತೊಮ್ಮೆ...!

ಮನೆಯ ಹಿಂದಿನ ಧರೆಯ ಮಡಿಲಲ್ಲಿ ಸೊಕ್ಕತ್ತಿ ಬೆಳೆದ ಕೇಸುವಿನ ಕರಕಲಿಯನ್ನುಂಡು ಅಜ್ಜಜ್ಜಿಯ ಕೆಂಪಿ ಸೀರೆಯ ಮುಗ್ಗು ಕಂಪಿನ ದುಪ್ಪಟಿಯೊಳಗೆ ಮುದುರಿ ಮಲಗಿ ಈ ಜಗವನ್ನೇ ಮರೆಯುವ ಮನಸ್ಸಾಗಿದೆ ಮತ್ತೊಮ್ಮೆ...!

ಜಿಟಿ ಜಿಟಿ ಮಳೆಯಲಿ ಮತ್ತೆ ಕೊಡೆ ಹಿಡಿದು ಕಪ್ಪು ಟಾರ್ ರೋಡ್ ಅಂಚಿನಲ್ಲಿ ಹರಿಯುವ ನೀರಿನೊಂದಿಗೆ ಕಾಲು ಅಡ್ಡ ಇಟ್ಟು ಆಟ ಆಡುತ್ತ ಶಾಲೆಗೆ ಮರಳುವ ಮನಸ್ಸಾಗಿದೆ ಮತ್ತೊಮ್ಮೆ....!

ಮಳೆ ಗಾಳಿಗೆ ಆಗಾಗ ದಿಕ್ಕು ಬದಲಿಸೋ ಬಿಕ್ಕೆ ಗುಡ್ಡದ ತುದಿ ಏರಿದ 'ಅಂಟೆನ್ನಾ' ವನ್ನು ಸಿಗ್ನಲ್ ಎಡೆಗೆ ತಿರುಗಿಸಿ ಮಳೆಗಾಲದಲ್ಲಿ ಅಪರೂಪರೂಪಕ್ಕೆ ಇಣಕುವ ವಿದ್ಯುತ್ ದೀಪದ ಕೆಳಗೆ ಕುಳಿತು ದೂರದರ್ಶನದಲ್ಲಿ ಬರುತ್ತಿದ್ದ 'ಚಿತ್ರಹಾರ' ವನ್ನ ಕಣ್ಣು ತುಂಬಿಸಿಕೊಳ್ಳುವ ಮನಸ್ಸಾಗಿದೆ ಮತ್ತೊಮ್ಮೆ....!

ಮತ್ತೆ ಮಗುವಾಗಿ ಮನೆಯ ದಪ್ಪ ಕಂಬವನ್ನೊಮ್ಮೆ ಅಪ್ಪಿ ಹಿಡಿದು ಒಡಹುಟ್ಟಿದವರೊಟ್ಟಿಗೆ 'ಕಂಬ ಕಂಬ' ದ ಆಟ ಆಡಬೇಕೆನಿಸಿದೆ ಮತ್ತೊಮ್ಮೆ....!

ಶೀಗೆ ಪುಡಿಯಿಂದ ಮೈಯನ್ನ ಉಜ್ಜಿ ಸ್ನಾನ ಮಾಡಿಸುವಾಗ ಅಜ್ಜಜ್ಜಿ ಹೇಳುತ್ತಿದ್ದ 'ಕೊಳ್ಳಿ ದೆವ್ವ' ದ ಕಥೆಯನ್ನ ಕೇಳುವ ಮನಸ್ಸಾಗಿದೆ ಮತ್ತೊಮ್ಮೆ....!

ಶ್ರಾವಣ ಮಾಸದಲ್ಲಿ ಅಜ್ಜ ತಪ್ಪದೆ ಮಾಡುತ್ತಿದ್ದ ದೇವಿ ಪಾರಾಯಣ ಪೂಜೆಯ ಮುಕ್ತಾಯದ ಶಾಸ್ತ್ರವಾದ ಹಸ್ತೋದಕದೊಂದಿಗೆ ಪಾದಗಳನ್ನ ತೊಳೆಸಿಕೊಂಡು ಅಜ್ಜನಿಗೆ ಹರಸುವ 'ಪುಟ್ಟ ದುರ್ಗೆ' ಯಾಗಬೇಕೆಂದು ಮನ ಬಯಸುತ್ತಿದೆ ಮತ್ತೊಮ್ಮೆ.......!

ತಲೆ ಸವರಿ ಮುದ್ದಿಸುವ ಅಮ್ಮಮ್ಮನ ಮಡಿಲ ಕೂಸಾಗುವ ಆಸೆ ಮನಕ್ಕೇರಿದೆ ಮತ್ತೊಮ್ಮೆ.....!

ಬಾಲ್ಯ ಮರುಕಳಿಸಬಾರದೇ ಅನಿಸೋ ಈ ವಯಸ್ಸಿನಲ್ಲಿ ಕೈಯ್ಯಲಿರೋ ಮೊಬೈಲ್ ನ್ನು ಮರೆತು ಅಂಚೆ ಅಣ್ಣನ ಬರುವಿಕೆಗಾಗಿ ಕಾಯುವ ಮನಸ್ಸಾಗಿದೆ ಮತ್ತೊಮ್ಮೆ....!

ಹೃದಯದಲ್ಲಿ ಅಚ್ಚೊತ್ತಿರೋ ಕಳೆದ ಬಾಲ್ಯದ ಸುಂದರ ಕ್ಷಣಗಳ ಹಳೆ ನೆನಪುಗಳ ಚಿತ್ರ ಪಟಗಳಿಗೆ ಇವತ್ತಿನ ಫಿಲ್ಟರ್ ಪಟಗಳು ಸರಿಸಾಟಿಯಾಗಿ ನಿಲ್ಲಲು ಸಾಧ್ಯವೇ ಅನ್ನಿಸುತ್ತಿದೆ ಮತ್ತೊಮ್ಮೆ... ಮಗದೊಮ್ಮೆ!





**ಉಷಾ ಗಣಪತಿ**
ನ್ಯೂ ಜೆರ್ಸಿ

# ರಾಯರ ಆರಾಧನೆ

ಶ್ರೀ ಕೃಷ್ಣಾಯ ನಮಃ

**ಪೂ**ಜ್ಯಾಯ ರಾಘವೇಂದ್ರಾಯ ಸತ್ಯಧರ್ಮ ರಥಯಾಚಾ
ಭಜಾತಾಮ್ ಕಲ್ಪವೃಕ್ಷಾಯ ನಮತಾಮ್ ಕಾಮಧೇನುವೇ

ಈ ಶ್ಲೋಕ ಕೇಳಿದ ಕ್ಷಣವೇ ಮೈ ರೋಮಾಂಚನ ಗೊಳ್ಳುವ ನಮ್ಮ ನಿಮೆಲ್ಲರ ಕಲಿಯುಗದ ಕಾಮಧೇನು, ನಮ್ಮ ಪ್ರೀತಿಯ ರಾಯರು ನಮ್ಮ ಕಣ್ಣು ಮುಂದೆ ಬಂದು ನಿಲ್ಲುತಾರೆ. ಅಮೇರಿಕಾ ದೇಶದ ನ್ಯೂಜೆರ್ಸಿ ರಾಜ್ಯದ ಎಡಿಸನ್ ನಗರದಲ್ಲಿ ಇರುವ ನಮ್ಮ ಪುತ್ತಿಗೆ ಮಠದ ಶ್ರೀ ಕೃಷ್ಣ ವೃಂದಾವನಕ್ಕೆ ನಮ್ಮ ಹೃದಯ ಪೂರ್ವಕ ನಮಸ್ಕಾರಗಳು. ಇಲ್ಲಿ ನಡೆಯುವ ಅನೇಕ ಕಾರ್ಯಕ್ರಮದಲ್ಲಿ, ರಾಯರ ಆರಾಧನೆಯ ಮಹೋತ್ಸವ ಒಂದು ವಿಶೇಷ.



ಪ್ರತಿ ವರ್ಷ ಶ್ರಾವಣ ಮಾಸದ ಕೃಷ್ಣ ಪಕ್ಷದ ದ್ವಿತೀಯ ತಿಥಿಯ ದಿನದಂದು ರಾಯರ ಆರಾಧನೆ. ಈ ವರ್ಷ ಆಗಸ್ಟ್ ೧೦ ಭಾನುವಾರದಂದು ರಾಯರ ಆರಾಧನೆಯ ಮಹೋತ್ಸವ ಬಹಳ ವಿಜ್ರಂಭಣೆ ಯಿಂದ ನಡೆಯಿತು.

ಬೆಳಗೆ ೮.೦೦ ಗಂಟೆಗೆ ಮಹಾಸಂಕಲ್ಪ ದಿಂದ ಆರಂಭವಾಗಿ ಅಭಿಷೇಕ, ಮಹಾಪೂಜೆ. ರಾಯರ ಅಷ್ಟೋತ್ತರ, ಮಂಗಳಾರತಿ ಹಾಗು ಮಹಾಪ್ರಸಾದ ದೊಂದಿಗೆ ಬೆಳಗಿನ ಕಾರ್ಯಕ್ರಮ ಮುಗಿಯಿತು ಇದನ್ನು ವೀಕ್ಷಿಸಲು ಜನಗಳ ಸಮೂಹವೇ ಹರಿದು ಬಂದಿತ್ತು.



ಇದು ಇಲ್ಲಿಗೇ ಮುಗಿಯಲಿಲ್ಲ, ಮತ್ತೆ ಸಾಯಂಕಾಲವು ಮುಂದುವರೆದು ಭಜನೆ, ಮಹಾಪೂಜೆ, ಉತ್ಸವ, ಪ್ರವಚನ, ಹಾಗು ಪ್ರಸಾದ ದೊಂದಿಗೆ ರಾಯರ ಆರಾಧನಾಮಹೋತ್ಸವ ಕಾರ್ಯಕ್ರಮ ಕೊನೆಗೊಂಡಿತು.

ಈ ದಿನದ ರಾಯರ ಆರಾಧನೆ, ನನಗೆ ಮತ್ತು ನನ್ನ ಮಗಳಿಗೆ ಬಹಳ ವಿಶೇಷವಾಗಿತ್ತು. ಸಾಯಂಕಾಲದ ಪೂಜೆ ಸಮಯದಲ್ಲಿ, ನೃತ್ಯ ಸೇವೆ ಸಲ್ಲಿಸುವ ಅವಕಾಶವನ್ನು ಶ್ರೀಕೃಷ್ಣ ಪರಮಾತ್ಮನು ಮಾಡಿಕೊಟ್ಟದು ನಮ್ಮ ಪುಣ್ಯ. ಇದು ನಮ್ಮ ಒಂದು ಸಣ್ಣ ಅಳಿಲು ಸೇವೆ. ಆದರೆ ಅದರ ಆನಂದ ಹೇಳಲು ಅಸಾಧ್ಯ.



ನಮ್ಮ ಕೃಷ್ಣ ವೃಂದಾವನದ ಎಲ್ಲ ವಿಶೇಷ ಕಾರ್ಯಕ್ರಮಗಳ ಒಂದು ಸುವರ್ಣ ಅವಕಾಶಕ್ಕೆ ಕಾರಣರಾದ ನಮ್ಮ ನಿಮ್ಮೆಲರ ಪ್ರೀತಿಯ ಶ್ರೀಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಹಾಗು ಶ್ರೀ ಯೋಗಿಂದ್ರ ಭಟ್ ರವರಿಗೆ ಸಾಷ್ಟಾಂಗ ನಮಸ್ಕಾರ್ ಗಳು.



**ಎಂ ಆರ್ ಮಹೇಶ್**
ನ್ಯೂ ಜೆರ್ಸಿ

# ಎಸ್ ಕೆ ವಿ ಶ್ರೀಕೃಷ್ಣ ವೃಂದಾವನ ಎಡಿಸನ್ ನ್ಯೂಜೆರ್ಸಿ - ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ಜಯಂತಿ ಮಹೋತ್ಸವ



**ಉ**ಡುಪಿ ಪರಂಪರೆಯ ಶ್ರೀಕೃಷ್ಣ ದೇವಾಲಯ ಶ್ರೀಕೃಷ್ಣ ವೃಂದಾವನದಲ್ಲಿ ಈ ವರ್ಷದ ಶ್ರೀಕೃಷ್ಣ ಜಯಂತಿ ಮಹೋತ್ಸವವನ್ನು ಎರಡು ದಿನಗಳ ಕಾಲ ಭಕ್ತಿ, ಸಂಸ್ಕೃತಿ ಮತ್ತು ಸಂತೋಷದ ಸಡಗರದೊಂದಿಗೆ ಆಚರಿಸಲಾಯಿತು. ಆಗಸ್ಟ್ 16 ಮತ್ತು 17ರಂದು ನೂರಾರು ಭಕ್ತರು ಭಾಗವಹಿಸಿ ಶ್ರೀಕೃಷ್ಣನ ಜನ್ಮೋತ್ಸವವನ್ನು ಭಾವಪೂರ್ಣವಾಗಿ ಕೊಂಡಾಡಿದರು.

**ದಿನ 1 – ಶ್ರೀಕೃಷ್ಣ ಜಯಂತಿ (ಶನಿವಾರ, ಆಗಸ್ಟ್ 16, 2025)**

ಬೆಳಗಿನ ಪ್ರಾತಃಪೂಜೆಯಿಂದಲೇ ದೇವಾಲಯ ಪವಿತ್ರ ವಾತಾವರಣದಲ್ಲಿ ಮುಳುಗಿತು. ಮಂಗಳವಾದ್ಯಗಳ ಘೋಷಣೆ, ಹೂವಿನ ಅಲಂಕಾರ, ವೇದಪಠಣ – ಎಲ್ಲವೂ ಕೃಷ್ಣ ಜಯಂತಿಯ ಮಹತ್ವವನ್ನು ಸಾರುತ್ತಿತ್ತು.

ಪೂರ್ವಾಹ್ನದಲ್ಲಿ ನಡೆದ ಮಹಾಪೂಜೆ ಮತ್ತು ವೇದಪಾರಾಯಣವು ಭಕ್ತರಲ್ಲಿ ಶ್ರದ್ಧೆ ಮತ್ತು ಶಾಂತಿಯನ್ನು ತುಂಬಿತು. ಮಧ್ಯಾಹ್ನದ ಬಳಿಕ ಗೀತಾ-ಪಾರಾಯಣದ ಮಧುರ ಧ್ವನಿಯಲ್ಲಿ ದೇವಾಲಯವೇ ಗೀತಾ ತತ್ತ್ವದ ಪ್ರತಿಧ್ವನಿಯಾಯಿತು.

ಸಂಜೆಯ ವೇಳೆ ನಡೆದ ಪೂಜೆ, ಸ್ಯಾಕ್ಸೋಫೋನ್ ಮತ್ತು ಬಾಸುರಿ ನಾದ – ಇವುಗಳೆಲ್ಲವೂ ಭಕ್ತಮನಗಳನ್ನು ಆನಂದಭಾವದಲ್ಲಿ ಮುಳುಗಿಸಿದವು.

ರಾತ್ರಿ ವೃಂದಾವನ ವಾದ್ಯವೃಂದ ತಂಡದ ಭಜನೆಗಳು, ಪಂಚಾಮೃತಾಭಿಷೇಕ ಹಾಗೂ ಮಹಾಪೂಜೆಯೊಂದಿಗೆ ಹಬ್ಬ ತುದಿಗೇರಿತು. ಮಧ್ಯರಾತ್ರಿ ಚಂದ್ರೋದಯ ಕ್ಷಣದಲ್ಲಿ ಭಕ್ತರು ಸಮೂಹವಾಗಿ ಶ್ರೀಕೃಷ್ಣನಿಗೆ ಅರ್ಘ್ಯ ಸಲ್ಲಿಸಿ ಪಾವನ ಜಯಂತಿಯನ್ನು ಭಾವನಾತ್ಮಕವಾಗಿ ಸ್ವಾಗತಿಸಿದರು.

**ದಿನ 2 – ಶ್ರೀಕೃಷ್ಣ ಲೀಲೋತ್ಸವ (ಭಾನುವಾರ, ಆಗಸ್ಟ್ 17, 2025)**

ಭಾನುವಾರ ನಡೆದ ಲೀಲೋತ್ಸವವು ಕುಟುಂಬ ಸಮೇತರಾಗಿ ಭಾಗವಹಿಸಲು ಅನುಕೂಲವಾಗುವಂತೆ ಸಜ್ಜುಗೊಂಡಿತ್ತು. ಮಧ್ಯಾಹ್ನದಿಂದಲೇ ಮಕ್ಕಳಿಗಾಗಿ ಕೃಷ್ಣ-ಥೀಮ್ ಆಧಾರಿತ ಚಿತ್ರಕಲೆ, ವೇಷಭೂಷಣ ಸ್ಪರ್ಧೆಗಳು, ಕಥೆ ಹೇಳುವಿಕೆ, ಪ್ರಶ್ನೋತ್ತರ ಕಾರ್ಯಕ್ರಮಗಳು ಭಕ್ತರನ್ನು ಆಕರ್ಷಿಸಿದವು. ಬಾಲ ಕೃಷ್ಣ ಹಾಗೂ ರಾಧೆಯರ ವೇಷದಲ್ಲಿ ಮುದ್ದಾದ ಮಕ್ಕಳ ಆಟವಾಡುವ ದೃಶ್ಯವು ಗೋಕುಲದ ನೆನಪನ್ನು ತಂದುಕೊಟ್ಟಿತು.

ಸಂಜೆಯ ವೇಳೆಗೆ ಭಜನೆ ಮತ್ತು ಪೂಜೆಗಳು ನಡೆಯಿತು. ಈ ಸಂದರ್ಭದಲ್ಲಿ ಮುಖ್ಯ ಅರ್ಚಕ ಯೋಗೀಂದ್ರ ಭಟ್ ಅವರು ದೈವೀಯ ಉಪನ್ಯಾಸ ನೀಡಿ, ಶ್ರೀಕೃಷ್ಣನ ಜೀವನ ಸಂದೇಶವನ್ನು ನೆನಪಿಸಿದರು. ಅವರು ಹೇಳಿದರು: “ಶ್ರೀಕೃಷ್ಣನು ಕೇವಲ ಪುರಾಣದ ಪಾತ್ರವಲ್ಲ, ಅವನು ಧರ್ಮ, ನೀತಿ ಮತ್ತು ಪ್ರೇಮದ ಪ್ರತಿರೂಪ. ಜಯಂತಿಯ ಈ ಸಂದರ್ಭದಲ್ಲಿ ನಾವು ನಮ್ಮ ಬದುಕನ್ನು ಧರ್ಮಮಾರ್ಗದಲ್ಲಿ ಸಾಗಿಸಲು ಪ್ರತಿಜ್ಞೆ ಮಾಡಬೇಕು”. ಅವರ ಸಂದೇಶವು ಭಕ್ತರನ್ನು ಆಳವಾಗಿ ಪ್ರೇರೇಪಿಸಿತು.

ಕಾರ್ಯಕ್ರಮದ ಅಂತ್ಯದಲ್ಲಿ ಪ್ರಸಾದ ವಿತರಿಸಲಾಯಿತು. ಕುಟುಂಬ ಹಾಗೂ ಸ್ನೇಹಿತರೊಂದಿಗೆ ಭಕ್ತರು ಆ ಪ್ರಸಾದವನ್ನು ಸವಿದು ಪರಸ್ಪರ ಸಂತೋಷ ಹಂಚಿಕೊಂಡರು.











**ಶ್ರೀವಿದ್ಯಾ ಪ್ರಶಾಂತ್**
ನ್ಯೂ ಜೆರ್ಸಿ

# ನ್ಯೂಜೆರ್ಸಿಯಲ್ಲಿ ದಸರಾ ಸಂಭ್ರಮ

**ಅ**ಮೇರಿಕಾದ ನ್ಯೂ ಜೆರ್ಸಿಯಲ್ಲಿ ಸಂಭ್ರಮ - ಸಂತಸದ ನವರಾತ್ರಿ ಬೊಂಬೆ ಹಬ್ಬ ಶಕ್ತಿ ದೇವತೆಯನ್ನು ಆರಾಧಿಸುವ ಶರನ್ನವರಾತ್ರಿ ಹಬ್ಬದ ಆಚರಣೆ ವರ್ಷದಿಂದ ವರ್ಷಕ್ಕೆ ಬಹಳ ವಿಜೃಂಭಣೆಯಿಂದ ನಮ್ಮ ಉತ್ತರ ಅಮೇರಿಕಾದ ನ್ಯೂ ಜೆರ್ಸಿಯ ಬಂಧು - ಬಾಂಧವರ ಮನೆಗಳಲ್ಲಿ ಒಂಭತ್ತು ದಿನಗಳ ಕಾಲ ವಿಶೇಷವಾಗಿ ನವ ವಿಧಗಳಲ್ಲಿ ಪೂಜಿಸಿ ಆಚರಿಸಲಾಗುತ್ತಿದೆ. ಎಲ್ಲರೂ ಶ್ರದ್ಧಾ ಭಕ್ತಿಯಿಂದ ಶ್ರೀ ದುರ್ಗಾದೇವಿಯ ಉಪಾಸನೆಯನ್ನು ಮಾಡಿ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿ, ಮುಂದಿನ ಪೀಳಿಗೆಯೂ ಬೆಳೆಸಬೇಕೆಂಬ ನಿಟ್ಟಿನಲ್ಲಿ ಬದ್ಧತೆ ಮತ್ತು ಗೌರವದಿಂದ ಪೂಜಿಸಿ ಸಂಭ್ರಮಿಸುತ್ತಾರೆ.
















**ಸತೀಶ್ ಹೊಸನಗರ**
ನ್ಯೂ ಜೆರ್ಸಿ

# ಹಬ್ಬಗಳ ಸರಮಾಲೆ

**ಚಿ**ಟಿಪಿಟಿ ಮಳೆ ಕಿಚಿಪಿಚಿ ಕೆಸರು ಅನ್ನೋ ಶ್ರಾವಣದ ಮೇಲೆ ಲೇಖನ ಬರೆಯೋಕೆ ಆಲೋಚಿಸಿದವನಿಗೆ, ಈಗ ಶ್ರಾವಣ ಮುಗಿದು ಭಾದ್ರಪದವೂ ಬಂದಿರೋದು ವಿಶೇಷ. ಇನ್ನೇನು ಆಗಸ್ಟ್ ತಿಂಗಳು ಮುಗಿಯೋದರೊಳಗೆ, ನಮ್ಮ ನ್ಯೂ ಜೆರ್ಸಿ ಕುಟುಂಬಗಳು, ಮಕ್ಕಳಿಗೆ ಶಾಲೆಗಳು ಆರಂಭವಾಗುವುದಕ್ಕಿಂತ ಮುಂಚೆ, ತಮ್ಮ ಕೊನೆಯ ವೆಕೇಶನ್ ಅನ್ನೋ ಕಳೆಯೋ ಹೊತ್ತಿಗಾಗಲೇ ಗಣೇಶ ಬಂದ, ಗಣೇಶ ಹೋದ ಎನ್ನುವಂತಾಗಿದೆ. ಈ ವರ್ಷ ಭಾರತೀಯ ಹಬ್ಬಗಳೆಲ್ಲ ದಾಪುಗಾಲು ಇಟ್ಟುಕೊಂಡು ಬೇಗ ಬೇಗ ಬರುತ್ತಿರೋದನ್ನು ನೋಡಿ, ಮುಂದೆ ನವರಾತ್ರಿ-ದೀಪಾವಳಿಗಳೂ ಬೇಗ ಬರುತ್ತವೆ ಎಂದು ಯೋಚಿಸಿಕೊಂಡರೆ, ಬೇಸಿಗೆಯಲ್ಲಿ ಚಳಿಯಾಗಿ ಮೈ ನಡುಕ ಹುಟ್ಟಲೂ ಬಹುದು.

ಏನಪ್ಪಾ ಇದು ನೋಡ್ ನೋಡ್ತಾನೇ ಸಮ್ಮರ್ ಬಂತು, ಹಂಗೇ ಮಾಯವೂ ಆಗ್ತಾ ಇದೆಯಲ್ಲಾ ಅಂತ ಅನ್ನಿಸಿದ್ದು ಇವತ್ತು ಬೆಳಿಗ್ಗೆ. ನಾನು ಆಗಸ್ಟ್ ತಿಂಗಳನ್ನು ಜೀರ್ಣಿಸಿಕೊಳ್ಳಬೇಕು ಅನ್ನೋ ಅಷ್ಟರಲ್ಲಿ ಅದು ಮುಗಿದೇ ಹೋಯ್ತು. ಈ ಅಮೇರಿಕದ್ ಲೈಫ್ ಬಗ್ಗೆ ಒಂದೇ ಸಾಲ್ನಲ್ಲಿ ಹೇಳ್ಬೇಕು ಅಂದ್ರೆ, ಇಲ್ಲಿ ಬದುಕು ವಾರದಿಂದ ವಾರಕ್ಕೆ ಉರುಳ್ತಾ ಉರುಳ್ತಾ ಕೊನೆಗೆ ತಿಂಗಳು, ವರ್ಷಗಳು ಮುಗಿದು ಹೋಗೋದೇ ಗೊತ್ತಾಗಲ್ಲ. ಇವತ್ತೂ ನಾಳೇ ಅಂತ ಕಾಲ ತಳ್ಳೀ ತಳ್ಳೀ, ವರ್ಷದ ಮೇಲೆ ವರ್ಷ ಉರುಳಿ, ಅದ್ಯಾವ್ದೋ ಹಳೇ ಫೋಟೋ ನೋಡ್ದಾಗ್ಲೇ ಅನ್ನೋದು 'ಓಹ್, ನಾನು ಹಿಂಗಿದ್ನಾ' ಅಂತ!

ನಾವು ಹೋದಲ್ಲಿ ಬಂದಲ್ಲಿ ನಮ್ಮನ್ನು ಉದ್ದೇಶಿಸಿ ಈ ರೀತಿಯ ಪ್ರಶ್ನೆಯನ್ನು ಬಹಳಷ್ಟು ಜನ ಕೇಳಬಹುದು: "ನೀವು ಅಮೇರಿಕದಲ್ಲಿ ಸೆಟ್ಲ್ ಆಗಿದ್ದೀರಾ?" ಅಂತ. ಈ ಪ್ರಶ್ನೆಗೆ ನನಗೆ ಹೇಗ್ ಉತ್ರ ಕೊಡಬೇಕು ಅನ್ನೋದೇ ಗೊತ್ತಾಗಲ್ಲ. ಒಂದು ಕಡೆ 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು, ಕೊನೆಯನೆಂದು ಮುಟ್ಟದಿರು' ಅನ್ನೋ ಚೇತನಾ ನಮ್ದು. ಅದರ ಜೊತೆಯಲ್ಲಿ ಹೋದ ಕಡೆ ನಮ್ಮ ಬೇರುಗಳನ್ನ ಆದಷ್ಟು ಆಳವಾಗಿ ಬಿಟ್ಟು ನೆಲ-ನೀರಿನ ರುಚಿ ನೋಡೋ ಗುಣವೂ ನಮ್ಮದು. ಇದು ನಮ್ಮ ದೇಶವಲ್ಲ ಅನ್ನೋ ವಿದೇಶೀ ಭಾವನೆ ಒಂದು ಕಡೆ, ದಿನೇ ದಿನೇ ನಾವೂ ಇಲ್ಲಿಯವರೇ ಆಗಿ ಹೋಗಿದ್ದೇವೆ ಅನ್ನೋ ಅನಿವಾಸಿಗಳ ಪೆಚ್ಚು ಮೋರೆ ಮತ್ತೊಂದು ಕಡೆ. ಈ ಕಾನ್‌ಫ್ಲಿಕ್ಟ್ ಮೈಂಡ್‌ಸೆಟ್ ಇಟ್ಟುಕೊಳ್ಳೋದನ್ನೇ, 'ಸೆಟ್ಲು ಆಗೋದು' ಅಂತ ಅಂದುಕೊಂಡ್ರೆ, ಹೌದು, ನಾವೆಲ್ಲ ಇಲ್ಲಿ ಸೆಟ್ಲ್ ಆಗಿದ್ದೇವೆ. ನಮ್ಮ ನಮ್ಮ ದಿನಚರಿಯಲ್ಲಿ, ಫ಼ಿಕ್ಸ್ ಆಗಿ ಹೋಗಿದ್ದೇವೆ ಎಂದು ನಿರುಮ್ಮಳವಾಗಿ ಹೇಳಬಹುದು.

ಕೆಲವೊಮ್ಮೆ, "ಶ್ರಾವಣ ಬಂತು ಶ್ರಾವಣ" ಅಂತ ಹಾಡಿಕೊಂಡು ಸಂತೋಷ ಪಡುವ ಮಟ್ಟಕ್ಕೆ ನಾವು ಸೀಮಿತರಾಗಿ ಹೋಗಿದ್ದೇವೇನೋ ಎಂದು ಬೇಸರ ಆಗುತ್ತದೆ. ಬರೀ ಕಿಚಿಪಿಚಿ ಮಳೆ-ಕೆಸರು ಒಂದೇ ಅಲ್ಲ... ಶ್ರಾವಣ ಎಂದರೆ, ಬಾಂಧವ್ಯಗಳ ಪುನರುದಯ. ಅಕ್ಕ-ತಂಗಿಯರು ರಕ್ಷಾಬಂಧನಕ್ಕೆ ಸಿಗುವುದೂ ಈಗ ದುಸ್ತರವಾಗಿದೆ. ಇಂಡ್ಯಾದಲ್ಲಿ ಇದ್ದಿದ್ರೆ, ಅಣ್ಣ-ಅಕ್ಕ ಅಂತ ಎಷ್ಟೋ ಸಂಬಂಧಗಳು ಹುಟ್ಟಿ-ಬೆಳೆಯೋವು, ಅವಕ್ಕೆ ಈ ಅಮೇರಿಕನ್ ಸಮಾಜದಲ್ಲಿ, ದೊಡ್ಡ ಕೊರತೆ ಅಂತಲೇ ಹೇಳಬೇಕು. ಶ್ರಾವಣದ ತರುವಾಯ, ಭಾದ್ರಪದದ ಮುಖ್ಯ ಅತಿಥಿಗಳು, ಗೌರಿ-ಗಣೇಶರು. ಅವರನ್ನು ತಯಾರುಮಾಡಿ, ಆವಾಹನೆ ಮಾಡಿ, ಪೂಜೆ ಮಾಡಿ, ಮತ್ತೆ ಹಿಂತುರುಗಿ ಕಳಿಸಿಕೊಟ್ಟ ಮೇಲೆ, ಸ್ವಲ್ಪ ಗ್ಯಾಪ್... ನಂತರ ಏನಿದ್ದರೂ ನವರಾತ್ರಿಯ ಸಡಗರ. ಅದರ ಬೆನ್ನ ಹಿಂದೆ, ಆಯುಧಪೂಜೆ, ವಿಜಯದಶಮಿ. ನಂತರ ಇಪ್ಪತ್ತು ದಿನಗಳ ತರುವಾಯ ಬರೋದೆ, ದೀಪಾವಳಿ ಹಬ್ಬ.

ನಮ್ಮೂರಲ್ಲಿ ನಾವು ಚಿಕ್ಕವರಿರಬೇಕಾದ್ರೇ ಆಯುಧಪೂಜೆಗೆ ನಮ್ ನಮ್ ಪೆನ್ನೂ, ಪುಸ್ತಕಾ ಎಲ್ಲಾ ಇಟ್ಟು ಅರಿಶಿಣ ಕುಂಕುಮ ಹಚ್ಚಿ 'ಆಯುಧ' ಅನ್ನೋ ಭಾವನೇನಲ್ಲಿ ಪೂಜೆ ಮಾಡ್‌ತಿದ್ವಿ, ಆದ್ರೆ ಇಲ್ಲಿ ಅದೇನನ್ನು ಇಟ್ಟು ಪೂಜೇ ಮಾಡೋಣ ಹೇಳಿ. ಡಾಕ್ಟ್ರುದವರು ಸ್ಟೆತಾಸ್ಕೋಪ್ ಇಟ್ಟು ಪೂಜೆ ಮಾಡ್ತಾರೋ ಏನೋ, ನಾವು ಬೆಳಿಗ್ಗಿಂದ ಸಂಜೇವರೆಗೂ ಕಂಪ್ಯೂಟರ್ ಪರದೇ ನೋಡ್ಕೊಂಡು ಕೀಬೋರ್ಡ್ ಕುಟ್ಟುತಾ ಕೂರೋರು, ಯಾವ್ದಾದ್ರೂ ಹಳೇ ಕಂಪ್ಯೂಟರ್ ಕೀ ಬೋರ್ಡ್ ಇಟ್ಟು ಪೂಜೆ ಮಾಡಿದ್ರೆ, ಹೇಗೆ ಅಂತ ಒಮ್ಮೊಮ್ಮೆ ಯೋಚಿಸ್ತೀನಿ. ಇವತ್ತಿಗೂ ನಮ್ಮನೇನಲ್ಲಿ ದೀಪಾವಳಿಯ ಲಕ್ಷ್ಮೀಪೂಜೆಗೆ, ಭಾರತದ ದುಡ್ಡೂ-ಕಾಸನ್ನೇ ಇಟ್ಟು ಪೂಜೇ ಮಾಡೋರ್ ನಾವು, ಜೊತೆಗೆ ಅಮೇರಿಕನ್ ಡಾಲರ್ರೂ, ಕಾಯಿನ್ನುಗಳನ್ನೂ ಸೇರ್ಸಿಡ್‌ತೀವಿ, ಪಾಪ ಆ ಲಕ್ಷ್ಮಿಗೆ ಎಷ್ಟೊಂದ್ ಕನ್‌ಫ್ಯೂಷನ್ ಆಗುತ್ತೋ ಯಾರಿಗ್ ಗೊತ್ತು?

ದಿನಗಳು ಹೆಂಗೆ ಬರ್ತಾವೋ, ಮತ್ತೆ ಹಂಗೇ ಹೋಗ್ತಾವೇ...ನಾವು ಎಲ್ಲೂ ಸೆಟ್ಲ್ ಆಗಲ್ಲ, ಇಲ್ಲೂ ಇರಲ್ಲ ಅಲ್ಲೂ ಹೋಗಲ್ಲ.

# ಹಬ್ಬ ಹರಿದಿನ

ಅಪರೂಪಕ್ಕೊಮ್ಮೆ ಫ್ರೆಂಡ್ಸ್‌ಗಳು ಸೇರ್ಕೊಂಡಾಗ ಮೊದಲೆಲ್ಲಾ ಗ್ರೀನ್‌ಕಾರ್ಡ್ ಬಗ್ಗೆ ಮಾತಾಡ್ಕೊಂಡು ಹೊಟ್ಟೇ ತುಂಬುಕೊಳ್ತಾ ಇದ್ದ ನಮಗೆ ಇವತ್ತು ಅಮೇರಿಕನ್ ಪಾಲಿಟಿಕ್ಸ್, ಡೆಮೋಕ್ರಾಟ್ಸ್-ರಿಪಬ್ಲಿಕನ್ಸ್ ಬಗ್ಗೆ ನೆನಸಿಕೊಂಡು ಮಾತನಾಡೋ ಸ್ಥಿತಿ ಬಂದಿರೋದನ್ನ ನೋಡಿ, ಇನ್ನೊಂದ್ ಸ್ವಲ್ಪ ದಿನದಲ್ಲೇ 'ನಾನೂ ಅಮೇರಿಕನ್ ಆಗಿ ಬಿಟ್ಟೇ!' ಅನ್ನೋ ಮಾತುಗಳು ದೂರವೇ ಇಲ್ಲ ಅಂತ ಅನ್ಸುತ್ತೆ. ದೂರವಾದ ಅಲ್ಲಿಯದು, ದಿನಗಳು ಕಳೆದಂತೆ ಇನ್ನಷ್ಟು ದೂರವಾಗ್ತಾ ಹೋಗುತ್ತೆ, ಹತ್ತಿರವಾದ ಇಲ್ಲಿಯದು ಯಾವತ್ತಿದ್ರೂ, ಅಷ್ಟೊಂದ್ ಹತ್ರಾ ಬರೋದೇ ಇಲ್ಲ! ಕಮ್ಯೂನಿಟಿ ಸರ್ವೀಸುಗಳಲ್ಲಿ ತೊಡಗಿಸಿಕೊಳ್ಳಬೇಕು, ರಾಜಕೀಯ ಪ್ರೇರಣೆಯನ್ನು ಪಡೆದುಕೊಂಡು ಒಂದು ರೀತಿಯ 'ಆಕ್ಟಿವಿಷ್ಟ್' ಆಗಬೇಕು ಅಂತ ಎಷ್ಟೊಂದು ಸರ್ತಿ ಅನ್ಸುತ್ತೆ. ಸೋಮವಾರದಿಂದ ಶುಕ್ರವಾರದವರೆಗೆ ದುಡಿದು ಶನಿವಾರ, ಭಾನುವಾರ ಬದುಕೋ ನಮಗೆ ಇತ್ತೀಚೆಗೆ ನಮ್ಮೂರಿನಿಂದ ತಂದ ಚಿಕ್ಕಮಗಳೂರು ಕಾಫೀನೂ ರುಚಿಸದೇ, ಇಲ್ಲಿಯ ಕಾಫಿಯ ಪರಿಮಳವೇ ಆಗಬೇಕು ಅನ್ನೋ ಮನಸ್ಥಿತಿಯಲ್ಲಿ ಏನೋ ಕಡಿಮೆ ಆಗಿದೆ ಅಂತ್ಲೇ ನನಗೆ ಅನುಮಾನ. ನಾಲಿಗೆ ರುಚಿ ಹೆಚ್ಚಾಗ್ಲೀ ಅಂತ ಇಡ್ಲೀ-ದೋಸೆ ಮಾಡ್ಕೊಂಡ್ ತಿಂದ್ರೂ ಅದರ ಹಿಂದೇನೂ ಯಾವ್ದೋ ಸಮಾಧಾನ ಅನ್ನೋದೇ ಇಲ್ಲ. ಭಾರತದಲ್ಲಿದ್ದಾಗ ಒಂದೇ ಒಂದು ದಿನ ಓಟ್‌ಮೀಲ್ ತಿನ್ನದ ನಾವು ಇಲ್ಲಿ ಅದನ್ನ ಫುಲ್ ಮೀಲ್ ಮಾಡ್ಕೊಂಡು ತಿನ್ನೋ ಕಾಯಕದಲ್ಲಿ ಯಾಕೋ ಒಂದು ವ್ಯತಿರಿಕ್ತ ಮನಸ್ಥಿತಿ ಕಾಣಿಸ್ತಾ ಇರೋದು ನನ್ನೊಬ್ಬನಿಗೆ ಮಾತ್ರಾ ಅಲ್ಲಾ ತಾನೆ?

ನೀವೇನಾದ್ರೂ ಕೇಳಿದ್ರೆ, "ನೀವ್ ಅಮೇರಿಕದಲ್ಲಿ ಸೆಟ್ಲ್ ಆಗಿದ್ದೀರಾ?" ಅಂತ, ಅದಕ್ಕೇನಂತ ಉತ್ರ ಹೇಳೋಣ? ಹೌದು, ಅಲ್ಲ ಅಂತ ಏನೇ ಉತ್ತರಗಳನ್ನು ಕೊಟ್ರೂ, ಉತ್ತರಕ್ಕೆ ಮತ್ತೆ ಮತ್ತೆ ಬರೋ ಪ್ರಶ್ನೆಗಳನ್ನ ನೆನೆಸಿಕೊಂಡು, ಈ ಎಲ್ಲ ಪ್ರಶ್ನೆಗಳಿಗೆ ನಾನಂತೂ ನಿಖರವಾಗಿ ಉತ್ತರ ಕೊಡದ ಸ್ಥಿತಿಗೆ ಬಂದುಬಿಟ್ಟಿದ್ದೇನೆ ಅಂತ ಸಹಜವಾಗೇ ಹೇಳ್ತೀನಿ. ನಾವು ಇಲ್ಲಿ ಹಬ್ಬಗಳನ್ನು ಆಚರಿಸೋ ರೀತಿ ನೋಡಿದ್ರೆ, ಅದು ಮುಂದೆರಡು ತಲೆಮಾರುಗಳವರೆಗಾದ್ರೂ, ಬರುತ್ತಾ ಅಂತ ಸಂಶಯ ಕೆಲವೊಮ್ಮೆ ಬರುತ್ತೆ.

ಒಂದ್ಸರ್ತಿ, ಸೆಪ್ಟೆಂಬರು, ಅಕ್ಟೋಬರ್‌ಗಳು ಬಂದು ಹೋದ ಮೇಲೆ ಏನಿದ್ರೂ ಇಲ್ಲಿನ ರಜಾದಿನಗಳ ಸುಗ್ಗಿ, ಮುಂಬರುವ ಥ್ಯಾಂಕ್ಸ್ ಗಿವಿಂಗ್, ಕ್ರಿಸ್ಮಸ್, ಹೊಸವರ್ಷ ಇವೆಲ್ಲ ತಮ್ಮ ಒಡಲಲ್ಲಿ ಒಂದಿಷ್ಟು ಸಂತೋಷ ಸಡಗರಗಳನ್ನು ತರುತ್ವೆ. ಯಾವ ಧರ್ಮದವರೇ ಇರಲಿ, ಮಕ್ಕಳಿದ್ದೋರ್ ಮನೇನಲ್ಲಿ ಕ್ರಿಸ್ಮಸ್ ಟ್ರೀ ಇಟ್ಟು ಅಲಂಕಾರ ಮಾಡೋದನ್ನ ನಾನು ನೋಡಿದ್ದೀನಿ, ಅದೂ ಭಾರತೀಯರ ಮನೆಗಳಲ್ಲಿನ ಕ್ರಿಸ್ಮಸ್ ಪರಂಪರೆಯನ್ನು ಕಂಡು ಬೆರಗಾಗಿದ್ದೀನಿ. ಹಾಗೇ, ನಮ್ಮ ಮನೇನಲ್ಲೂ ಪ್ರತಿವರ್ಷ ಅದೇ ಪ್ಲಾಸ್ಟಿಕ್ ಟ್ರೀ ಇಡ್ತೀವಿ.





ಅದನ್ನೇನೂ ವಿಶೇಷವಾಗಿ ಅಲಂಕಾರ ಮಾಡೋಕೆ ಹೋಗೋಲ್ಲ. ಸ್ಯಾಂಟಾ ಬಂದ, ಗಿಫ್ಟ್‌ಗಳನ್ನ ತಂದ ಮಕ್ಕಳೂ ಕಾಯೋ ದಿನಗಳನ್ನೂ ನಾವು ಮೀರಿ ಬಿಟ್ಟಿದ್ದೇವೆ. ಕ್ರಿಸ್ಮಸ್ಸಿಗೆ ಮನೆ ಹೊರಗಡೆ ಲೈಟ್ ಹಾಕ್ತೀವೋ ಬಿಡ್ತೀವೋ, ದೀಪಾವಳಿ ಹಾಗೂ ಯುಗಾದಿ ಹಬ್ಬಗಳಿಗೆ ಹೊರಗಡೆ ಸೀರಿಯಲ್ ಸೆಟ್ ಹಾಕೋದನ್ನ ಮರೆಯೋದಿಲ್ಲ. ದೀಪಾವಳಿ ದಿನಗಳಲ್ಲಿ, ಬಾಗಿಲ ಹೊಸ್ತಿಲ ಬಳಿ, ಒಂದು ಸ್ವಲ್ಪ ಹೊತ್ತಾದ್ರೂ ಕುಡಿಕೆ ದೀಪವನ್ನು ಹಚ್ಚಿಡ್ತೀವಿ. ದೀಪಾವಳಿ ವರ್ಷದ ಯಾವ ದಿನ ಬಂದ್ರೂ ಯಾವ್ದೇ ಪ್ರೊಡಕ್ಷನ್ ಕೆಲ್ಸಾ ಇಲ್ಲಾ ಅಂತಂದ್ರೆ ಅವತ್ತಿನ ದಿನಾ ಒಂದು ರಜೆಯನ್ನು ಬಿಸಾಕಿ ನಮ್ಮ ನಮ್ಮ ಮಟ್ಟಿಗೆ ಹಬ್ಬದ ಆಚರಣೆಯನ್ನೂ ಮಾಡ್ತೀವಿ. ಅದೇ ಲಕ್ಷ್ಮೀ ಪೂಜೆ ಬಗ್ಗೆ ಹೇಳಿದ್ನಲ್ಲಾ, ಅದನ್ನ ಮಾತ್ರ ತಪ್ಪಿಸೋದಿಲ್ಲ ಏನಾದ್ರೂ! ನಾವೇನಾದ್ರೂ ಸತ್ಕರಿಸಿ, ಆದರಿಸಿ ಪೂಜೆ-ಪುನಸ್ಕಾರ ಮಾಡ್ದೇ ಹೋದ್ರೆ, ಆ ಮಹತಾಯಿ ಲಕ್ಷ್ಮಿ ಬೇರೆ ಯಾರದ್ದಾದ್ರೂ ಮನೆಗೆ ಹೋಗಿ ಕೂತು ಬಿಟ್ಟರೆ ಅನ್ನೋ ಹೆದರಿಕೆ ಬೇರೆ.

ಇಂಗ್ಲೀಷ್ ಕ್ಯಾಲೆಂಡರಿನಂತೆ ಬದುಕನ್ನ ಕಟ್ಟಿಕೊಂಡ ನಾವು, ಜನವರಿ ಹದಿನೈದಕ್ಕೆ ಸಂಕ್ರಾಂತಿ ಆಚರಿಸೋದನ್ನ ಮರೆಯೋದಿಲ್ಲ, ಚಳಿ ಇರಲಿ, ಇಲ್ಲದಿರಲಿ ನಾವು ಎಳ್ಳೂ-ಬೆಲ್ಲ ಬೀರೋದೆ ಸೈ. ಮುಂದೆ, ವಸಂತನ ಆಗಮನ ಆಗ್ತಿದ್ದ ಹಾಗೆ ಕಾಮನ ಹಬ್ಬ ಅಂತ ಒಂದಿಷ್ಟು ಮೆಸ್ಸೇಜುಗಳನ್ನು ಕಳಿಸಿ-ಓದೋ ಹೊತ್ತಿಗೆ ಅದು ಮುಗಿದು ಹೋಗಿರತ್ತೆ. ನಮ್ಮ ನಿಜವಾದ ಹೊಸವರ್ಷದ ಹಬ್ಬ ಯುಗಾದಿಯಿಂದ ಖಂಡಿತ ಆರಂಭವಾಗುತ್ತೆ. ಭಾರತದ ಉದ್ದಗಲಕ್ಕೂ ಎಲ್ಲರನ್ನೂ ಕನೆಕ್ಟ್ ಮಾಡೋ ಹಬ್ಬ ಅದು. ಅದನ್ನ ನಾವು ನಮ್ಮ ನ್ಯೂ ಇಯರ್ ಅಂದ್ರೆ, ಇತ್ತೀಚೆಗೆ ಅಮೇರಿಕನ್ನರೂ ನಂಬೋ ಹಾಗೆ ಆಗಿರುವುದು ವಿಶೇಷವೇ ಸರಿ!

ಹಬ್ಬಗಳ ಸರಮಾಲೆಗಳ ಬಗ್ಗೆ ಚಿಕ್ಕ ಲೇಖನ ಬರೆಯೋಕೆ ಹೋದ್ರೆ, ಆಲೋಚನೆಗಳು ದೊಡ್ಡ ದೊಡ್ಡದಾಗಿ ಬರ್ತಾವೆ. ಈ ಲೇಖನದಿಂದಾದ್ರೂ, ಒಂದಿಷ್ಟು ಹಬ್ಬಗಳು ನಿಮ್ಮ ಮನಸ್ಸಿನಲ್ಲಿ ಮುದವನ್ನು ತಂದ್ರೆ ಸಾಕು!



**ಸೌಮ್ಯ ರವಿ**
ನ್ಯೂಜೆರ್ಸಿ

# ರಕ್ಷಾ ಬಂಧನ

**ರ**ಕ್ಷಾ ಬಂಧನ ಅಂದರೆ ನಮಗೆಲ್ಲಾ ತಿಳಿದಿರುವುದು ಸಹೋದರಿಯರು ತಮ್ಮ ಸಹೋದರನಿಗೆ ರಾಖಿ ಕಟ್ಟುವುದು, ಅದಕ್ಕೆ ಸಹೋದರ ನಿನ್ನ ಪ್ರೀತಿ ಮತ್ತು ವಿಶ್ವಾಸಕ್ಕೆ ಬದ್ಧನಾಗಿರುತ್ತೇನೆ ಎಂದು ವಾಗ್ದಾನ ನೀಡುತ್ತ ಉಡುಗೊರೆ ಕೊಡುವುದು.


ಹಿಂದು ಪಂಚಾಂಗದ ಪ್ರಕಾರ ರಕ್ಷಾ ಬಂಧನ ಬರುವದು ಶ್ರಾವಣ ಮಾಸದ ಶುಕ್ಲ ಪಕ್ಷದ ಹುಣ್ಣಿಮೆಯ ದಿನದಂದು ಅಂದರೆ ಸಾಮಾನ್ಯವಾಗಿ ಆಗಸ್ಟ್ ತಿಂಗಳಿನಲ್ಲಿ ಬರುತ್ತದೆ. ಹಿಂದೂ ಪುರಾಣಗಳ ಪ್ರಕಾರ ರಕ್ಷಾ ಬಂಧನಕ್ಕೆ ಅನೇಕ ಕಥೆಗಳಿವೆ. ಆದರೆ ಎಲ್ಲಾ ಕಥೆಗಳ ಮೂಲ ಉದ್ದೇಶ ರಕ್ಷಣೆಯೇ ಆಗಿದೆ.

ಪುರಾಣದ ಪ್ರಕಾರ ರಕ್ಷಾ ಬಂಧನ ಪ್ರಾರಂಭವಾಗಿದ್ದು ಇಂದ್ರನ ಹೆಂಡತಿ ಇಂದ್ರಾಣಿ ತನ್ನ ಪತಿ ಯುದ್ಧಕ್ಕೆ ಹೊರಟಾಗ ಏನು ತೊಂದರೆಯಾಗದಿರಲಿ, ಜಯಶಾಲಿಯಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ ಒಂದು ದಾರವನ್ನು ತನ್ನ ಪತಿಯ ಬಲಗೈಗೆ ರಕ್ಷಣೆಯ ರೂಪದಲ್ಲಿ ಕಟ್ಟುತ್ತಾಳೆ.

ಅದೇ ರೀತಿ ಮಹಾಭಾರತದಲ್ಲಿ ಯುದ್ಧದ ಸಮಯದಲ್ಲಿ ಕೃಷ್ಣನ ಬೆರಳಿಗೆ ಏಟಾದಾಗ ದ್ರೌಪದಿ ತನ್ನ ಸೀರೆಯ ಸೆರಗಿನ ತುಂಡನ್ನು ಕೃಷ್ಣನ ಬೆರಳಿಗೆ ಕಟ್ಟಿ ರಕ್ತದ ಸೋರಿಕೆಯನ್ನು ನಿಲ್ಲಿಸುತ್ತಾಳೆ.

ಈ ಎರಡೂ ಕಥೆಗಳಲ್ಲಿ ತುಂಡು ದಾರ ಅಥವಾ ಬಟ್ಟೆಯನ್ನು ತಮ್ಮ ಪ್ರೀತಿ ಪಾತ್ರರಿಗೆ ಕಟ್ಟುವುದು ತಮಗೆ ಅವರ ಮೇಲಿರುವ ಪ್ರೀತಿ, ಬಾಂಧವ್ಯ ಮತ್ತು ರಕ್ಷಣಾ ಭಾವವನ್ನು ತೋರಿಸುತ್ತದೆ. ಇದು ಕೇವಲ ಸೋಹೊದರ-ಸೋಹೊದರಿಯ ನಡುವಿನ ಆಚರಣೆಯಲ್ಲ, ತಾವು ರಕ್ಷಣೆ ಮಾಡುವ ಮತ್ತು ತಮ್ಮಿಂದ ರಕ್ಷಣೆ ಬಯಸುವ ವ್ಯಕ್ತಿಗಳ ನಡುವಿನ ಆಚರಣೆಯಾಗಿದೆ.

ಹಾಗಯೇ ಈ ರಕ್ಷಾ ಬಂಧನವನ್ನು ಕಟ್ಟುವಾಗ
“ನಾನು ನಿನ್ನನ್ನು ರಕ್ಷಿಸುತೇನೆ, ನೀನು ನನ್ನನ್ನು ರಕ್ಷಿಸು,
ಜೊತೆಗೆ ಇಬ್ಬರು ಸೇರಿ ಧರ್ಮವನ್ನು ರಕ್ಷಿಸೋಣ”
ಎಂದು ಹೇಳುತ್ತಾ ಈ ಮಾತುಗಳೊಂದಿಗೆ ಈ ಬಂಧವನ್ನು ಕಟ್ಟುವ ಮೂಲಕ, ನಾವು ಪರಸ್ಪರ ರಕ್ಷಣೆ ಮಾತ್ರವಲ್ಲ, ಧರ್ಮದ ಉಳಿವಿಗೂ ಬದ್ಧರಾಗಿರೋಣ.
ಧರ್ಮೋ ರಕ್ಷತಿ ರಕ್ಷಿತಃ










**ಭಾಸ್ಕರ್ ತೈಲಗೇರಿ**
ನ್ಯೂ ಜೆರ್ಸಿ

# ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪ



**ಕ**ರ್ನಾಟಕ ಕಂಡ ಸರ್ವಶ್ರೇಷ್ಠ ಕಾದಂಬರಿಕಾರ ಎಸ್. ಎಲ್. ಭೈರಪ್ಪನವರು ಇತ್ತೀಚೆಗೆ ನಮ್ಮನ್ನು ಅಗಲಿದರು. ಅವರಿಗೆ ಈ ಲೇಖನದ ಮೂಲಕ ಶ್ರದ್ಧಾಂಜಲಿ ಅರ್ಪಿಸುವ ಒಂದು ಪ್ರಯತ್ನ.

ಎಸ್. ಎಲ್. ಭೈರಪ್ಪನವರ ಬಗ್ಗೆ ಬರೆಯುವುದು ಅಷ್ಟು ಸುಲಭವಾದ ಕೆಲಸವಲ್ಲ. ಯಾವುದನ್ನು ಬರೆಯುವುದು... ಯಾವುದನ್ನು ಬಿಡುವುದು... ಅವರ ಕಡುಕಷ್ಟದ ಬಾಲ್ಯದ ದಿನಗಳು... ವಾರಾನ್ನ ಮಾಡಿಕೊಂಡು ಪ್ರೌಢಶಾಲೆ ಮುಗಿಸಿದ ಹದಿಹರೆಯದ ದಿನಗಳು... ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಓದಿದ ದಿನಗಳು... ಹುಬ್ಬಳ್ಳಿಯ ಕಾಡುಸಿದ್ಧೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾದ ದಿನಗಳು, ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕಳೆದ ದಿನಗಳು... ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಶಿಕ್ಷಣ ಸಂಸ್ಥೆಯಲ್ಲಿ (NCERT) ಪ್ರಾಧ್ಯಾಪಕರಾದ ದಿನಗಳು... ಮೈಸೂರಿನ ಪ್ರಾದೇಶಿಕ ಶಿಕ್ಷಣ ಕಾಲೇಜಿನ ಪ್ರಾಧ್ಯಾಪಕರಾಗಿ ಕಳೆದ ದಿನಗಳು... ಅವರ ವೈಯಕ್ತಿಕ ಜೀವನದ ಬಗ್ಗೆ.. ಅವರ ಕಾದಂಬರಿಗಳ ಬಗ್ಗೆ... ಅವರ ಸಾಕ್ಷಿಪ್ರಜ್ಞೆ ಬಗ್ಗೆ... ಅವರ ನಿಲುವಗಳ ಬಗ್ಗೆ... ಯಾವುದನ್ನು ಬರೆಯುವುದು? ಇವೆಲ್ಲದರ ಬಗ್ಗೆ ವಿವರವಾಗಿ ತಿಳಿಯಬೇಕೆಂದರೆ ಅವರ ಜೀವನಚರಿತ್ರೆ "ಭಿತ್ತಿ" ಯನ್ನು ಓದಿ.

ನಾನು ೧೭-೧೮ ವಯಸ್ಸಿನಲ್ಲಿ ಓದಿದ ಮೊದಲ ಬೃಹತ್ ಕಾದಂಬರಿಯೇ "ಪರ್ವ". ಅದನ್ನು ಓದಿ ಎರಡು ಮೂರು ದಿನ ತುಂಬಾ disturb ಆಗಿದ್ದೆ. ಮಹಾಭಾರತ ಪಾತ್ರಗಳನೆಲ್ಲಾ ಭೂಮಿಗೆ ಇಳಿಸಿದ್ದರು. ಕೃಷ್ಣನನ್ನು ಮಾನವನಾಗಿಸಿದ್ದರು. ಈ ತರಹವೂ ಬರೆಯಬಹುದೇ ಎಂಬ ಪ್ರಶ್ನೆ ಮೂಡಿತ್ತು. ಇದು ಭೈರಪ್ಪನವರ ಓದಲೇಬೇಕಾದ ಕಾದಂಬರಿ. ಕೆಲ ವರ್ಷಗಳ ಹಿಂದೆ ಪ್ರಕಾಶ್ ಬೆಳವಾಡಿಯವರು ಈ ಕಾದಂಬರಿಯನ್ನು ಆಧರಿಸಿ ೮ ಘಂಟೆ ನಾಟಕವನ್ನು ರಂಗಭೂಮಿಗೆ ಅಳವಡಿಸಿದ್ದರು. ಇಂಗ್ಲಿಷ್ ಮತ್ತು ಕನ್ನಡ ಎರಡು ಭಾಷೆಗಳಲ್ಲಿ ಈ ನಾಟಕವನ್ನು ನಿರ್ದೇಶಿಸಿದ್ದರು. ಈ ರಂಗಪ್ರಯೋಗಕ್ಕೂ ಅದ್ಭುತ ಪ್ರಶಂಸೆ ದೊರೆಯಿತು.

"ಪರ್ವ"ದ ನಂತರ ಓದಿದ್ದು "ವಂಶವೃಕ್ಷ". ಇದರ ಬಗ್ಗೆ ಒಂದು ಸಣ್ಣ ಕಥೆಯಿದೆ - ನನ್ನ ಅಣ್ಣ ಇಂಜಿನಿಯರಿಂಗ್ ಕೊನೆ ವರ್ಷದಲ್ಲಿದ್ದ. ಅವರ ತರಗತಿಯವರು ಕ್ಲಾಸ್ ಮ್ಯಾಗಜಿನ್ ಮಾಡಿದ್ದರು. ಅದರಲ್ಲಿ ಪ್ರತಿ ವಿದ್ಯಾರ್ಥಿ ಬಗ್ಗೆ ವಿವರ, ಫೋಟೋ ಹಾಗು ಅವರು ತುಂಬಾ ಇಷ್ಟಪಡುವ ಸಿನಿಮಾ , ಪುಸ್ತಕ, ಇತರೆ ವಿಷಯಗಳನ್ನು ಗಳನ್ನು ಹೆಸಿರಸಬೇಕಿತ್ತು. ನನ್ನ ಅಣ್ಣ ಅದರಲ್ಲಿ ಸಿನಿಮಾ ಮತ್ತು ಪುಸ್ತಕ ಎರಡರಲ್ಲೂ ವಂಶವೃಕ್ಷ ವನ್ನು ಬರೆದ ನೆನಪು. ನಮ್ಮ ಆಗಿನ ಆರಾಧ್ಯದೈವ ಡಾ. ರಾಜಕುಮಾರ್ ಸಿನಿಮಾಗಳ ಹೆಸರು ಬರೆಯದೆ "ವಂಶವೃಕ್ಷ"ದ ಹೆಸರು ಬರೆದಿರಬೇಕಾದರೆ ಈ ಕಾದಂಬರಿಯಲ್ಲಿ ಏನೋ ಇರಬೇಕು ಎಂದು ಓದಲು ಶುರು ಮಾಡಿದೆ. ಓದು ಮುಗಿಯೋವರೆಗೂ ಪುಸ್ತಕ ಕೆಳಗೆ ಇಡಲಿಲ್ಲ. ಈ ಕಾದಂಬರಿಯಲ್ಲಿ ಕೊನೆಯಲ್ಲಿ ಬರುವ ತಿರುವು ಎಂಥ ಓದುಗನಿಗೂ ಒಂದು shock ಕೊಡುತ್ತೆ.

ಭೈರಪ್ಪನವರ ನಾಲ್ಕು ಕಾದಂಬರಿಗಳು ಚಲನಚಿತ್ರಗಳಾಗಿವೆ. ಇವುಗಳಲ್ಲಿ ಮೊದಲನೆಯದು "ವಂಶವೃಕ್ಷ". ಈ ಚಿತ್ರದಲ್ಲಿ ವಿಷ್ಣುವರ್ಧನ್ ಸಣ್ಣ ಪಾತ್ರದಲ್ಲಿ ಅಭಿನಯಿಸಿ ಕನ್ನಡ ಚಲನಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು. ಅವರು "ಕುಮಾರ್" ಎಂಬ ಹೆಸರನ್ನು title card ನಲ್ಲಿ ಬಳಿಸಿದ್ದರು. ಭೈರಪ್ಪನವರು ಯಾರಿಗೂ ಅಷ್ಟು ಸುಲಭವಾಗಿ ಕಾದಂಬರಿಗಳನ್ನು ಸಿನಿಮಾ ಮಾಡಲು ಹಕ್ಕುಗಳನ್ನು ಕೊಡುತ್ತಿರಲಿಲ್ಲ. ಜಿ.ವಿ. ಅಯ್ಯರ್ ಈ ಕಾದಂಬರಿಯನ್ನು ಸಿನಿಮಾ ಮಾಡಲು ಆಸೆ ಪಟ್ಟಿದ್ದರು. ಆದರೆ ಭೈರಪ್ಪ ಬಿ.ವಿ. ಕಾರಂತರು ನಿರ್ದೇಶನ ಮಾಡಿದರೆ ಮಾತ್ರ ಸಿನಿಮಾ ಮಾಡುವ ಹಕ್ಕುಗಳನ್ನು ಕೊಡುತ್ತೇನೆಂದರು. ಬಿ.ವಿ. ಕಾರಂತರು ದೆಹಲಿಯಲ್ಲಿ ಪರಿಚಯ. ಅವರೊಬ್ಬ ರಂಗಕರ್ಮಿ. ಸಿನಿಮಾದ ಪರಿಚಯವಿಲ್ಲ. ಕೊನೆಗೆ ಜಿ.ವಿ. ಅಯ್ಯರ್ ನಿರ್ಮಾಣ ಮಾಡಿ ಬಿ.ವಿ. ಕಾರಂತರು ಮತ್ತು ಗಿರೀಶ್ ಕಾರ್ನಾಡರು ಜಂಟಿ ನಿರ್ದೇಶಕರಾಗಿ ೧೯೭೨ ರಲ್ಲಿ ತೆರೆಗೆ ತಂದ ಚಿತ್ರ - ವಂಶವೃಕ್ಷ. ಮುಖ್ಯ ಪಾತ್ರಧಾರಿಗಳಾಗಿ ವೆಂಕಟರಾವ್ ತಲಗೇರಿ, ಎಲ್. ವಿ. ಶಾರದಾ, ಬಿ.ವಿ.ಕಾರಂತ್

ಮತ್ತು ಗಿರೀಶ್ ಕಾರ್ನಾಡ್ ಮನೋಜ್ಞ ಅಭಿನಯ ನೀಡಿದ್ದರು. ಭೈರಪ್ಪನವರಿಗೆ "ಅತ್ಯುತ್ತಮ ಕಥೆಗಾರ" ಲಭಿಸಿತು. ಹಣದ ಮೊತ್ತ "ಅತ್ಯುತ್ತಮ ನಿರ್ದೇಶಕ" ಪ್ರಶಸ್ತಿಗಿಂತ ತೀರಾ ಕಮ್ಮಿ ಇದ್ದಿದ್ದರಿಂದ ಭೈರಪ್ಪ ನವರು ಈ ಪ್ರಶಸ್ತಿಯನ್ನು ಸ್ವೀಕರಿಸಲಿಲ್ಲ. ಈ ಚಿತ್ರವನ್ನು ೧೯೮೦ ರಲ್ಲಿ ತೆಲುಗಿಗೆ "ವಂಶ ವೃಕ್ಷಂ" ಆಗಿ ರೀಮೇಕ್ ಮಾಡಲಾಯಿತು ಮತ್ತು ಅನಿಲ್ ಕಪೂರ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಇದು ಅನಿಲ್ ಕಪೂರ್ ನಾಯಕನಟನಾಗಿ ಅಭಿನಯಿಸಿದ ಮೊದಲ ಸಿನಿಮಾ. ಭೈರಪ್ಪನವರ ಮತ್ತೊಂದು ಕಾದಂಬರಿ "ತಬ್ಬಲಿಯು ನೀನಾದೆ ಮಗನೆ" ಚಲನಚಿತ್ರವಾಯಿತು. ಈ ಚಿತ್ರವನ್ನೂ ಕಾರಂತ್ - ಕಾರ್ನಾಡ್ ಜೋಡಿ ನಿರ್ದೇಶಿಸಿತು. ನಾಸಿರುದ್ದೀನ್ ಷಾ ಅವರ ಅಭಿನಯ ಇನ್ನು ನೆನಪಿನಲ್ಲಿದೆ. ಈ ಚಿತ್ರದಲ್ಲಿ "ಗೋವಿನ ಹಾಡು" ಅನ್ನು ಅಳವಡಿಸಿದ್ದಾರೆ. ಈ ಹಾಡಿನಿಂದ ಕನ್ನಡಿಗರಿಗೆ ಪುಣ್ಯಕೋಟಿಯ ಕಥೆಯು ತಿಳಿದಿದೆ. ಈ ಚಿತ್ರವು ಹಿಂದಿಯಲ್ಲಿ "ಗೋಧೂಳಿ" ಯಾಗಿ ತೆರೆ ಕಂಡಿತು.

ಭೈರಪ್ಪನವರ "ಮತದಾನ" ಮತ್ತು "ನಾಯಿನೆರಳು" ಕಾದಂಬರಿಗಳು ಕೂಡ ಚಲನಚಿತ್ರಗಳಾಗಿ ತೆರೆಕಂಡಿತು. ಟಿ. ಎನ್. ಸೀತಾರಾಂ ನಿರ್ದೇಶನದಲ್ಲಿ "ಮತದಾನ" ಅದ್ಭುತ ಯಶಸ್ಸು ಕಂಡಿತು. ಗಿರೀಶ್ ಕಾಸರವಳ್ಳಿ ನಿರ್ದೇಶನದಲ್ಲಿ "ನಾಯಿನೆರಳು" ವಿಮರ್ಶಾತ್ಮಕ ಮೆಚ್ಚುಗೆ ಗಳಿಸಿತು.


ಭೈರಪ್ಪನವರು ಸಾಕಷ್ಟು ಸಂಶೋಧನೆ ಮತ್ತು ಅಧ್ಯಯನ ಮಾಡಿ ಕಾದಂಬರಿಗಳನ್ನು ರಚಿಸುತ್ತಿದ್ದರು. "ಆವರಣ" ರಚಿಸುವ ಮುನ್ನ ಒಂದು ವಾರ ತಮ್ಮ ಮನೆಯಲ್ಲಿ ತಂಗಿದ್ದರು ಎಂದು ಸ್ವತಃ ಭಾನು ಮುಷ್ತಾಕ್ ಅವರೇ ಒಂದು ಲೇಖನದಲ್ಲಿ ಹೇಳಿದ್ದಾರೆ. ೧೯೫೨ ರಿಂದ ೨೦೧೭ ದೀರ್ಘ ಅವಧಿಯಲ್ಲಿ ಕೇವಲ ೨೪ ಕಾದಂಬರಿಗಳನ್ನು ಮತ್ತು ೬ ಇತರ ಕೃತಿಗಳನ್ನು ರಚಿಸಿದ್ದಾರೆ. ಅವರ ಮತ್ತೊಂದು ಹವ್ಯಾಸ ಪ್ರವಾಸ ಹೋಗುವುದು. ಅವರಷ್ಟು ಪ್ರವಾಸ ಮಾಡಿರುವ ಸಾಹಿತಿಗಳಲ್ಲಿ ಕರ್ನಾಟಕದಲ್ಲೇಕೆ ಭಾರತದಲ್ಲೇ ಯಾರು ಇಲ್ಲವೆನ್ನಬಹುದು. ಉತ್ತರ ಧ್ರೂವಕ್ಕೂ ಹೋಗಿದ್ದಾರೆ... ದಕ್ಷಿಣ ಧ್ರುವಕ್ಕೂ ಹೋಗಿದ್ದಾರೆ. ಹಲವಾರು ದೇಶಗಳನ್ನು ಸುತ್ತಿದ್ದಾರೆ. ಭಾರತ ದರ್ಶನವನ್ನು ಮಾಡಿದ್ದಾರೆ. ಈ ಸುತ್ತಾಟಗಳಿಂದ ಅವರ ಕಾದಂಬರಿಗಳಿಗೆ ಬೇಕಾದ ವಸ್ತುಗಳು ಸಿಕ್ಕಿರುವುದರಲ್ಲಿ ಯಾವುದೇ ಸಂಶಯವಿಲ್ಲ.

ಅವರ ಎಲ್ಲಾ ಕಾದಂಬರಿಗಳು ಬೆಸ್ಟ್ ಸೆಲ್ಲರ್ಸ್ - ಹಲವಾರು ಬಾರಿ ಮರುಮುದ್ರಣಗೊಂಡಿವೆ. ಅವರ ಕೃತಿಗಳು ಮರಾಠಿ, ಇಂಗ್ಲಿಷ್, ಹಿಂದಿ ಮೊದಲಾದ ಭಾಷೆಗಳಿಗೆ ಅನುವಾದವಾಗಿವೆ. ಮರಾಠಿಗರು "ಭೈರಪ್ಪ" ನವರನ್ನು ನಮ್ಮವರೇ ಎನ್ನುತ್ತಾರೆಂದರೆ ಅವರ ಕಾದಂಬರಿಗಳು ಮರಾಠಿಗರ ಮೇಲೆ ಎಷ್ಟು ಪ್ರಭಾವೇ ಬೀರಿರಬಹುದು.



ಭೈರಪ್ಪನವರ ಕೊನೆಯ ಆಸೆ ತಮ್ಮ ಹುಟ್ಟೂರಾದ ಸಂತೇಶಿವರ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವುದು. ಇದ್ದಕ್ಕಾಗಿ ಅವರು ಭಗೀರಥ ಪ್ರಯತ್ನ ಮಾಡಿದರೆನ್ನಬೇಕು. ವಿಶ್ವವಾಣಿ ಸಂಪಾದಕರಾದ ವಿಶ್ವೇಶ್ವರ ಭಟ್ ರ ಸಹಾಯದಿಂದ ಆಗಿನ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಭೇಟಿ ಮಾಡಿ 25 ಕೋಟಿ ರೂಪಾಯಿ ಅನುದಾನಕ್ಕಾಗಿ ಮನವಿ ಮಾಡಿ ಮಂಜೂರು ಮಾಡಿಸಿಕೊಂಡಿದ್ದರು. ಈ ಮನವಿಯನ್ನು ಆದ್ಯತೆಯಿಂದ ಪರಿಗಣಿಸಿದ ಬಿಜೆಪಿ ಸರ್ಕಾರವು ಸಂತೇಶಿವರ ಮತ್ತು ಅಗ್ರಹಾರ ಬೆಳಗುಲಿ ಗ್ರಾಮಗಳ ಕೆರೆಗಳನ್ನು ತುಂಬಿಸುವ ನೀರಾವರಿ ಯೋಜನೆಗೆ ಅನುಮೋದನೆ ನೀಡಿತು. ನಂತರ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು 25 ಕೋಟಿ ರೂಪಾಯಿ ಬಿಡುಗಡೆ ಮಾಡಿ, ಯೋಜನೆಯನ್ನು ಜಾರಿಗೊಳಿಸಿತು. ಪಕ್ಷಾತೀತವಾಗಿ ಎಲ್ಲರ ಸಹಕಾರದಿಂದ ಈ ಯೋಜನೆ ಪೂರ್ಣಗೊಂಡು, ಕೆರೆಗಳು ನೀರಿನಿಂದ ತುಂಬಿದವು. ಈ ಭಗೀರಥ ಸಾಧನೆಗೆ ಸಂತೇಶಿವರ ಗ್ರಾಮದ ಜನತೆ ಭೈರಪ್ಪನವರನ್ನು ಚಿರಕಾಲ ಸ್ಮರಿಸುತ್ತೆ.

ಭೈರಪ್ಪನವರು ಒಂದು ಸಂದರ್ಶನದಲ್ಲಿ ಹೇಳಿದ ಹಾಗೆ ಒಬ್ಬ ಸಾಹಿತಿಯು ತೀರಿಕೊಂಡ ಮೇಲೂ ಜೀವಂತವಾಗಿರ ಬೇಕೆಂದರೆ ಅವನ/ಅವಳ ಕೃತಿಗಳು ನೂರು ವರ್ಷವಾದರೂ ಬೇಡಿಕೆಯಲ್ಲಿರಬೇಕು. ಭೈರಪ್ಪನವರನ್ನು ಜೀವಂತವಾಗಿರಿಸೋಣ. ಅವರ ಕಾದಂಬರಿಗಳನ್ನು ನಾವು ಓದೋಣ. ನಮ್ಮ ಮುಂದಿನ ತಲೆಮಾರಿಗೂ ಓದುವ ಚಟ ಹಚ್ಚಿಸೋಣ.



**ಮಿಟ್ಟೂರು ರಾಮಪ್ರಸಾದ್**
ಟೆನ್ನೆಸ್ಸಿ

ಎಸ್. ಎಲ್. ಭೈರಪ್ಪ ತತ್ವಗಳ ಶಿಲ್ಪಿ
ಎಸ್. ಎಲ್. ಭೈರಪ್ಪ ಅಕ್ಷರಾರ್ಥಗಳ ಶಿಲ್ಪಿ
ಎಸ್. ಎಲ್. ಭೈರಪ್ಪ ಸತ್ವಗಳ ಶಿಲ್ಪಿ /
ಎಸ್. ಎಲ್. ಭೈರಪ್ಪ ಶಬ್ದಾರ್ಥಗಳ ಶಿಲ್ಪಿ

ಸತ್ಯಶೋಧಕ ತತ್ವಚಿಂತಕ ಮಿತಿಯಿಲ್ಲದ ಪರಿಕಲ್ಪನೆಯಲಿ/
ದಾರಿ ದೀವಿಗೆಯಾಗಿ ಬೆಳಕಾದರು ಜೀವನದ ವಾದಾತ್ಮಗಳಿಗೆ/
ಸತ್ಯಶೋಧಕ ತತ್ವಚಿಂತಕ ಮಿತಿಯಿಲ್ಲದ ಪರಿಕಲ್ಪನೆಯಲಿ/
ಸೂಕ್ಷ್ಮದ ಸೊಡರಾಗಿ ಉದ್ದೀಪವಾದರು ಬಾಳಿನ ಪ್ರಶ್ನೆಗಳಿಗೆ/

ತಾತ್ವಿಕ ಧಾರ್ಮಿಕ ಐತಿಹಾಸಿಕ ಸಾಮಾಜಿಕ ಸಾರಾಂಶದಲಿ/
ಸೃಜಿಸಿದರು ಅತ್ಯಮೂಲ್ಯ ಕಾದಂಬರಿ ಗಳ ಸಿರಿಗನ್ನಡದಲಿ
ಧರ್ಮ ಸಂಸ್ಕಾರ ಸಂಸ್ಕೃತಿ, ಬಿಂಬಿಸುವ ಮುಖ್ಯಾಂಶ,ದಲಿ/
ರಚಿಸಿದರು ಮಹೋನ್ನತ ಗದ್ಯ ಸಾಹಿತ್ಯವ ಸವಿಗನ್ನಡದಲಿ/




ಅಂತರಂಗವ ಬಹಿರಂಗಿಸಿ ಜೀವನ ಸತ್ಯವ ಅನವಾರಣಿಸಿ/
ಜಡ ಜೀವಿಗಳ ಜಾಗೃತಿಸಿದರು ಅತ್ಯುತ್ಕೃಷ್ಟ ಸಾಹಿತ್ಯದಲಿ/
ಪರಿಸರದ ಬಿಂಬವಾಗಿ ಗೂಡ ನಿಗೂಢತೆಯ ವಿಸಂಕೇತಿಸಿ/
ನಿಷ್ಕ್ರಿಯಗಳ ಎಚ್ಚರಿಸಿದರು ವೈಶಿಷ್ಟ್ಯಪೂರ್ಣ ಬರಹದಲಿ/

ವಿಶಿಷ್ಟ ದೃಷ್ಟಿಕೋನದಲಿ ಶುದ್ಧ ಕಾವ್ಯಮಯ ಶೈಲಿಯಲಿ/
ಮಾನವನ ಅಂತರ್ಯವ ಕಾಗದದಲಿ ಕೆತ್ತಿದರು ಅಕ್ಷರಗಳಲಿ/
"ಧರ್ಮ, ಸಂಸ್ಕೃತಿ, ಇತಿಹಾಸ ಸಂಪ್ರದಾಯಗಳ ಆಧಾರದಲಿ/
ಸತ್ಯ-ಅಸತ್ಯ ಬಾಳಿನ ತಾರತಮ್ಯಗಳ ತೋರಿಸಿದರು ಪದಗಳಲಿ


ಅಕ್ಷರ ಶಿಲ್ಪಿಯಾಗಿ ಪೂರ್ವಾಚಾರದ ದೋಷ ದೌರ್ಬಲ್ಯಗಳ/
ಪ್ರತಿಬಿಂಬಿಸಿದರುಜಗತ್ತಿಗೆ ಮೊನೆಗಾರನ ಸ್ಫೂರ್ತಿಯಲಿ/
ಅಕ್ಷರ ಶಿಲ್ಪಿಯಾಗಿ ಸಂಪ್ರದಾಯದ ಕುಂದುಗಳ ಪ್ರಮಾದಗಳ/
ಪ್ರತಿಫಲನಿಸಿದರು ಪ್ರಪಂಚಕೆ ಎದೆಗಾರನ ಜೀವಶಕ್ತಿಯಲಿ



**ವಿ ಪ್ರಸನ್ನ ಕುಮಾರ್**
ನ್ಯೂ ಜೆರ್ಸಿ

# ಯಶವಂತ ಸರ್ದೇಶಪಾಂಡೆ ...ಹಾಸ್ಯದ ಸರದಾರ





ಆರನೇ ಅಕ್ಕ ಸಮ್ಮೇಳನದಲ್ಲಿ ಮೊದಲ ಬಾರಿ ಕಂಡೆ
ನಕ್ಕು ನಗಿಸಿದೆ ನೀನು ಯಶವಂತ ಸರ್ದೇಶಪಾಂಡೆ
“ರಾಶಿ ಫಲ” ನೀ ಹೇಳಿದಾಗ ನನ್ನ ನಾ ಕಂಡುಕೊಂಡೆ
“ಆಲ್ ದಿ ಬೆಸ್ಟ್” ಅಂತ ಹೇಳಿ ನೀ ಈಗ ಜಾರಿಕೊಂಡೆ

“ರಾಮ ಶಾಮ ಭಾಮ” ಸಂಭಾಷಣೆಯಿಂದ ನಮಗೆ
ಹೊಟ್ಟೆ ಹುಣ್ಣಾಗುವಂತೆ ನಗಿಸಿದೆ ಚಿತ್ರದ ಕೊನೆವರೆಗೆ
ಈ ವರ್ಷದ ನಾವಿಕ ಸಮ್ಮೇಳನದಲ್ಲಿ ನಮ್ಮೆಲ್ಲರಿಗೆ
ನಗಿಸಿದೆ “ಅಮರ ಮಧುರ ಪ್ರೇಮ”ದಿಂದ ಪ್ರತಿಫಳಿಗೆ

ನನಗೆ ಗೊತ್ತಾಗದಂತೆ ಹೊರಟೇ ಬಿಟ್ಟೆಯಾ ಗೆಳೆಯ
ಮರೆಯುವೆನೆ ನಾ ನಿನ್ನೊಡನೆ ಕಳೆದ ಒಳ್ಳೆ ಸಮಯ
ಮತ್ತೊಮ್ಮೆ ಹುಟ್ಟಿಬಾ ತೋರಲು ನಿನ್ನ ಅಭಿನಯ
ನಿನಗಿದೋ ನಮ್ಮ ನಮನ, ಆದುದಕ್ಕೆ ನಿನ್ನ ಪರಿಚಯ 🙏🙏




**ಯಶಸ್ವಿನಿ**
ನ್ಯೂ ಜೆರ್ಸಿ

# ಸಂಪದ್ಭರಿತವಾದ ಜಿಲ್ಲೆ "ನಮ್ಮ ಕೊಡಗು"

**ನಾ**ನು ಹುಟ್ಟಿ ಬೆಳೆದದ್ದೆಲ್ಲ ಕೊಡಗು ಜಿಲ್ಲೆಯ ಸೋಮವಾರಪೇಟೆಯಲ್ಲಿ. ಕೊಡಗು ಸಂಪದ್ಭರಿತವಾದ ಜಿಲ್ಲೆ,ಇಲ್ಲಿನ ಆಡಳಿತ ಭಾಷೆ ಕನ್ನಡವೇ ಆಗಿದ್ದರೂ ಸಹ "ಕೊಡವ" ಇಲ್ಲಿನ ಸ್ಥಳಿಯ ಭಾಷೆ ,ಅಲ್ಲದೆ ಅರೆಭಾಷೆ ಮತ್ತು ತುಳು ಮಾತನಾಡುವ ಜನರು ಸಹ ಇಲ್ಲಿ ಕಾಣಸಿಗುತ್ತಾರೆ ,ಕೊಡಗು ದಟ್ಟವಾದ ಕಾಡುಗಳಿಂದ ಕೂಡಿದ್ದು ಸುಂದರವಾದ ಗಿರಿಧಾಮವಾಗಿದೆ.ಕರ್ನಾಟಕದಲ್ಲಿಯೇ ಅತ್ಯಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಜಿಲ್ಲೆ ಕೊಡಗು ಹಾಗೂ ದೇಶಕ್ಕೆ ಹೆಚ್ಚಿನ ಸಂಖ್ಯೆಯ ಯೋಧರನ್ನು ಕೊಡುಗೆಯಾಗಿ ನೀಡಿದ ಕೀರ್ತಿ ನಮ್ಮ ಕೊಡಗಿನದ್ದು.ಕೊಡಗಿನ ಬಗ್ಗೆ ಬರೆಯುವುದು ನನ್ನ ಮಟ್ಟಿಗೆ ಒಂದು ಸಂತಸ ಹಾಗೂ ಹೆಮ್ಮೆಯ ವಿಷಯ. ಕೊಡಗಿನ ಕಾಫಿ ಪ್ರಪಂಚದಾದ್ಯಂತ ಪ್ರಸಿದ್ಧಿಯನ್ನು ಪಡೆದಿದೆ,ಇಲ್ಲಿನ ಹೆಚ್ಚಿನ ಜನರು ಕಾಫಿ ಬೆಳೆಗಾರರಾಗಿದ್ದಾರೆ,ಅದರಲ್ಲೂ ರೋಬೊಸ್ಟ್ ಕಾಫಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.ಕೊಡಗಿನ ಭೂಭಾಗವನ್ನು ಹೆಚ್ಚಾಗಿ ಕೃಷಿಗಾಗಿ ಬಳಸಲಾಗುತ್ತದೆ. ಕಾಫಿ,ಏಲಕ್ಕಿ, ಮೆಣಸು ಹಾಗೂ ಕಿತ್ತಳೆಯನ್ನು ಇಲ್ಲಿ ಪ್ರಮುಖವಾಗಿ ಬೆಳೆಯಲಾಗುತ್ತದೆ,ಎಲ್ಲೆಲ್ಲೂ ದಟ್ಟವಾದ ಕಾಡುಗಳಿದ್ದು,ಇಲ್ಲಿನ ನೈಸರ್ಗಿಕ ಸೌಂದರ್ಯವು ಮನಸ್ಸಿಗೆ ಹಿತವನ್ನುಂಟುಮಾಡುತ್ತದೆ. ಇಲ್ಲಿನ ಪ್ರವಾಸಿತಾಣಗಳ ಬಗ್ಗೆ ಹೇಳುವುದಾದರೆ "ದುಬಾರೆ ಆನೆ ವಿಹಾರ, ಚಿಕ್ಲಿ ಜಲಾಶಯ, ಹಾರಂಗಿ ಅಣೆಕಟ್ಟು ಇಲ್ಲಿನ ಪ್ರಮುಖ ಜಾಗಗಳು, ಮಡಿಕೇರಿಯಲ್ಲಿನ ಓಂಕಾರೇಶ್ವರ ದೇವಾಲಯ ಹಾಗೂ ಭಾಗಮಂಡಲ(ಭಾಗಮಂಡಲದಲ್ಲಿ ಭಗಂಡೇಶ್ವರ ದೇವಾಲಯವಿದೆ,ಇಲ್ಲಿನ ವಿಶೇಷವೆನೆಂದರೆ ಕಾವೇರಿ ,ಸುಜ್ಯೋತಿ,ಕನ್ನಿಕೆಯೆಂಬ ಮೂರು ನದಿಗಳು ಇಲ್ಲಿ ಸಂಗಮವಾಗುತ್ತವೆ) ಮತ್ತು ತಲಕಾವೇರಿ(ಇದು ಮಡಿಕೇರಿಯಿಂದ ಸುಮಾರು 45ಕಿಮೀ ದೂರವಿದ್ದು ಪವಿತ್ರವಾದ ಕಾವೇರಿ ನದಿಯ ಮೂಲಸ್ಥಾನವು ಇದಾಗಿದೆ).

ನಾಗರಹೊಳೆ ರಾಷ್ಟ್ರೀಯ ಉದ್ಯಾನ, ನಿಸರ್ಗಧಾಮ (ಇದು ದಟ್ಟವಾದ ಕಾಡು,ಗಿಡಮರಗಳು ಮತ್ತು ವನ್ಯಜೀವಿಗಳಿಂದ ಕೂಡಿದೆ)ಮಡಿಕೇರಿಯ ರಾಜಾಸೀಟ್(ಸುಂದರವಾದ ಉದ್ಯಾನವನವಿದು). ಇನ್ನು ಜಲಪಾತಗಳ ಬಗ್ಗೆ ಹೇಳುವುದಾದರೆ ಅಬ್ಬಿ ಜಲಪಾತ , ಇರ್ಪು ಮತ್ತು ಮಲ್ಲಳ್ಳಿ ಜಲಪಾತ (ಮಲ್ಲಳ್ಳಿ ಜಲಪಾತವು ದೊಡ್ಡ ಜಲಪಾತವಾಗಿದ್ದು ,ಮಳೆಗಾಲದ ಸಮಯದಲ್ಲಿ ರುದ್ರರಮಣೀಯ ಸೌಂದರ್ಯದಂತೆ ಕಾಣುತ್ತದೆ,ಆಗಸ್ಟ- ಸೆಪ್ಟೆಂಬರ್ ತಿಂಗಳು ಈ ಸ್ಥಳಕ್ಕೆ ಭೇಟಿ ಕೊಡಲು ಸೂಕ್ತ ಸಮಯ,ಆದರೂ ಇಲ್ಲಿ ಜಿಗಣೆಗಳು ಹೆಚ್ಚಾಗಿರುವುದರಿಂದ ಮತ್ತು ಜಾರುವಿಕೆಯು ಹೆಚ್ಚಾಗಿರುವುದರಿಂದ ಸಾಕಷ್ಟು ಎಚ್ಚರಿಕೆ ವಹಿಸಬೇಕಾದುದು ಅತ್ಯಗತ್ಯ) ಕೆಲವು ಕಿಡಿಗೇಡಿಗಳು ಇಂತಹ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸವನ್ನು ಹರಡಿ ಸ್ವಚ್ಛತೆಯನ್ನು ಹಾಳುಮಾಡುತ್ತಿದ್ದಾರೆ,ಇಲ್ಲಿ ಕೆಲವರು ನೀರಿಗೆ ಹಾರಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ,ಹೀಗೆ ಪ್ರಾಣ ಕಳೆದುಕೊಂಡವರ ಶವಗಳನ್ನು ಜಲಪಾತದಿಂದ ಹೊರತೆಗೆಯುವುದು ನಿಜಕ್ಕೂ ದೊಡ್ಡ ಸವಾಲು.



ಅಲ್ಲದೆ ಸುರಲಬ್ಬಿ ಫಾಲ್ಸ್ ,ಹಟ್ಟಿಹೊಳೆ ಇನ್ನು ಮುಂತಾದ ಆಕರ್ಷಣೀಯ ಜಲಪಾತಗಳಿವೆ!! ಟ್ರೆಕ್ಕಿಂಗ್ ವಿಷಯಕ್ಕೆ ಬಂದರೆ ಮಾಂದಲಪಟ್ಟಿ ಹಾಗೂ ಪುಷ್ಪಗಿರಿ ಬೆಟ್ಟವು ಟ್ರೆಕ್ಕಿಂಗ್ ಪ್ರಿಯರಿಗೆ ಸೂಕ್ತವಾದ ಜಾಗ ಹಾಗೂ ಅತ್ಯಂತ ಜನಪ್ರಿಯ ತಾಣವೂ ಹೌದು. ಇನ್ನು ಪ್ರವಾಸ ಬಂದ ಮೇಲೆ ಉಳಿದುಕೊಳ್ಳುವುದೆಲ್ಲಿ ?? ಎಂಬುದರ ಬಗ್ಗೆ ಚಿಂತಿಸಬೇಕಿಲ್ಲ ,ಏಕೆಂದರೆ ಈಗ ಸಾಕಷ್ಟು ಖಾಸಗಿ ಹೋಂ ಸ್ಟೆಗಳು ತಲೆಯೆತ್ತಿವೆ,ಕಡಿಮೆ ದರ ಹಾಗೂ ದುಬಾರಿ ಹೋಂ ಸ್ಟೆಗಳು ಲಭ್ಯವಿದೆ.ಅತ್ಯಾಕರ್ಷಕವಾದ ರೆಸಾರ್ಟ್ಗಳು ಇಲ್ಲಿ ಸಾಕಷ್ಟಿವೆ. ಮಾಂಸಾಹಾರಿಗಳಿಗೆ ಇಲ್ಲಿನ ರೆಸ್ಟೊರೆಂಟ್ ಗಳಲ್ಲಿ ಹೆಚ್ಚಿನ ಆಯ್ಕೆಗಳಿರುತ್ತವೆ,ಕೆಲವರು ಪ್ರವಾಸಿಗರಿಗೆಂದೇ ಖಾಸಗಿ ಜೀಪುಗಳನ್ನು ನಡೆಸುತ್ತಿರುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಒತ್ತಡದಿಂದ ದೂರವಾಗಿ ಕೊಂಚ ನಿಸರ್ಗದೊಂದಿಗೆ ಕಾಲ ಕಳೆಯಬಯಸುವವರಿಗೆ ಕೊಡಗು ಜಿಲ್ಲೆ ಒಳ್ಳೆಯ ಆಯ್ಕೆ,ಇಲ್ಲಿಗೆ ವಿಶ್ರಾಂತಿಯನ್ನು ಹಾಗೂ ಆಹ್ಲಾದಕರ ವಾತಾವರಣವನ್ನು ಬಯಸಿ ಬರುವವರಿಗೆ ಎಂದಿಗೂ ನಿರಾಸೆಯಾಗುವುದಿಲ್ಲ, ಅವಕಾಶ ಸಿಕ್ಕಿದ್ದಲ್ಲಿ ಖಂಡಿತವಾಗಿಯೂ ಕೊಡಗು(coorg)ಗೆ ಒಮ್ಮೆ ಭೇಟಿಕೊಡಿ.

# ಕಥಾ ಸಂಕಲನ





ಸ್ವರ್ಣಗೌರಿ ಎಸ್ ಕಳಸಾಪುರ

# ತಪ್ಪೊಂದ ಹೇಳುವೆ

'**ನ**ವ ವಸಂತದ ಗಾಳಿ ಬೀಸಲು ಮಾವು ಚಿಗುರಿತು ಆಗಲೇ, ಮೌನ ಮುರಿಯುತ ಮಧುರ ಗೀತೆಯ ಮತ್ತೆ ಹಾಡಿತು ಕೋಗಿಲೆ' - ರೇಡಿಯೋ ತನ್ನ ಸಾಟಿ ಯಾರಿಹರು ಎಂಬಂತೆ ನಡೆಯುತ್ತಲೇ ಇದೆ. ಮೌನ ಮುರಿಯದೆ ಮೂಕಳಾಗಿ, ಅನ್ಯ ಮನಸ್ಕಳಾಗಿ ಕುಳಿತ ವಸಂತಳ ಮನಸ್ಸು ಮಾತ್ರ ಎರಡು ವರ್ಷಗಳ ಹಿಂದಿನ ಯುಗಾದಿಗೆ ಜಿಗಿದಿದೆ.

ಚೇತನ್ ಡಾಕ್ಟರ್ ಆದರೂ ಎಂತಹ ಸರಳ ಸಜ್ಜನಿಕೆಯ ವ್ಯಕ್ತಿ. ಮದುವೆಯಾಗಿ ಮೊದಲ ಯುಗಾದಿ, ಆ ದಿನ 'ಯುಗ ಯುಗಾದಿ ಕಳೆದರು ಯುಗಾದಿ ಮರಳಿ ಬರುತಿದೆ' ಬೆಳಿಗ್ಗೆ ರೇಡಿಯೋನಲ್ಲಿ ತೇಲಿ ಬಂದ ಹಾಡನ್ನು ಜೊತೆಯಾಗಿ ಹೇಳುತ್ತಾ, ತನ್ನ ಬೆಡ್ರೂಮ್ ಗೆ ಬಂದ ಚೇತನ್ ವಸಂತಾಳನ್ನು ಮುದ್ದಿನಿಂದ ಏಳಿಸುತ್ತಲೇ, ನಮ್ಮಿಬ್ಬರ ಬಾಳಿನಲ್ಲೂ ಹೀಗೆ ಪ್ರತಿ ವರ್ಷ ಹೊಸತನ್ನು ತರುತ್ತಿರಲಿ, ಎಂದೆಂದೂ ನವ ಜೋಡಿಯಂತೆ ಇರೋಣ ಎಂದು ರಮಿಸುತ್ತ ಹಾಡುತ್ತಾ ಹಾರೈಸುತ್ತಿದ್ದನು. ಇದು ಕನಸೋ ನನಸೋ ತಿಳಿಯದಂತೆ ಕಣ್ಣನ್ನು ಉಜ್ಜುತ್ತಾ ಎದ್ದ ವಸಂತಳಿಗೆ ತಾನು ಬಹಳ ತಡವಾಗಿ ಏಳುತ್ತಿರುವೆನೇನೋ ಎಂಬ ಭಯ ಆವರಿಸಿತು. ಈ ಮನೆಯ ಸಂಸ್ಕಾರ ಸಂಸ್ಕೃತಿಯೇ ಹೀಗೆ ಬೆಳಗಾಗೆದ್ದು ವಾಯು ವಿಹಾರಕ್ಕೆ ಹೋಗುವ ಅಪ್ಪ- ಅಮ್ಮ-ಮಗ ವಿಹಾರದಿಂದ ವಾಪಸ್ ಆಗಿ ರೇಡಿಯೋ ಹಾಕಿ ಬೆಳಗಿನ ದೇವರ ಹಾಡು, ನಂತರದ ಸಿನಿಮಾ ಗೀತೆಗಳನ್ನು ಕೇಳುತ್ತಾ, ಸಂತಸ-ಸಂಯಮದಿಂದ ತಮ್ಮ ದಿನಚರಿಯನ್ನು ಪ್ರಾರಂಭಿಸುತ್ತಾರೆ. ಚೇತನ್ ಅಂತೂ ರೇಡಿಯೋ ಜೊತೆ ತಾನು ಹಾಡುತ್ತ ಎಲ್ಲರನ್ನು ರೇಗಿಸುತ್ತ ತನ್ನ ದಿನವನ್ನು ಪ್ರಾರಂಭಿಸುತ್ತಾನೆ.

ಸರ್ಕಾರಿ ಕೆಲಸದಲ್ಲಿ ಇನ್ನೆರಡು ವರ್ಷಗಳಿಗೆ ನಿವೃತ್ತಿ ಹೊಂದುವ ಮಾವನವರು ಸರಿಯಾಗಿ 8:30ಕ್ಕೆ ತಮ್ಮ ಕಾಲೇಜಿಗೆ ಪಯಣ ಬೆಳೆಸುವುದು ದಿನನಿತ್ಯದ ರೂಢಿ. 9.30ಕ್ಕೆ ತನ್ನ ಕೆಲಸಕ್ಕಾಗಿ ಹೊರಡುವ ಪತಿ ಮಹಾಶಯ ಮದುವೆಯಾದಾಗಿನಿಂದ ಕೆಲಸವನ್ನೇ ಮರೆತವನಂತೆ ಹೆಂಡತಿಯನ್ನು ರಮಿಸಿ, ಅಲ್ಲಿಲ್ಲಿ ಸುತ್ತಿಸಿ, ಕೇಳಿದ್ದೆಲ್ಲಾ ಕೊಡಿಸಿ, ಮನೆ ಕೆಲಸದಲ್ಲೂ ಅಮ್ಮ-ಹೆಂಡತಿಗೆ ಜೊತೆಯಾಗಿದ್ದವನು. ಒಂದು ವಾರದಿಂದಷ್ಟೇ ತನ್ನ ಕೆಲಸಕ್ಕೆ ಹೋಗಲು ಪ್ರಾರಂಭಿಸಿದ್ದಾನೆ. ಈಗ ಮತ್ತೆರಡು ದಿನ ಯುಗಾದಿ ರಜೆ. ನವದಂಪತಿಗಳಿಗೆ ಮೊದಲ ಹೊಸ ವರ್ಷ. ತಾಯಿಯಷ್ಟೇ ಪ್ರೀತಿಯಿಂದ ಕಾಣುವ ಅತ್ತೆ ರಂಜನಿ ಸೊಸೆಯನ್ನು ಏಳಲು ಹೇಳಿ ಬಾಗಿಲಿಗೆ ಹಸಿರಿನ ತೋರಣ ಕಟ್ಟಲು ಮಾವ ರಾಜೇಂದ್ರನೊಡಗೂಡಿ ಮನೆ ಮುಂಬಾಗಿಲ ಬಳಿ ಹೋದರು.

ವಸಂತಳಿಗೆ ತಿಳಿಸದೆ ತಾಯಿ-ತಂದೆ-ತಮ್ಮನ ಆಗಮನ ಹಬ್ಬಕ್ಕೆ ಮತ್ತಷ್ಟು ಕಳೆಯನ್ನು ತಂದಿತ್ತು. ಹೊಸ ಉಡುಪು ಧರಿಸಿ ಪೂಜೆಗೆ ಬಂದ ನವ ವಧುವರರಿಗೆ, ಬೆಳಗಿನ ದೇವರ ಮತ್ತು ಪಂಚಾಂಗದ ಪೂಜೆಯಾದ ನಂತರ ಬೇವು- ಬೆಲ್ಲ ನೀಡಿದ ರಾಜೇಂದ್ರ ನವದಂಪತಿಗಳಿಗೆ 'ಹೊಸ ವರ್ಷವಿಡೀ ಬೆಲ್ಲವೇ ದೊರೆಯಲಿ' ಎಂದು ಆಶೀರ್ವದಿಸಿದರು. ವಂಸತ-ಚೇತನ ಹಿರಿಯರಿಗೆ ನಮಸ್ಕರಿಸಿದರು. ಅತ್ತೆ ಊಟದ ಸಮಯದಲ್ಲಿ ಸೊಸೆಯನ್ನು ಪ್ರೀತಿಯಿಂದ ಒತ್ತಾಯಿಸಿ ಒಬ್ಬಟ್ಟು ತಿನ್ನಲು ಹೇಳಿದರು. ಮಗ-ಸೊಸೆಗೆ ಮಧ್ಯಾಹ್ನದ ಚಿಕ್ಕ ನಿದ್ದೆಗೂ ಒತ್ತಾಯಿಸುತ್ತಾರೆ. ಮಗನಿಗೆ ಮನದಲ್ಲೇ ತಾಯಿಯ ಬಗ್ಗೆ ಹೆಮ್ಮೆ. ನನ್ನ ಆಸೆಯನ್ನು ತಾಯಿ ಹೇಗೆ ಅರಿತಿದ್ದಾಳೆ. ನನ್ನ ಸುಖ ಸಂತೋಷವನ್ನು ಮಾತ್ರ ಬಯಸುವ ಈ ತಾಯಿಗೆ ಏನು ನೀಡಿದರು ಕಡಿಮೆ ಎಂಬುದು ಅವನ ಮನದಾಳದ ಯೋಚನೆ.

ಎಲ್ಲರೂ ಹೋಳಿಗೆ ಊಟ ಮಾಡಿ ಮಧ್ಯಾಹ್ನದ ಸಿಹಿ ನಿದ್ದೆ ಮಾಡಿ ನಂತರ ಆಟವಾಡಲು ಕುಳಿತರು. ಒಬ್ಬರನ್ನೊಬ್ಬರು ರೇಗಿಸಿ ಅತ್ತೆ ಸೊಸೆ ಕೂಡಿ ಮಾಡಿದ ಕೋಡುಬಳೆ, ಚಕ್ಕುಲಿ ಮೇಯುತ್ತಾ ಕಾಲ ಕಳೆದರು. ಸಂಜೆಯಾದೊಡನೆ ಬಿದಿಗೆ ಚಂದ್ರದರ್ಶನವನ್ನು ಮಾಡಿದರು.

ತಮ್ಮ-ತಾಯಿ-ತಂದೆ ಹೊರೆತು ನಿಂತಾಗ ವಸಂತ ದು:ಖಿತಳಾದಳು. ಗಂಡನ ಪ್ರೀತಿಗೆ ಸೋತು ಮಗುವಾಗಿದ್ದರೂ ತಾಯಿಯ ಪ್ರೀತಿ ತವರಿನ ಬಂಧ ಅವಳ ಕಣ್ಣಲ್ಲಿ ನೀರು ಹರಿಸಿತ್ತು. ವಸಂತಳ ತಂದೆ ತಾಯಿ ಮಗಳನ್ನು ಒಳ್ಳೆಯ ಮನೆ ಸೇರಿಸಿದ್ದೇವೆ ಎಂಬ ಆತ್ಮತೃಪ್ತಿಯಿಂದ ಮಗ ಕಿರಣನ ಬಗ್ಗೆ ತಮ್ಮ ಗಮನವನ್ನು ಕೇಂದ್ರೀಕರಿಸಿದ್ದರು.

ತಂದೆ ಚಿಕ್ಕ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಓದುತ್ತಿರುವ ತಮ್ಮ ತನ್ನ ಕೊನೆಯ ವರ್ಷದ ಡಿಗ್ರಿಯಲ್ಲಿದ್ದಾನೆ. ಗೃಹಿಣಿಯಾದ ತಾಯಿಗೆ ಮಗಳೇ ಸ್ನೇಹಿತೆ, ಒಡನಾಡಿ ಎಲ್ಲವೂ. ತನ್ನೂರಿನ ಸರ್ಕಾರಿ ಕಾಲೇಜಿನಲ್ಲಿ ಡಿಗ್ರಿ ಮುಗಿಸಿದ ವಸಂತ ಕೆಲಸಕ್ಕೆ ಹೋಗುವ ಆಸೆ ಹೊಂದಿದ್ದಳು. ಆದರೆ ತಾಯಿ ತಂದೆ ತಮ್ಮ ಜವಾಬ್ದಾರಿ ಮುಗಿಸುವ ವಿಷಯವಾಗಿ ಬಲವಂತ ಪಡಿಸಿದಾಗ ಮದುವೆಗೆ ಒಪ್ಪಲೇ ಬೇಕಾಯಿತು. ತಮ್ಮ ಕಿರಣನಿಗೆ ಅಕ್ಕನ ಅಗಲಿಕೆಯ ನೋವು ಒಂದೆಡೆಯಾದರೆ, ಮದುವೆಯ ಸಂಭ್ರಮ ಒಂದೆಡೆ, ತಾಯಿ ತಂದೆ ಸಹ ಸಡಗರದಿಂದ ಮದುವೆಯ ತಯಾರಿ ಮಾಡತೊಡಗಿದರು. ಹೆಣ್ಣು ನೋಡುವ ಶಾಸ್ತ್ರಕ್ಕಾಗಿ ಬಂದಾಗಲೇ ಚೇತನ್ ಈ ಮನೆಗೆ ಮಗನೇನೋ ಎಂಬಂತೆ

ಅತ್ತೆ ಮಾವನವರೊಡನೆ ಬಹಳ ಪ್ರೀತಿಯಿಂದ ಮಾತನಾಡಿದ್ದಲ್ಲದೆ, ಭಾಮೈದುನನನ್ನು ಕಾಳಜಿಯಿಂದ ಮುಂದೇನು ಓದಬೇಕು? ಏನು ಮಾಡಬೇಕೆಂದೆಲ್ಲ ಚರ್ಚಿಸಿದನು. ವಸಂತಳನ್ನು ಚೇತನ್ ಮೊದಲಿನಿಂದಲೂ ಬಲ್ಲವನೇ. ಹಳ್ಳಿಯಲ್ಲಿ ಬೆಳೆದ ಹೆಂಡತಿ ಒಳ್ಳೆಯ ನಡೆ ನುಡಿ ಸಂಸ್ಕೃತಿ ಅರಿತವಳು. ಕಪಟವನ್ನೇ ಅರಿಯದವಳು. ಎಲ್ಲರನ್ನೂ ಪ್ರೀತಿಯಿಂದ ಕಾಣುವಳು. ಒಂದು ರೀತಿ ಬಯಸಿದ ಹೆಣ್ಣಿನ ಕೈಯನ್ನೇ ಹಿಡಿದಿದ್ದ ಚೇತನ್.

ಚೇತನನ ಈ ನಡವಳಿಕೆಗೆ ರಂಜಿನಿ ರಾಜೇಂದ್ರರವರ ಮನೆತನದ ಕೊಡುಗೆ ಅಪಾರ. ಸಂಸ್ಕಾರವಂತರ ಮನೆತನ ಅವರದ್ದಾಗಿದ್ದು, ಹಿಂದಿನಿಂದಲೂ ಉತ್ತಮ ಸಮಾಜ ಮುಖಿ ಕಾರ್ಯಗಳು ಮಾತ್ರವಲ್ಲ, ಸಂಬಂಧಗಳನ್ನು ಸಹ ಅಕ್ಕರೆಯಿಂದ ಕಾಪಾಡಿಕೊಂಡು ಬಂದವರು. ಲೋಭ, ಅನೃತ, ಕೃತ್ರಿಮ ತಿಳಿಯದ ಪಾಪ ಬೀರುಗಳು. ಇಂತಹ ವಂಶದ ಮಗನಾದ ಚೇತನ್ ಅನರ್ಘ್ಯ ರತ್ನವೇ ಸರಿ.ಮದುವೆಯ ಮೊದಲ ರಾತ್ರಿ ವಸಂತಳೊಡನೆ ಹಲವು ವಿಷಯಗಳನ್ನು ಚರ್ಚಿಸಿ ಅವಳ ಮುಗ್ಧತೆಗೆ ನಗುತ್ತಾ, ಪ್ರೀತಿ ತಮಾಷೆಯ ಸರಸದಿಂದ ಅವಳ ಮನಸ್ಸನ್ನು ಗೆದ್ದ ರಾಜಕುಮಾರ ಈತ. ಮದುವೆಯ ಪೂಜೆ ಪುನಸ್ಕಾರದಿಂದ ಆಯಾಸಗೊಂಡಿದ್ದ ವಸಂತಳ ಮನಸ್ಸನ್ನು ನೋಯಿಸದೆ, ತಾಯಿಯಂತೆ ಪ್ರೀತಿಸಿ, ಆಯಾಸಗೊಂಡ ದೇಹವನ್ನು ತನ್ನ ಪ್ರೀತಿಯ ಸ್ಪರ್ಶ ಆರೈಕೆಯಿಂದ ಸಂತೈಸಿದನು. ಮುಗ್ಧ ನಗು ಸಂತೋಷ ಸಲಿಗೆಯಿಂದ ಇಬ್ಬರ ಮನಸ್ಸು ದೇಹಗಳು ಒಂದಾದವು. ಇಂತಹ ಸಲಿಗೆ ಸಮರಸವನ್ನು ಮೊದಲ ರಾತ್ರಿಯೇ ಕಂಡ ವಸಂತ ಪತಿರಾಯನಿಗೆ ತನ್ನನ್ನೇ ಧಾರೆ ಎರೆದುಕೊಂಡಿದ್ದಳು.

ವಸಂತ ಚೇತನರ ದಾಂಪತ್ಯ ನೋಡುಗರ ದೃಷ್ಟಿ ತಾಕುವಂತೆ ಇತ್ತು. ಬೆಳಗಿನ ಸಮಯ ಅತ್ತೆ ಸೊಸೆ ಮನೆಗೆಲಸಗಳನ್ನು ಮುಗಿಸಿ ರೇಡಿಯೋ ಕೇಳುವುದು, ದಿನಪತ್ರಿಕೆ, ಕಥೆ ಕಾದಂಬರಿಗಳನ್ನು ಓದುತ್ತ ಅವನ್ನೇ ಚರ್ಚಿಸುತ್ತಾ ಮಧ್ಯಾಹ್ನವಾಗಿ ಬಿಡುತ್ತಿತ್ತು. ಮನೆಗೆ ವಾಪಸಾದ ಮಗನೊಂದಿಗೆ ಮಧ್ಯಾಹ್ನ ಊಟ ಮಾಡಿದ ನಂತರ ಎರಡು ಮೂರು ಗಂಟೆಗಳ ಖಾಸಗಿ ಸಮಯ ಮಗ ಸೊಸೆಯದಾದರೆ, ಅತ್ತೆ ಆಯಾಸ ಪರಿಹಾರಕ್ಕಾಗಿ ತಮ್ಮ ಕೊಠಡಿಗೆ ತೆರಳುವುದು ವಾಡಿಕೆ, ಜೊತೆಗೆ ಸಂಜೆ ಮನೆಗೆ ವಾಪಸ್ ಆಗುವ ಪತಿಗಾಗಿ ಕಾಯುವ ಕೆಲಸ ರಂಜಿನಿಯದಾಗಿತ್ತು. ಗಂಡ ಮನೆಗೆ ಬಂದ ನಂತರ ಕಾಫಿ ಕುಡಿದು ಜೊತೆಯಾಗಿ ಸಣ್ಣದೊಂದು ವಾಯುವಿಹಾರ, ಮಾರನೇ ದಿನಕ್ಕೆ ಬೇಕಾದ ಮನೆ ಬಳಕೆ ಸಾಮಾನುಗಳೊಂದಿಗೆ ಉದ್ಯಾನವನದ ಸ್ನೇಹಿತರೊಡಗೂಡಿ ಸಂಜೆಗತ್ತಲಾದಾಗ ಮನೆಗೆ ವಾಪಸ್ ಆಗುವುದು ಅತ್ತೆ ಮಾವನವರ ದಿನದ ರೂಢಿ. ಇತ್ತ ಮನೆಯಲ್ಲಿರುವ ವಸಂತ ಗಂಡನಿಗೆ ಒಮ್ಮೆಯೂ ಸಹ ಚಹಾ ಮಾಡಿ ಕೊಟ್ಟಿದ್ದಿಲ್ಲ. ಪ್ರತಿದಿನ ಅವಳನ್ನು ರೇಗಿಸಿ ಅವಳ ಹಸಿ ಮುನಿಸಿಗೆ ಮತ್ತಷ್ಟು ಮುದ್ದಿಸಿ ಪ್ರೀತಿಯ ಮಡದಿಗಾಗಿ ತಾನೇ ಚಹಾ ತಯಾರಿಸಿ ಜೊತೆಗೂಡಿ ಕುಡಿದ ನಂತರ ತನ್ನ ಸಂಜೆ ಕೆಲಸಕ್ಕೆ ಹೋಗಿ ರಾತ್ರಿ 8:30ಕ್ಕೆ ವಾಪಸ್ ಆಗುವುದು ಚೇತನನ ದಿನಚರಿ. ಒಟ್ಟಾಗಿ ರಾತ್ರಿಯ ಊಟ ಹರಟೆ ಇವು ಈ ಮನೆಯ ಅಭ್ಯಾಸ.

ವಸಂತಳಿಗೆ ಮಾತ್ರವಲ್ಲ ಮನೆಯಲ್ಲಿ ಯಾರಿಗೆ ಸ್ವಲ್ಪ ಏರುಪೇರು ಆದರೂ ಚೇತನ ತನಗೆ ಸರಿ ಇಲ್ಲವೇನೋ ಎಂಬಂತೆ ಕಾಳಜಿ ತೋರುವನು. ಅದರಲ್ಲೂ ಹೊಸ ಹೆಂಡತಿ ಬಂದ ಮೇಲೆ ಅವಳ ಬಗೆಗಿನ ಅಕ್ಕರೆ ಕಾಳಜಿ ಹೆಜ್ಜೆ ಹೆಜ್ಜೆಗೂ ತೋರುತ್ತಿದ್ದನು. ಆರೋಗ್ಯ ಸುರಕ್ಷತೆಗಳ ಬಗ್ಗೆ ಅವಳಿಗೆ ತಿಳಿಯದ ವಿಷಯಗಳನ್ನು ಶಿಕ್ಷಕರು ಶಿಷ್ಯನಿಗೆ ತಿಳಿಸಿ ಹೇಳುವಂತೆ ಹೇಳುತ್ತಿದ್ದನು. ಹೀಗಿರುವಾಗ ಒಮ್ಮೆ ಮಧ್ಯಾಹ್ನ ಊಟದ ಸಮಯದಲ್ಲಿ ಮನೆಗೆ ಬಂದಾಗ ತಾಯಿಯೊಬ್ಬಳೇ ಕಂಡಳು. ಮೊದಲ ಬಾರಿ ಕಾಣದ ಹೆಂಡತಿಗಾಗಿ ಮನಸ್ಸು ಕಣ್ಣು ಎಲ್ಲೆಡೆಯೂ ಹುಡುಕಿದವು. ಈ ಸಮಯದಲ್ಲಿ ಒಬ್ಬಳೇ ಎಲ್ಲೂ ಹೋಗಲು ಸಾಧ್ಯವಿಲ್ಲ. ಊರಿಂದ ಅತ್ತೆ ಮಾವನ ವಿಷಯ ಏನಾದರೂ ಬಂದು ಅಲ್ಲಿಗೆ ಹೊರಟಿರಬಹುದೇ? ಎಂದು ಯೋಚಿಸಿದನು. ಹಾಗೆ ಸೊಸೆ ಒಬ್ಬಳನ್ನೇ ಯಾವುದೇ ಕಾರಣಕ್ಕೂ ತಾಯಿ ಕಳುಹಿಸಲಾರರು ಎಂಬ ನಂಬಿಕೆ. ಮಗನ ತಾಕಲಾಟ ಅರಿತರೂ ಸ್ವಲ್ಪ ಸತಾಯಿಸುವ ಮನಸ್ಸಿನಿಂದ ತಾಯಿ ಕಾಣದಂತೆ ಸುಮ್ಮನಾದಳು. ಕೊನೆಗೂ ಮಗನ ಬಾಯಿಂದ ಎಲ್ಲಿ ನಿನ್ನ ಸೊಸೆ? ಎಂಬ ಪ್ರಶ್ನೆ ಹೊರ ಬಂದಿತ್ತು. ನನ್ನ ಸೊಸೆಯೇ! ನಿನ್ನ ಹೆಂಡತಿ ಅಲ್ಲವೇ? ಎಂದವರು, ಬೆಳಗ್ಗೆ ತಿಂಡಿ ತಿಂದಳು. ತಿಂಗಳ ಹೊಟ್ಟೆ ನೋವೆಂದು ಮಲಗಿದ್ದಾಳೆ. ಅತಿಥಿ ಕೋಣೆಯಲ್ಲಿ ಹೋಗಿ ನೋಡು ಎಂದಳು. ಅಮ್ಮ ಹೇಳಿದ್ದೆ ತಡ ಒಂದೇ ಜಿಗಿತಕ್ಕೆ ಹೆಂಡತಿ ಬಳಿ ಗಾಬರಿಯಿಂದ ಹೋಗಿ ಏನಾಯಿತು ಎಂದು ವಿಚಾರಿಸಿದನು. ಸಂಕೋಚದ ಮುದ್ದೆಯಾಗಿ ಹಳ್ಳಿಯ ಮಡಿ ಮೈಲಿಗೆ ಅಂತರಗಳ ಬಗ್ಗೆ ಮುಜುಗರ ಪಡುತ್ತಿದ್ದ ಹೆಂಡತಿಗೆ ಹೆಣ್ಣಿನ ದೇಹದ ಬದಲಾವಣೆಗಳ ಬಗ್ಗೆ, ವೈಜ್ಞಾನಿಕವಾಗಿ ದೇಹದ ರಚನೆ ಕ್ರಿಯೆಗಳ ಬಗ್ಗೆ ಹೇಳುತ್ತಾ, ಈ ಸಮಯದಲ್ಲಿ ಸೊಂಟ ಕಾಲುಗಳು ನೋಯುತ್ತವೆ. ನೀನು ಆರಾಮವಾಗಿ ಮಲಗು ಎಂದು ಕಾಲೊತ್ತಲು ಪ್ರಾರಂಭಿಸುತ್ತಾನೆ. ವಸಂತ ಭಯಬೀತಳಾಗಿ ಏನಿದು? ನಿಮ್ಮ ಕೆಲಸ ನನ್ನ ಮುಟ್ಟಬೇಡಿ. ಅದರಲ್ಲೂ ಇದೆಲ್ಲ ಏನು? ಎಂದರೆ ನಾನು ನಿನ್ನ ಸೇವೆ ಮಾಡಬಾರದೆ? ನಿನ್ನ ಕಷ್ಟ ನೋವಿಗೆ ನಾನೇ ಸ್ಪಂದಿಸದಿದ್ದರೆ ಹೇಗೆ? ಆರಾಮಾಗಿ ಊಟ ಮಾಡಿ ಮಾತ್ರೆ ನುಂಗಿ ಮಲಗು ಸರಿ ಹೋಗುತ್ತದೆ ಎಂದವನು, ತಾನೇ ಅಡಿಗೆ ಮನೆಗೆ ಹೋಗಿ ಅನ್ನ ಕಲಸಿ ತಾಯಿಯ ಜೊತೆ ಒಳಬಂದು ಹೆಂಡತಿಗೆ ಮಗುವಿಗೆ ತಿನ್ನಿಸುವಂತೆ ರಮಿಸಿ ತಿನ್ನಿಸಲು ಪ್ರಾರಂಭಿಸಿದನು. ಬಹಳ ನಾಚಿಕೆಯಿಂದ ಮುದುಡಿದ ಸೊಸೆಗೆ, ಅತ್ತೆ ನನ್ನನ್ನು ಸಹ ಹೀಗೆ ನೋಡಿಕೊಳ್ಳುತ್ತಾನೆ. ನೀನೇಕೆ ಸಂಕೋಚ

ಪಡುವೆ? ನಾವೆಲ್ಲ ಒಂದೇ. ಒಬ್ಬರನ್ನೊಬ್ಬರು ನಾವು ನೋಡಿಕೊಳ್ಳದೆ ಇನ್ಯಾರು ನೋಡಿಕೊಳ್ಳುವರು? ಎಂದು ಹೇಳುತ್ತಾ ಅವಳ ಸಂಕೋಚ ದೂರ ಮಾಡಿದರು.

ರಾತ್ರಿ ಆಸ್ಪತ್ರೆಯಿಂದ ಮನೆಗೆ ಬಂದ ಪತಿ ತನಗಾಗಿ ಒಂದು ಬಣ್ಣದ ಪೆಟ್ಟಿಗೆಯನ್ನು ಕೊಡುಗೆಯಾಗಿ ತಂದಿದ್ದರು. ಈ ಸಮಯದಲ್ಲಿ ಇದೇನು ಉಡುಗೊರೆ ಎಂದು ಕುತೂಹಲದಿಂದ ನೋಡಿದಳು ವಸಂತ, ಆದರೆ ಗಂಡನು ರೂಮಿನ ಬಾಗಿಲು ಮುಚ್ಚಿ ಬಳಿ ಬಂದಾಗ, ಪತಿಯನ್ನು ಭಯ ಮಿಶ್ರಿತ ನಾಚಿಕೆಯಿಂದ ನೋಡಿದಳು. ಆದರೆ ಬಳಿ ಬಂದು ಸನಿಹ ಕುಳಿತವನು ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು, ನಾನು ನಿನಗಾಗಿ ಮೆನ್ಸ್ಟ್ರುಯಲ್ ಕಪ್ಪೊಂದನ್ನು ಖರೀದಿಸಿ ತಂದಿದ್ದೇನೆ. ಇದನ್ನು ನೀನು ಉಪಯೋಗಿಸು ಇದರಿಂದ ನಿನಗೆ ಈ ದಿನಗಳು ಬಹಳ ಆರಾಮಾಗಿ ಅನಿಸುತ್ತದೆ ಎಂದು ಹೇಳುತ್ತಾನೆ. ಅದನ್ನು ಹೇಗೆ ತಯಾರಿಸಿದ್ದಾರೆ. ಅದರ ಸಾಧಕ ಬಾದಕಗಳೇನು? ಎಲ್ಲವನ್ನು ವಿವರಿಸುತ್ತಾನೆ. ಮೊದಲಿಗೆ ಬಳಸಲು ಅಂಜಿದರೂ ತನ್ನ ಪತಿಯೇ ವೈದ್ಯರು ಅವರು ಹೇಳಿದ ಮೇಲೆ ಭಯವೇನು ಎಂದು ಮಾರನೆಯ ದಿನವೇ ಬಳಕೆ ಮಾಡಲು ಪ್ರಯತ್ನಿಸಿದಳು. ಎರಡು ಮೂರು ಬಾರಿ ಉಪಯೋಗಿಸಿದ ನಂತರ ಅವಳಿಗೆ ಪಶ್ಚಾತ್ತಾಪವಾಗ ತೊಡಗಿತು ಕಾರಣ ಇದರ ಬಗ್ಗೆ ನನಗೆ ಗೊತ್ತಿದ್ದರೆ 10-12 ವರ್ಷಗಳಲ್ಲಿ ನನ್ನಿಂದ ಭೂಮಿತಾಯಿಯಲ್ಲಿ ಬೆರೆತ ಪ್ಲಾಸ್ಟಿಕನ್ನು ಎಷ್ಟೊಂದು ಕಡಿಮೆ ಮಾಡಬಹುದಾಗಿತ್ತು. ಇನ್ನಾದರೂ ನನ್ನಿಂದ ಪ್ಲಾಸ್ಟಿಕ್ ಬಳಕೆ ಸ್ವಲ್ಪಮಟ್ಟಿಗೆ ಕಡಿಮೆಯಾಗುವುದು ಮಾತ್ರವಲ್ಲ, ಈ ದಿನಗಳಲ್ಲಿ ಅನುಭವಿಸುತ್ತಿದ್ದ ಹಿಂಜರಿಕೆ ಹಿಂಸೆಗಳು ಕಡಿಮೆಯಾಗಿದ್ದಕ್ಕೆ ಖುಷಿ ಪಟ್ಟಳು.

ಮದುವೆಯ ಮೊದಲ ವರ್ಷ ಪೂರ್ತಿ ಮಧು ಮಕ್ಕಳಿಗೆ, ಎರಡೂ ಮನೆಯವರೆಗೆ ಬರೀ ಸಂಭ್ರಮವೇ. ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವುದು, ವರ್ಷ ಪೂರ್ತಿ ಹಬ್ಬಗಳನ್ನು ಒಟ್ಟಿಗೆ ಆಚರಿಸುವುದು. ಸ್ನೇಹ ಸಂಬಂಧ ಭಾಂದವ್ಯ ಗಟ್ಟಿ ಮಾಡಿಕೊಳ್ಳುವುದು ಇದರಿಂದಲೇ ಅಲ್ಲವೇ? ಚೇತನನ ಮನೆಯಲ್ಲಿ ಯುಗಾದಿ ಒಟ್ಟಿಗೆ ನಡೆದರೆ ಗೌರಿ ಹಬ್ಬಕ್ಕೆ ಹೆಂಡತಿ ತವರಿಗೆ ಹೋಗಬೇಕು. ಒಲ್ಲದ ಮನಸ್ಸಿನಿಂದ ಹೆಂಡತಿಯನ್ನು ಕಳುಹಿಸಲು ಒಪ್ಪಿದನು. ಅತ್ತೆ ಮಾವ ಭಾಮೈದುನನಿಗೆ ಉಡುಗೊರೆ ತರುವುದನ್ನು ಮರೆಯಲಿಲ್ಲ. ತಾಯಿ ಸಹ ಹತ್ತಾರು ತಿಂಡಿ ಕೈಯಾರೆ ಮಾಡಿ ಸೊಸೆಯೊಡನೆ ತವರಿಗೆ ಕಳುಹಿಸಿದಳು. ಎರಡು ದಿನ ಮಾವನ ಮನೆಯಲ್ಲಿದ್ದು, ಹಬ್ಬಕ್ಕೆ ಮುಂಚಿತವಾಗಿ ತನ್ನ ಮನೆಗೆ ಚೇತನ್ ವಾಪಾಸ್ಸಾದನು.

ಹತ್ತು ದಿನಗಳು ಹೆಂಡತಿ ಇಲ್ಲದೆ ಕೆಲಸದಲ್ಲಿ ಮಗ್ನನಾದ ಚೇತನ ನಂಬಿ ಬಂದ ರೋಗಿಗಳಿಗೆ ಚಿಕಿತ್ಸೆ ನೀಡುವ ಶ್ವಾಸಕೋಶ ತಜ್ಞ, ಚಿಕ್ಕ ವಯಸ್ಸಿಗೆ ವೈದ್ಯ ವೃತ್ತಿಯಲ್ಲಿ ತನ್ನ ಕೈಗುಣದಿಂದ, ರೋಗಿಗಳಿಗೆ ಪ್ರೀತಿಯಿಂದ ಮಾತನಾಡಿಸಿ, ನೀಡುತ್ತಿದ್ದ ಚಿಕಿತ್ಸೆಯಿಂದ, ಆಸ್ಪತ್ರೆಯ ಕೆಲಸಗಾರರೆಲ್ಲರಿಗೂ ಪ್ರೀತಿ ಪಾತ್ರನಲ್ಲದೆ, ಜನಪ್ರಿಯನಾಗಿದ್ದನು. ರೋಗಿಗಳಿಗೆ ಹೆಚ್ಚು ಹೊರೆಯಾಗದಂತೆ ಇವನೆಡೆಗೆ ಒಮ್ಮೆ ಬಂದವರು ಮತ್ತೊಮ್ಮೆ ಬರುವಂತೆ ಗುಣಮುಖರಾಗಿ ನಗು-ಮೊಗದಿಂದ ಮನೆಗೆ ತೆರಳುವಂತೆ ಮಾಡುವ ಮೋಡಿ ದೈವದತ್ತವಾಗಿ ಕರುಣಿಸಿತ್ತು. ಏನಿಲ್ಲ ಎಂದರು ಬೆಳಿಗ್ಗೆ ಎಂಟರಿಂದ ಹತ್ತು ರೋಗಿಗಳು ರಾತ್ರಿಯೂ ಅಷ್ಟೇ ರೋಗಿಗಳು ಬರುವುದು ಸಾಮಾನ್ಯವಾಗಿತ್ತು. ಹೆಚ್ಚಾಗಿ ವಯಸ್ಸಾದವರಿಗೆ ಈ ತೊಂದರೆ ಇದ್ದುದರಿಂದ ಬಂದವರಿಗೆ ಚೇತನನನ್ನು ನೋಡಿ ಅರ್ಧ ರೋಗ ವಾಸಿಯಾದಂತೆ ಅನಿಸುತ್ತಿತ್ತು. ಹೀಗಿರುವಾಗ ಒಮ್ಮೆ ಇವನನ್ನು ತ್ವರಿತವಾಗಿ ನೋಡಬೇಕೆಂದು ಒಬ್ಬಳು ಮಹಿಳೆ ಯಾವುದೋ ಕಾರ್ಯಕ್ರಮಕ್ಕೆ ಹೋಗಿದ್ದವಳು ಅಲ್ಲಿಂದಲೇ ಉಸಿರಾಟದ ತೊಂದರೆಯಾಗಿದೆ ಎಂದು ಡಾಕ್ಟರ್ ಬಳಿ ಬಂದಳು. ತಕ್ಷಣವೇ ಅವಳನ್ನು ಪರೀಕ್ಷಿಸಿದ ಚೇತನ್ ಅವಳನ್ನು ವಿಶೇಷ ನಿಗಾ ಕೊಠಡಿಗೆ ವರ್ಗಾಯಿಸಲು ಹೇಳಿದನು. ತನ್ನ ಸ್ನೇಹಿತೆಯೊಡಗೂಡಿ ಬಂದಿದ್ದ ಆಕೆ ತನ್ನ ಒಡವೆಗಳನೆಲ್ಲ ಬಿಚ್ಚಿ ಒಂದು ಕೈಬ್ಯಾಗಿನಲ್ಲಿಟ್ಟು ವಿಶೇಷ ನಿಗಾ ಕೊಠಡಿಗೆ ಹೊರಟಳು. ಒಂದು ರಾತ್ರಿ, ಪೂರ್ತಿ ಒಂದು ಹಗಲು ಚಿಕಿತ್ಸೆ ಪಡೆದ ನಂತರ ಗುಣಮುಖಳಾದ ಆಕೆ ವೈದ್ಯರಿಗೆ ವಂದಿಸಿ ತನ್ನ ಮನೆ ಸೇರಿದಳು. ಅವಳ ಒಡವೆಯ ಚೀಲ ಮಾತ್ರ ವೈದ್ಯರಲ್ಲೆ ಉಳಿದುಬಿಟ್ಟಿತು. ಅದರ ಕಡೆಗೆ ಗಮನ ಅವಳಿಗೂ ಹೋಗಲಿಲ್ಲ. ಜೊತೆಯಾಗಿ ಬಂದವಳಿಗಾಗಲೀ ವೈದ್ಯರಿಗಾಗಲೀ ಇರಲಿಲ್ಲ.

ಅಂದು ಮಧ್ಯಾಹ್ನ ಕೆಲಸ ಮುಗಿಸಿ ಊಟಕ್ಕಾಗಿ ಮನೆಗೆ ಬಂದಾಗ ಚೇತನನಿಗೆ ಆಶ್ಚರ್ಯ ಕಾದಿತ್ತು. ದಿನವೂ ಅಮ್ಮನೇ ಬಂದು ಬಾಗಿಲು ತೆರೆಯುತ್ತಿದ್ದಳು. ಇಂದು ವಸಂತಳ ಮುಖ ನೋಡಿ ಹರುಷಗೊಂಡನು. ಒಬ್ಬಳೇ ಬಂದಳೇನು? ಎಂದು ಗಾಬರಿಗೊಂಡವನಿಗೆ ಮಾವನವರ ಧ್ವನಿ ಕೇಳಿ ಸಮಾಧಾನವಾಯಿತು. ಮುಂದಿನ ಹಬ್ಬಕ್ಕೆ ತಾವುಗಳು ಇಲ್ಲಿಗೆ ಬರುವುದಾಗಿಯೂ, ದೀಪಾವಳಿ ಹಬ್ಬಕ್ಕೆ ಬೀಗರ ಸಮೇತ ಮಗಳು ಅಳಿಯನವರು ಹಳ್ಳಿಗೆ ಬರಬೇಕಾಗಿ ತಿಳಿಸಿ, ಒಂದೆರಡು ದಿನ ಮಗಳ ಮನೆಯಲ್ಲಿ ಸಂತೋಷದಿಂದಿದ್ದ ತಂದೆ ಊರಿಗೆ ಹೊರಟರು. ಹತ್ತು ದಿನದಿಂದ ಪತಿಯ ಪ್ರೀತಿ ಸಾಮಿಪ್ಯ ಕಳೆದುಕೊಂಡಿದ್ದ ವಸಂತ ಸಂತಸದಿಂದಲೇ ತಂದೆಯನ್ನು ಬೀಳ್ಕೊಟ್ಟಳು. ದಿನಗಳು ಉರುಳಿದವು.

ಮದುವೆಯ ವಾರ್ಷಿಕೋತ್ಸವ ಹತ್ತಿರ ಬಂದಿತ್ತು. ಹೆಂಡತಿಗಾಗಿ ಒಡವೆಗಳನ್ನು ಮಾಡಿಸಿ ಅವಳಿಗೆ ತಿಳಿಯದಂತೆ ಆ ದಿನ ಬೆಳಗ್ಗೆ ಎದ್ದೊಡನೆ ಪ್ರೇಮ ನಿವೇದನೆ ಮಾಡಿ ಉಡುಗೊರೆ ಕೊಡುವಾಗ ಅವಳ ಕಣ್ಣಲ್ಲಿನ ಮಿಂಚು, ಆಶ್ಚರ್ಯ, ಸಂತೋಷ ನೋಡಬೇಕೆಂದು ನಿರ್ಧರಿಸಿದನು. ಯಾವ ರೀತಿ ಒಡವೆ ಮಾಡಿಸುವುದೆಂಬ ವಿಷಯವಾಗಿ ತಲೆ ಕೆಡಿಸಿಕೊಂಡಿದ್ದ ಚೇತನನಿಗೆ ಅವನ ದುರಾದೃಷ್ಟವಾಗಿ ರಮಾ ಎಂಬ ಆ ಮಹಿಳಾ ರೋಗಿ ಬಿಟ್ಟು ಹೋಗಿದ್ದ ಒಡವೆ ಚೀಲ ದೊರೆಯಿತು. ಎಷ್ಟು ಸುಂದರವಾದ ಒಡವೆಗಳು ಒಂದು

ಉದ್ದ ಕಂಠಿಹಾರ, ಒಂದು ಸಣ್ಣದು ಎರಡರಲ್ಲೂ ಲಕ್ಷ್ಮೀದೇವಿಯ ವಿಗ್ರಹ, ಕಿವಿ ಓಲೆಯಲ್ಲಿ ಸಣ್ಣ ಲಕ್ಷ್ಮಿ ಕೆಂಪು ಬಣ್ಣದಿಂದ ಕಂಗೊಳಿಸುತ್ತಿದ್ದಾಳೆ. ಅವಕ್ಕೆಲ್ಲ ಸರಿ ಹೊಂದುವ ನಾಲ್ಕು ಅಗಲವಾದ ಬಳೆಗಳು ನೋಡಿದ ತಕ್ಷಣ ನಾನು ಹೀಗೆ ಮಾಡಿಸಬೇಕೆಂದು ನಿರ್ಧರಿಸಿದನು. ರಮಾ ಚಿಕಿತ್ಸೆಗೆ ಬಂದಿದ್ದು, ಅವಳಿದ್ದ ಸ್ಥಿತಿ ನೆನಪಿಗೆ ಬಂದಿತು. ಕೈಗೆ ದೊರೆತ ಒಡವೆಯನ್ನು ಅವಳಿಗೆ ತಲುಪಿಸಬೇಕು. ರಮಾ ಬಂದ ದಿನ ಹುಡುಕಿ ಅವಳ ವಿಳಾಸ, ದೂರವಾಣಿ ಎಲ್ಲವನ್ನು ತೆಗೆದುಕೊಂಡನು. ತಾನೇ ಖುದ್ದಾಗಿ ಮನೆಗೆ ಹೋಗಿ ತಲುಪಿಸಬೇಕೆಂದು ಒಡವೆ ಚೀಲವನ್ನು ಹಿಡಿದು ಹೊರಟನು.ರಮಾಳ ವಿಳಾಸ ಹತ್ತಿರದಲ್ಲಿದ್ದರೂ ಒಮ್ಮೆ ದೂರವಾಣಿ ಕರೆ ಮಾಡಿ ನೋಡೋಣವೆಂದು ಪ್ರಯತ್ನಿಸಿದನು. ಕರೆಯನ್ನು ಯಾರೂ ಸ್ವೀಕರಿಸದಿದ್ದಾಗ ತಾನೆ ವಿಳಾಸ ಅರಸುತ್ತ ಮನೆ ತಲುಪಿದನು. ಎಷ್ಟು ಬಾರಿ ಕರೆಗಂಟೆ ಬಾರಿಸಿದರು ಒಳಗಿನಿಂದ ಯಾರು ಬರಲಿಲ್ಲ. ಹತ್ತು ಹದಿನೈದು ನಿಮಿಷದ ನಂತರ ಪಕ್ಕದ ಮನೆಯ ಅಜ್ಜಿ ಒಂದು ಹೊರ ಬಂದು, ಹಲವು ತಿಂಗಳುಗಳಿಂದ ಆ ಮನೆಯಲ್ಲಿ ಯಾರು ಇಲ್ಲವೆಂದು ಒಬ್ಬಳೇ ಹುಡುಗಿ ವಾಸವಿದ್ದು, ಅವಳ ಹಲವು ಸ್ನೇಹಿತರು ಬಂದು ಹೋಗುತ್ತಿದ್ದುದ್ದಾಗಿಯೂ ತಿಳಿಸಿದಳು. ರಮಾ ಸಿಗದ ನಿರಾಸೆಯಿಂದ ವಾಪಾಸಾದ ಚೇತನನ ತಲೆಯಲ್ಲಿ ಇನ್ನೊಂದು ವಿಷಯ ಕೊರೆಯಲು ಪ್ರಾರಂಭಿಸಿತು. ಈಗ ಈ ಒಡವೆ ಏನು ಮಾಡುವುದು. ಇದರ ಮಾಲಿಕಳು ಸಿಗಲಿಲ್ಲವಲ್ಲ. ರಾತ್ರಿಯೆಲ್ಲಾ ಒಡವೆಯ ಚಿಂತೆ. ಬೆಳಗಿನ ಹೊತ್ತಿಗೆ ಆ ಒಡವೆಗಳನ್ನೇ ಹೆಂಡತಿಗೆ ವಿವಾಹ ವಾರ್ಷಿಕೋತ್ಸವದ ದಿನ ಕೊಡುವುದಾಗಿ ನಿರ್ಧರಿಸಿ ಬಿಟ್ಟನು. ತನ್ನಲ್ಲಿರುವ ಒಡವೆಗೆ ಹೊಂದುವಂತೆ ಇಬ್ಬರ ಹೆಸರಿನ ಮೊದಲ ಅಕ್ಷರ ಬರುವಂತೆ ಉಂಗುರವನ್ನು ಮಾಡಿಸಿದನು. ಸಂಭ್ರಮದಿಂದ ಸರಳವಾಗಿ ವಿವಾಹ ವಾರ್ಷಿಕೋತ್ಸವದ ಕಾರ್ಯಕ್ರಮವು ಮುಗಿಯಿತು.

ಮತ್ತೊಂದು ಯುಗಾದಿಯ ಆಗಮನ ಮಾವ ಸುಬ್ಬರಾಯರು ಹೇಳಿದಂತೆ ಮನೆಯವರೆಲ್ಲಾ ಯುಗಾದಿಗಾಗಿ ಹಳ್ಳಿಗೆ ಹೊರಟರು. ಎಲ್ಲರೂ ಎರಡು ದಿನ ಮುಂಚಿತವಾಗಿಯೇ ಹಳ್ಳಿಯನ್ನು ಸೇರಿದರು. ಇಡೀ ಊರಿಗೆ ಊರೇ ಹಬ್ಬದ ತಯಾರಿಯಲ್ಲಿ ತೊಡಗಿತ್ತು. ಮೊದಲ ದಿನ ನೀರು ತುಂಬುವುದೇ ಹಳ್ಳಿಯಲ್ಲಿ ಸಡಗರ. ಕೊಡಗಳಿಗೆ ಹೂವಿನ ಮಾಲೆ ಹಾಕಿ ಬಾವಿಯಿಂದ ಹೆಂಗಳೆಯರು ನೀರನ್ನು ಸೇದಿ ತಂದು ದೊಡ್ಡ ದೊಡ್ಡ ಕೊಳಗಗಳಲ್ಲಿ ತುಂಬಿಸುವುದು. ಮನೆ ಹೊರಗೆ ಬಯಲಿನಲ್ಲಿ ಗಂಡು ಮಕ್ಕಳಿಗೆ ಎಣ್ಣೆ ಹಚ್ಚಿ, ಬಿಸಿಲಿನಲ್ಲಿ ಕೂರಿಸಿರುತ್ತಾರೆ. ದೊಡ್ಡದಾಗಿ ಸಗಣಿಯಿಂದ ಸಾರಿಸಿ ರಂಗೋಲಿ ಬಿಡಿಸಿದ ಸ್ಥಳದಲ್ಲಿ ಒಲೆ ಹಚ್ಚಿ ನೀರನ್ನು ಕಾಯಿಸಿ ಎಲ್ಲರಿಗೂ ಸ್ನಾನ ಮಾಡಿಸುವುದು ಸುಂದರ ಕಾರ್ಯಕ್ರಮ. ಹೆಣ್ಣುಮಕ್ಕಳು ಹೊರಗೆ ಕಾದ ನೀರನ್ನು ಬಿಂದಿಗೆಯಲ್ಲಿ ತುಂಬಿ ಒಳಗಡೆ ಸ್ನಾನ ಮಾಡಿ, ಮುಡಿ ತುಂಬಾ ಹೂವು ಮುಡಿದು, ಹೊಸ ಬಟ್ಟೆಗಳನ್ನು ಧರಿಸಿ ಸಿಂಗರಿಸಿಕೊಂಡರೆ, ಮಕ್ಕಳು ಸಹ ಹೊಸ ವರ್ಷವನ್ನು ಸ್ವಾಗತಿಸಲು ಅಭ್ಯಂಜನವನ್ನು ಮಾಡಿ ಬಣ್ಣ ಬಣ್ಣದ ಹೊಸ ಉಡುಪನ್ನು ಧರಿಸಿ, ತಿನ್ನಲು ಸಿಹಿ ತಿಂಡಿಗಳು ಬೇಕೆಂದು ಅಮ್ಮನ ಬಳಿ ಹಠ ಹಿಡಿಯುತ್ತಾರೆ. ಈ ದಿನ ಯಾರು ಯಾರನ್ನು ಬೈಯ್ಯುವಂತಿಲ್ಲ. ರೀತಿ ರಿವಾಜುಗಳನ್ನು ಮಾಡುವಂತಿಲ್ಲ. ಹಬ್ಬದ ಹಿಂದಿನ ದಿನವೇ ಜೂಜಾಟ ಪ್ರಾರಂಭ, ಎಲ್ಲರ ಮನೆ ಮುಂದಿನ ಜಗಲಿಯಲ್ಲಿ ಆಟಗಳು ಪ್ರಾರಂಭವಾಗುತ್ತದೆ. ಆಟ ಒಂದು ಮನೆಯಿಂದ ಇನ್ನೊಂದು ಮನೆಗೆ ಮುಂದುವರೆಯುತ್ತಾ, ನೋಡಿ ಪ್ರೋತ್ಸಾಹಿಸುವವರೊಡಗೂಡಿದ ಗುಂಪು ಮುಂದೆ ಮುಂದೆ ಇಡೀ ದಿನ ಸಾಗುತ್ತಿರುತ್ತದೆ. ಹಬ್ಬದ ದಿನ ಬೆಳಿಗ್ಗೆ ಬೇಗನೆ ಎಲ್ಲರ ಮನೆಯವರೂ ಎದ್ದು, ಮನೆ ಮುಂದೆ ಸ್ವಚ್ಛಗೊಳಿಸಿ, ದೊಡ್ಡ ದೊಡ್ಡ ರಂಗೋಲಿ ಹಾಕಿ, ಬಾಗಿಲಿಗೆ ಶೃಂಗಾರ ಮಾಡುವುದು ಭರದಿಂದ ಸಾಗುತ್ತಿರುತ್ತದೆ.

ಚೇತನ್ ಎಲ್ಲವನ್ನು ಆಸಕ್ತಿಯಿಂದ ಆಸ್ವಾದಿಸುತ್ತಿದ್ದನು. ನಗರದಲ್ಲಿನ ನೀರಸ ಹಬ್ಬದ ಆಚರಣೆ ಇಲ್ಲಿ ಆಸಕ್ತಿ ತರಿಸುತ್ತಿತ್ತು. ಎಲ್ಲರಿಗೂ ಬೇವು ಬೆಲ್ಲ ತೀರ್ಥ ಪ್ರಸಾದ ವಿನಿಯೋಗವಾದ ನಂತರ ಅಕ್ಕಪಕ್ಕದವರಿಗೆ ಒಬ್ಬರಿಗೊಬ್ಬರು ಶುಭಾಶಯ, ಬೇವು ಬೆಲ್ಲ ವಿನಿಮಯ ಮಾಡಿಕೊಳ್ಳುತ್ತಾರೆ. ವಿಶೇಷವಿರುವುದೇ ಮಧ್ಯಾಹ್ನದ ನಂತರ ಹಳ್ಳಿ ಸೊಗಡಿನ ಆಟಗಳು ಚಿನ್ನಿದಾಂಡು, ಕೋಲಾಟ ಬುಗುರಿ, ಚವೇ, ಮಡಿಕೆ ಒಡೆಯೋ ಆಟ ಸಂಜೆಯವರೆಗೂ ನಡೆಯುತ್ತದೆ. ನಂತರ ಪಂಚಾಂಗ ಶ್ರವಣ ಗೋಧೂಳಿ ಲಗ್ನದಲ್ಲಿ ಪ್ರಾರಂಭವಾಗುತ್ತದೆ. ಅದರಲ್ಲಿ ಹೊಸ ವರ್ಷದಲ್ಲಿ ಯಾವ ಯಾವ ರಾಶಿಯವರಿಗೆ ಏನೇನು ಫಲಗಳಿವೆ ಹೇಳುತ್ತಾರೆ. ಪುರೋಹಿತರು ಆದಾಯ, ವ್ಯಯ, ಮಳೆ, ಬೆಳೆಗಳ ಚರ್ಚೆ ಮಾಡುವರು. ಭೂಮಿ ಉಳುವವರಿಗೆ ಶುಭದಿನ ಯಾವುದು ಎಂಬುದನ್ನು ಸಹ ಹೇಳುವರು. ಪಂಚಾಂಗ ಶ್ರವಣಕ್ಕೆ ಹೊರಟು ನಿಂತ ವಸಂತಾಳನ್ನು ನೋಡಿ ಅಮ್ಮ ಗದರುತ್ತಾಳೆ. ಹೀಗೆ ಹೋದರೆ ದೃಷ್ಟಿ ತಾಕೀತು ಎಂದು ದೃಷ್ಟಿ ಬೊಟ್ಟು ಇಡುತ್ತಾಳೆ. ಚೇತನ್ ಅವಳ ಸೌಂದರ್ಯಕ್ಕೆ ಉಬ್ಬಿ ಹೋಗುತ್ತಾನೆ. ತಾನು ಅವಳಿಗೆ ಕೊಟ್ಟ ಒಡವೆಗಳನ್ನೆಲ್ಲ ಧರಿಸಿ ಸಾಕ್ಷಾತ್ ಲಕ್ಷ್ಮಿಯೇ ಧರೆಗೆ ಇಳಿದಿರುವಳೇನೋ? ಎಂಬಂತೆ ವಸಂತ ಚೇತನನ ಮನಸ್ಸಿನಲ್ಲಿ ಕೂತುಬಿಡುತ್ತಾಳೆ. ಪಂಚಾಂಗ ಶ್ರವಣದ ನಂತರ ಚಂದ್ರೋದಯದಲ್ಲಿ ಊರಿನ ಎಲ್ಲರೂ ಭಕ್ತಿಯಿಂದ ಚಂದ್ರ ದರ್ಶನ ಮಾಡಿ ಊರಿಗೆ ಒಳಿತನ್ನು ಬೇಡುತ್ತಾರೆ.

ಚಂದ್ರ ದರ್ಶನ ಎಂದರೆ ಇದು ಸಾಮಾನ್ಯ ಚೌತಿಯಂತೆ ಬೇಡವೆಂದರೂ ಎದ್ದು ಕಾಣುವ ಚಂದ್ರನಲ್ಲ. ಬೆಳ್ಳಿ ಮೋಡದೊಳಗೆ ಅವಿತು ಕುಳಿತ ಬಿಳಿ ಚಂದ್ರ ಇವನನ್ನು ಹುಡುಕುವುದೇ ಒಂದು ಪಂದ್ಯ. ಯಾವ ಭಾಗದಲ್ಲಿ ಕಾಣಬಹುದು ಎಂದು ದೊಡ್ಡವರು ಊಹೆ ಮಾಡಿದ ನಂತರ

ಎಲ್ಲರೂ ಆಕಾಶದತ್ತ ಮುಖ ಮಾಡಿ ಹುಡುಕುವ ಕೆಲಸ ಪ್ರಾರಂಭ. ಮದುವೆಯಲ್ಲಿ ವಧು-ವರರು ಕೊಡದಲ್ಲಿ ಉಂಗುರ ಹುಡುಕುವಂತೆ ಕಣ್ಣಿಗೆ ಕಂಡರೂ ತಕ್ಷಣವೇ ಆ ದೃಷ್ಟಿಯಿಂದ ಜಾರಿ ಹೋಗುವ ಕಳ್ಳ ಚಂದ್ರ, ಎಂದರೆ ಕಂಡರೂ ಕಾಣದ ಒಂದು ಬೆಳ್ಳಿಗೆರೆ ಮಾತ್ರ. ಇಂತಹ ಜಾಣ ಚಂದ್ರನನ್ನು ಹುಡುಕುವುದು ಹೇಗೆ? ಅವನ ಪತ್ತೆಗಾಗಿ ಪಂದ್ಯಗಳ ಬಾಜಿ. ಚಿಕ್ಕಪುಟ್ಟ ಕೊಡುಗೆಗಳ ಸವಾಲು ಇದ್ದೇ ಇರುತ್ತದೆ. ಅದು ಎಷ್ಟು ಸೂಕ್ಷ್ಮವಾಗಿ ಇಬ್ಬರ ನಡುವೆ ನಡೆಯುತ್ತದೆ ಎಂದರೆ ಪಕ್ಕದಲ್ಲಿರುವವರ ಗಮನಕ್ಕೂ ಬಾರದಂತಿರುತ್ತದೆ. ಈಗ ಚೇತನ್ ಹೇಳುತ್ತಾನೆ 'ನಾನು ನಿನಗೆ ಚಂದ್ರನನ್ನು ತೋರಿಸುತ್ತೇನೆ ಅದಕ್ಕೆ ಬದಲಾಗಿ ನನಗೆ ನೀನೇನು ಕೊಡುವೆ' ವಸಂತಾಳಿಗೆ ಅವನ ಮುಖವನ್ನು ನೋಡಿದೊಡನೆ ಅವನಿಗೆ ಏನು ಬೇಕೆಂದು ಅರಿತು ನಾಚಿ ತಲೆತಗ್ಗಿಸಿದಳು. ಆದರೂ ಬಿಡದ ಚೇತನ್ ಅವಳ ಮೊಗವನ್ನೆತ್ತಿ ಬೇರೇನೂ ಬೇಡ ಮುದ್ದಾದ ಚಂದ್ರ ಅಥವಾ ಚಂದ್ರಿಯಲ್ಲಿ ಒಬ್ಬರನ್ನು ಕೊಡು. ಆದರೆ ತಕ್ಷಣಕ್ಕೆ ಮುತ್ತೊಂದು ಸಾಕೆಂದನು. ಮಾತನ್ನು ಕೇಳಿದ ವಸಂತ ಸಂಕೋಚದಿಂದ ಅಮ್ಮನ ಸೆರಗಿನ ಹಿಂದೆ ಮರೆಯಾಗಿ ನಿಂತಳು. ಮನದಲ್ಲೇ ಚೇತನ್ ರಾತ್ರಿ ಬಿಡುವೇನೇ......! ಎಂದು ಹುಂಭನಗೆ ನಕ್ಕನು.

ಅರ್ಧಚಂದ್ರ ಯಾವ ಭಾಗ ಎತ್ತರದಲ್ಲಿರುತ್ತದೆ ಎಂಬುದನ್ನು ನೋಡುವರು. 'ಬಲಭತ್ತ ಎಡ ಹೊನ್ನು' ಎಂದು ಬಲಭಾಗ ಎತ್ತರದಲ್ಲಿದ್ದರೆ ಮಳೆ ಬೆಳೆ ಚೆನ್ನಾಗಿ ಇರುವುದು. ಎಡಭಾಗ ಎತ್ತರದಲ್ಲಿ ಇದ್ದರೆ ಬೆಳ್ಳಿ ಬಂಗಾರದ ಬೆಲೆ ಜಾಸ್ತಿಯಾಗುವುದು ಎಂದು ನಿರ್ಧರಿಸುವರು. ಪಂಚಾಂಗ ಶ್ರವಣದ ನಂತರ ಹೆಂಗಳೆಯರು ಅರಿಶಿಣ ಕುಂಕುಮ ಒಬ್ಬರಿಗೊಬ್ಬರು ಕೊಟ್ಟು ರವಿಕೆ ಕಣ, ಹಣ್ಣುಗಳ, ಪ್ರಸಾದ ವಿನಿಮಯದ ಮೂಲಕ ಹಬ್ಬದ ಸಂಭ್ರಮವನ್ನು ಕೊನೆಗೊಳಿಸುವರು. ಪಂಚಾಂಗ ಶ್ರವಣದಲ್ಲಿ ಪುರೋಹಿತರು ಭೂಮಿಯು ರಜಸ್ವಲೆಯಾಗುವುದರಿಂದ ಮೂರು ದಿನ ಉಳಿಮೆ ಮಾಡಬಾರದು ಎಂಬ ವಿಷಯವನ್ನು ಎಲ್ಲರಿಗೂ ಅರ್ಥೈಸುತ್ತಾರೆ. ಈ ವಿಷಯ ಕೇಳಿದ ಕ್ಷಣ ವಸಂತಳಿಗೆ ತಾನು ತನ್ನ ಸ್ನೇಹಿತರಿಗಾಗಿ ಕೊಡಲು ತಂದ ಮೆನ್ಸ್ಟ್ರುಯಲ್ ಕಪ್ಪ ನೆನಪಾಗುತ್ತದೆ. ಹೊನ್ನಾರು ಹೂಡಿದ ದಿನ ಮಧ್ಯಾಹ್ನ ಎಲ್ಲರಿಗೂ ಕೊಡಲು ನಿರ್ಧರಿಸುತ್ತಾಳೆ. ಮಾರನೇ ದಿನ 'ಹೊನ್ನಾರು ಹೂಡುವ' ದಿನ ಹಳ್ಳಿಗಳಲ್ಲಿ ಇದು ಗಂಡು ಮಕ್ಕಳ ಅತ್ಯಂತ ಪ್ರೀತಿ ಪಾತ್ರ ಹಬ್ಬ. ಏಕೆಂದರೆ ಎಲ್ಲರೂ ಸಿನಿಮಾ ನಾಯಕರಂತೆ ಬಿಳಿ ಪಂಚೆ, ಬಿಳಿ ಶರಟು ಧರಿಸಿ, ಕುಂಕುಮ ತಿಲಕವಿರಿಸಿ ತಮ್ಮ ಮನೆ ನೇಗಿಲಿಗೆ ಎತ್ತು ಕಟ್ಟುತ್ತಾರೆ. ಒಂದು ಭಾಗಕ್ಕೆ ಬಿಳಿ, ಇನ್ನೊಂದೆಡೆ ಕೆಂಪು ಎತ್ತುಗಳನ್ನು ನೇಗಿಲಿಗೆ ಕಟ್ಟುವುದು, ಇಲ್ಲವೇ ತಮ್ಮ ಎತ್ತುಗಳನ್ನು ಸಿಂಗರಿಸಿ ಒಂದು ಕೊಂಬಿಗೆ ಬಿಳಿ ಒಂದು ಕೊಂಬಿಗೆ ಕೆಂಪು ಬಣ್ಣ ಬಳಿದು ಹೊಲದ ಬಳಿ ಉತ್ತರಮುಖವಾಗಿ ಉಳುಮೆ ಪ್ರಾರಂಭಿಸಿ ಪೂರ್ವಮುಖವಾಗಿ ಪೂರ್ಣಗೊಳಿಸಬೇಕು. ಇದನ್ನು ನೋಡಲು ಊರಿನ ಎಲ್ಲಾ ಜನರು, ವಿಶೇಷವಾಗಿ ಹೆಣ್ಣು ಮಕ್ಕಳು ಹೊಲದ ಬಳಿ ಜಮಾಯಿಸುತ್ತಾರೆ. ಉಳುವ ಗಂಡುಗಳು ತಮ್ಮ ಎತ್ತುಗಳ ಜೊತೆ ತಮ್ಮ ಪೌರುಷವನ್ನು ಹೆಣ್ಣು ಮಕ್ಕಳ ಮುಂದಿಡುವ ಪ್ರಯತ್ನ ನಡೆಯುತ್ತಿರುತ್ತದೆ. ದೊಡ್ಡವರಿಗೆ ತಿಳಿಯದಂತೆ ಬಾಜಿ ಸಹ ನಡೆದಿರುತ್ತದೆ.

ಎಲ್ಲರೂ ಮಧ್ಯಾಹ್ನ ಅವರವರ ಮನೆಗೆ ಬಂದಾಗ ಬಿಸಿ ಬಿಸಿ ಹಬ್ಬದ ಊಟ ತಯಾರಿರುತ್ತದೆ. ಎಲ್ಲರೂ ಊಟ ಮಾಡಿ ಒಳಾಂಗಣ ಆಟಗಳನ್ನು ಆಡುತ್ತಿರುತ್ತಾರೆ. ಆಗ ವಸಂತ ತನ್ನ ಗೆಳತಿ, ಅಕ್ಕಪಕ್ಕದವರನ್ನು ಕರೆದು ವಿಶೇಷ ಕೊಡುಗೆಯಾದ, ತಾನು ಉಪಯೋಗಿಸುತ್ತಿರುವ ಮುಟ್ಟಿನ ಬಟ್ಟಲಿನ ಬಗ್ಗೆ ಹೇಳುತ್ತಾಳೆ. ಎಲ್ಲರನ್ನು ನೀವುಗಳು ಉಪಯೋಗಿಸಿ ಎಂದು ಒತ್ತಾಯ ಮಾಡುವುದರೊಂದಿಗೆ ಅದರ ಉಪಯೋಗ, ಆ ಸಮಯದಲ್ಲಿ ಎಷ್ಟೊಂದು ಆರಾಮದಾಯಕ ಎಂಬುದನ್ನು ತಿಳಿಸುತ್ತಾಳೆ. ಅದರ ಬಗ್ಗೆ ಆಸಕ್ತಿಕರ ವಿಷಯಗಳನ್ನು ಹೇಳುತ್ತಾ ಉಪಯೋಗಿಸಲು ಪ್ರೋತ್ಸಾಹಿಸಿ ಎಲ್ಲರಿಗೂ ಒಂದೊಂದು ಉಡುಗೊರೆಯಾಗಿ ನೀಡುತ್ತಾಳೆ. ಆದರೆ ಅವರೆಲ್ಲರಿಗೂ ಹಿಂದಿನ ದಿನ ವಸಂತ ತೊಟ್ಟ ಆಭರಣದ ಮೇಲೆಯೇ ಆಸಕ್ತಿ. ಅದರಲ್ಲಿ ಎಷ್ಟು ಚಿನ್ನವಿದೆ? ಎಂಬುದು ಒಬ್ಬಳ ಪ್ರಶ್ನೆಯಾದರೆ! ಎಲ್ಲಿ ತೆಗೆದುಕೊಂಡೆ? ಎಂಬುದು ಇನ್ನೊಬ್ಬಳ ಪ್ರಶ್ನೆ! ಈ ಶೈಲಿ, ನಮೂನೆಯನ್ನು ಮೆಚ್ಚಿದ್ದು ನೀನೋ ನಿನ್ನ ಗಂಡನೋ? ಎಂಬುದು ಮತ್ತೊಬ್ಬಳ ಪ್ರಶ್ನೆ. ರೆಡಿಮೇಡೊ ಅಥವಾ ಹೇಳಿ ಮಾಡಿಸಿದ್ದೋ? ಒಟ್ಟಿಗೆ ಹೋಗಿ ತಂದಿರಾ? ಬೆಲೆ ಎಷ್ಟು? ಪಾಪ ವಸಂತಳಿಗೆ ಯಾವುದು ತಿಳಿಯದು! ಹೇಗೋ ಸಂಭಾಳಿಸಿ ಎಲ್ಲರನ್ನು ಮನೆಗೆ ಕಳುಹಿಸಿದಳು. ಅವರೆಲ್ಲರ ಪ್ರಶ್ನೆಗಳಿಗೆ ಉತ್ತರವನ್ನು ಗಂಡನಲ್ಲಿ ಕೇಳಿ ತಿಳಿಯಬೇಕು. ತನ್ನ ಮನೆಗೆ ಹೋದ ನಂತರ ಕೇಳೋಣ ಎಂದು ಸುಮ್ಮನಾದಳು.

ಹಬ್ಬ ಮುಗಿದು ವಸಂತ ತನ್ನವರೊಡನೆ ತವರಿನಿಂದ ಹೊರಟಳು. ಅಂದಿನ ರಾತ್ರಿ ಅವಳಿಗೆ ಗಂಡನಿಂದ ಉತ್ತರ ಪಡೆಯಬೇಕಾದ ಹತ್ತಾರು ಪ್ರಶ್ನೆಗಳಿದ್ದವು. ಆದರೆ ಎಲ್ಲವುದಕ್ಕೂ ಒಂದೇ ಉತ್ತರ ದೊರೆತದ್ದು ! ಅದೆಲ್ಲ ನಿನಗ್ಯಾಕೆ? ಇಷ್ಟು ಪ್ರಶ್ನೆಗಳಿದ್ದರೆ ನೀನು ಅವುಗಳನ್ನು ಧರಿಸಲೇಬೇಡ! ಮೊದಲ ಬಾರಿಗೆ ಗಂಡನಿಂದ ಪ್ರೀತಿ ಸಲಿಗೆ ಇಲ್ಲದ ನಿರೀಕ್ಷಿಸಿರದ ಈ ಉತ್ತರ ವಸಂತಳಿಗೆ ಗಾಬರಿ ಮತ್ತು ನೋವುಂಟು ಮಾಡಿತು. ಹಾಗೆಂದು ಚೇತನನೇನು ಸಂತೋಷದಿಂದಿಲ್ಲ. ಆಸ್ಪತ್ರೆಗೆ ಹೋದರು ಯಾವುದಕ್ಕೂ ಗಮನ ಕೊಡಲು ಚೇತನನಿಗೆ ಆಗುತ್ತಲೇ ಇಲ್ಲ. ಪ್ರತಿ ಕ್ಷಣ ಒಡವೆ ಕಣ್ಣಮುಂದೆ ಬರುತ್ತದೆ. ವಸಂತಳ ಪ್ರಶ್ನೆಗಳು ತಲೆಯಲ್ಲಿ ಗುಯಿಗುಡುತ್ತವೆ. ಅಪರಾಧಿಪ್ರಜ್ಞೆ ಕಾಡಲು ಪ್ರಾರಂಭಿಸುತ್ತದೆ. ಈಗ ಯಾರಲ್ಲೂ ಏನು ಹೇಳದ ಪರಿಸ್ಥಿತಿ ಅವನದ್ದಾಗಿದೆ. ಎಲ್ಲರೊಡನೆ ಮಾತು ಹರಟೆ ಕಡಿಮೆ ಮಾಡಿದ್ದಾನೆ. ಅವಶ್ಯಕತೆ ಇಲ್ಲದೆ ಯಾರನ್ನು

ಭೇಟಿಯಾಗುವುದಿಲ್ಲ. ಎಲ್ಲರನ್ನು ಆದಷ್ಟು ದೂರ ಇಡಲು ಪ್ರಯತ್ನಿಸುತ್ತಿದ್ದಾನೆ. ಮನೆಯಲ್ಲಿ ಸಂತಸದ ವಾತಾವರಣ ಮಾಯವಾಗಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಕೇಳಿದ್ದಕ್ಕೆ ಉತ್ತರವಷ್ಟೇ. ಹಿಂದಿನಂತೆ ರೇಡಿಯೋ ಅದರ ಜೊತೆಗಿನ ಹಾಡು ಯಾವುದೂ ಇಲ್ಲ. ತನ್ನಷ್ಟಕ್ಕೆ ತಾನಿರುವುದು ತನ್ನ ಕೆಲಸಗಳನ್ನು ತಾನೆ ಮಾಡಿಕೊಳ್ಳುವುದು ಇಷ್ಟೇ ಅವನಲ್ಲಾದ ಬದಲಾವಣೆ, ವಸಂತಳಿಗಂತೂ ಏನಾಗಿದೆ ಎಂಬುದೇ ತಿಳಿಯುತ್ತಿಲ್ಲ. ಗಂಡನಲ್ಲಿನ ಈ ಬದಲಾವಣೆಗೆ ಕಾರಣವೇನು? ಊರಿನಲ್ಲಿ ನನ್ನ ತಂದೆ ತಾಯಿ ಏನಾದರೂ ಹೇಳಿದರೆ? ಏನಾದರೂ ಕೆಟ್ಟದ್ದು ನಡೆಯಿತೇ? ಒಂದೂ ಅರಿಯದವಳಾಗಿ ತಾನು ಮೌನಕ್ಕೆ ಶರಣಾಗಿ ಒಳ ಒಳಗೆ ನೋವನ್ನು ಅನುಭವಿಸುತ್ತಿದ್ದಾಳೆ. ತಂದೆ ತಾಯಿ ತಮಗೆ ತಿಳಿದ ಮಟ್ಟಿಗೆ ಮಗನಲ್ಲಿ ಮೊದಲಿನಂತೆ ಬದಲಾವಣೆ ತರಲು ಪ್ರಯತ್ನಿಸುತ್ತಿದ್ದಾರೆ, ಆದರೆ ಏನಾಗಿದೆ ಎಂಬುದು ತಿಳಿದರೆ ತಾನೇ? ಸರಿಪಡಿಸಲು ಸಾಧ್ಯ ಎಲ್ಲವೂ ಅಯೋಮಯ.

ಮನೆ ಮುಂದಿನ ಜಗಲಿಯಲ್ಲಿ ಅನ್ಯ ಮನಸ್ಕಳಾಗಿ ಕುಳಿತಿದ್ದ ವಸಂತಳನ್ನು ಅತ್ತೆ ರಂಜನಿ ಕೂಗಿದಾಗ ವಸಂತ ವಾಸ್ತವಕ್ಕೆ ಬಂದಳು. ‘ಇಂದು ಯುಗಾದಿ ಹಬ್ಬ ಹೀಗೆ ಕೂತರೆ ನಡೆದೀತೆ. ನಮ್ಮ ಮುಂದಿನ ದಾರಿ ದೇವರ ಮೊರೆ ಹೋಗುವುದು. ಚೇತನನ ಬಗ್ಗೆ ಬೇಸರ ಮಾಡಿಕೊಳ್ಳಬೇಡ. ನಮಗೆ ನೋವಿದೆ ಎಂದ ಮಾತ್ರಕ್ಕೆ ಹಬ್ಬ-ಹರಿದಿನ, ಆಚಾರ-ಆಚರಣೆಗಳನ್ನು ಬಿಡಲಾಗುವುದಿಲ್ಲ. ಈ ಹಬ್ಬದ ಅರ್ಥ ನಿನಗೆ ತಿಳಿದಿದೆ. ನಾವು ಸಮವಾಗಿ ಬೇವು ಬೆಲ್ಲ ತಿಂದರೂ ಮೇಲಿರುವವನು ನಮಗೇನು ಕೊಡಬೇಕೆಂದು ನಿರ್ಧರಿಸುತ್ತಾನೆ. ಅವನ ಅಳತೆಯಂತೆ ದೊರೆತ ಬೇವನ್ನು ಒಂದು ವರ್ಷದಿಂದ ಅನುಭವಿಸಿದ್ದೀಯೇ, ಮತ್ತೇಕೆ ಭಯ? ಈ ವರ್ಷ ಬೆಲ್ಲವೇ ಸಿಗುವುದೆಂದು ಆಶಾವಾದಿಗಳಾಗೋಣ’ ‘ಒಳಗೆ ನಡೆ, ಎದ್ದು ಬಾ, ಬರುವಾಗ ಮನೆ ಮುಂದಿನ ಮಾವಿನ-ಬೇವಿನ ಮರದಿಂದ ತೋರಣ ಮತ್ತು ಕಳಶಕ್ಕೆ ಎಲೆ, ತಿನ್ನಲು ಬೇವಿನ ಹೂವನ್ನು ಕುಯ್ದು ತಾ‘ ಎಂದು ಹೇಳಿ ಅತ್ತೆ ಒಳಹೋದರು. ಪ್ರತಿವರ್ಷದಂತೆ ಮತ್ತೆ ‘ಯುಗ ಯುಗಾದಿ ಕಳೆದರೂ‘ ರೇಡಿಯೋದಲ್ಲಿ ಕೇಳಿ ಬರುತ್ತಿತ್ತು. ತಾನು ಹಾಡನ್ನು ಗುನುಗುತ್ತ ಮಾವಿನ ಎಲೆ ಕೀಳಲು ಕೈ ಹಾಕಿದ ವಸಂತಳ ನಾಲಿಗೆಯು ತಡವರಿಸಿತು. ಕೆಳಗೆ ಬಿದ್ದ ಎಲೆಗಾಗಲಿ, ಹೂವಿಗಾಗಲಿ ಮರ ಕೊರಗದೆ ದಿನ ತನ್ನ ಕರ್ತವ್ಯ ನಿಭಾಯಿಸಿ ಪ್ರತಿದಿನವನ್ನು ಹೊಸದಾಗಿ ಬರಮಾಡಿಕೊಳ್ಳುತ್ತದೆ. ಹಾರಿ ಹೋದ ಮರಿಗೆ ಚಿಂತಿಸದೆ ತನ್ನ ಸಂತಾನೋತ್ಪತ್ತಿ ಕಾರ್ಯವನ್ನು ಪಕ್ಷಿ ಮುಂದುವರಿಸುವುದರೊಂದಿಗೆ ಪ್ರತಿದಿನ ಹೊಸ ದಿನ ಎಂಬಂತಿರುತ್ತದೆ. ಎಷ್ಟು ಅರ್ಥಪೂರ್ಣ ಹಾಡಿದು, ನಾನೇಕೆ ನನ್ನ ಪತಿಯ ನೋವಿಗೆ ಸ್ಪಂದಿಸದೆ ಸರಿಪಡಿಸುವ ಪ್ರಯತ್ನ ಮಾಡದೆ ಸೋತವಳಂತೆ ಕೂತಿದ್ದೇನೆ. ಒಂದು ವರ್ಷ ವ್ಯರ್ಥವಾಗಿದೆ. ಇಂದಿನಿಂದಲೇ ನನ್ನ ಜೀವನಕ್ಕೆ ಹೊಸ ಪ್ರಯತ್ನ ಬರಮಾಡಿಕೊಳ್ಳೋಣ ಎಂದು ನಿರ್ಧರಿಸಿದಳು.

ಹಬ್ಬದ ರಜೆ ಮುಗಿದು ಪತಿ ಕೆಲಸಕ್ಕೆ ಹೊರಟ ನಂತರ ವಸಂತ ಮನೆಯಲ್ಲಿದ್ದ ತನ್ನ ಅತ್ತೆ ಮಾವನವರೊಡನೆ ಚೇತನನನ್ನು ಮನೋಚಿಕಿತ್ಸಕರ ಬಳಿ ಕರೆದುಕೊಂಡು ಹೋಗಬಹುದೇ ಎಂದು ಪ್ರಶ್ನಿಸಿದಳು. ತಾಯಿ ತಂದೆ ಸಹ ಮಗನಲ್ಲಾದ ಬದಲಾವಣೆಗೆ ನೊಂದಿದ್ದರು. ಸೊಸೆಯ ಮುಂದೆ ಯಾವುದನ್ನು ತೋರಿಸಿಕೊಳ್ಳದೆ ಅವಳು ಮತ್ತಷ್ಟು ನೋಯುತ್ತಾಳೆ ಎಂದು ಸರಿ ಹೋಗುವ ಭರವಸೆಯ ಮಾತುಗಳನ್ನಾಡುತ್ತಾ ದಿನ ಕಳೆಯುತ್ತಿದ್ದವರಿಗೆ, ಇದೇ ಸರಿಯಾದ ನಿರ್ಧಾರವೆನಿಸಿತು. ಈಗಾಗಲೇ ಎರಡು ವರ್ಷಗಳಲ್ಲಿ ಪತಿಯಿಂದ ಹಲವಾರು ಸ್ನೇಹಿತರ ವಿಷಯಗಳನ್ನು ಕೇಳಿ ತಿಳಿದಿದ್ದಳು. ಡಾ. ಮನೋಹರರನ್ನು ಕಾಣುವುದಾಗಿ ನಿರ್ಧರಿಸಿದಳು. ಅವರೊಡನೆ ಮಾತನಾಡಿದಾಗ ಡಾಕ್ಟರ್ ನೀವೇನೂ ಅವರನ್ನು ಕರೆತರುವ ಅವಶ್ಯಕತೆ ಇಲ್ಲ. ನಾನು ಅವನ ಸಹೋದ್ಯೋಗಿ ಇಂದಿನಿಂದಲೇ ಅವನನ್ನು ಭೇಟಿ ಮಾಡುತ್ತಾ ಗಮನಿಸುತ್ತಾ ಚಿಕಿತ್ಸೆ ನೀಡುವೆನೆಂಬ ಭರವಸೆ ನೀಡಿದರು. ಇತ್ತೀಚೆಗೆ ಚೇತನ್ ಅವನ ಸಹೋದ್ಯೋಗಿಗಳ ಹರಟೆಕಟ್ಟೆ, ಕಾಫಿ ಅಡ್ಡಗಳಿಗೂ ಹೋಗುವುದನ್ನು ನಿಲ್ಲಿಸಿ ಬಿಟ್ಟಿದ್ದನು. ಒಂದು ದಿನ ಮನೋಹರ್ ತಾನಾಗಿಯೇ ‘ಯಾವುದೋ ರೋಗಿಯಲ್ಲಿ ಉಸಿರಾಟದ ತೊಂದರೆ ಹಾಗೂ ಮಾನಸಿಕ ಒತ್ತಡ ಎರಡು ಇರುವುದರಿಂದ ಯಾವ ರೀತಿ ಚಿಕಿತ್ಸೆ ನೀಡಬಹುದು’ ಎಂಬ ಚರ್ಚೆ ಮಾಡುವ ನೆವವನ್ನು ಹೊತ್ತು ಚೇತನ್ ಅನ್ನು ಕಂಡರು. ಆ ವಿಷಯಕ್ಕೆ ಇಬ್ಬರು ಕೂತು ಚರ್ಚಿಸಿ ಪರಿಹಾರ ಹುಡುಕಿದರು. ಚೇತನನ ನಡವಳಿಕೆಯಲ್ಲಿ, ಕೆಲಸದ ವಿಷಯದಲ್ಲಿ ಯಾವ ಬದಲಾವಣೆ ಕಂಡು ಬರಲಿಲ್ಲ, ಆದರೆ ಯಾರು ಇಲ್ಲದ ವೇಳೆ ಅನ್ಯ ಮನಸ್ಕನಾಗಿರಲು ಪ್ರಯತ್ನಪೂರ್ವಕವಾಗಿ ಬಯಸುತ್ತಿರುವುದು ಮಾತ್ರ ಮನೋಹರರ ಗಮನಕ್ಕೆ ಬಂತು. ಒಮ್ಮೆ ವಸಂತ-ರಂಜಿನಿ-ರಾಜೇಂದ್ರರನ್ನು ಭೇಟಿ ಮಾಡಿದ ಮನೋಹರ್ ಅಂತಹ ದೊಡ್ಡ ಸಮಸ್ಯೆ ಏನು ಇಲ್ಲ. ಅವನ ಮನದಲ್ಲಿ ಏನೋ ಕೋಲಾಹಲ ನಡೆಯುತ್ತಿದೆ. ಅದನ್ನು ಕೇಳಿ ತಿಳಿದು ಕೊಂಡರೆ ಎಲ್ಲವೂ ಸರಿ ಹೋಗುವ ಸಾಧ್ಯತೆಗಳಿವೆ ಎಂದರು. ರಾಜೇಂದ್ರರು ನಿವೃತ್ತಿ ಹೊಂದಿದ್ದರಿಂದ ಎಲ್ಲರೂ ಒಟ್ಟಿಗೆ ಹೆಚ್ಚಿನ ಸಮಯ ಜೊತೆಯಾಗಿ ಕಳೆಯುವುದಾಗಿ ನಿರ್ಧರಿಸಿದರು. ಏನು ಮಾಡಿದರೂ ಚೇತನನ ಮನದೊಳಗಿನ ಮಾತು ಹೊರ ಬರಲಿಲ್ಲ.

ಮನೆ ಕೆಲಸದಾಕೆ ಮಂಜುಳಾ ಎರಡು ವಾರದಿಂದ ರಜೆಯಲ್ಲಿದ್ದಳು. ಈ ದಿನ ಕೆಲಸಕ್ಕೆ ಬಂದವಳೇ ತನ್ನ ಕಥೆಯನ್ನೆಲ್ಲ ಹೇಳಲು ಪ್ರಾರಂಭಿಸಿದಳು. ತನ್ನ ಮಗನ ಬದಲಾದ ನಡವಳಿಕೆ ತಾನು ಕೆಲಸಕ್ಕೆ ಬಂದ ನಂತರ ಶಾಲೆಯಿಂದ ವಾಪಸ್ ಆಗಿ ಮನೆಯಲ್ಲಿ ಇಡೀ ದಿನ ಮಲಗಿರುವುದು. ರಜೆ ದಿನವೂ ಮಕ್ಕಳೊಡನೆ ಆಡದಿರುವುದು. ಓದಿನಲ್ಲೂ ಅನಾಸಕ್ತಿ ಹೊಂದಿರುವುದು.

ಒಬ್ಬನೇ ಎಲ್ಲೋ ಏನೋ ನೋಡುತ್ತಾ ಒಂಟಿಯಾಗಿರಲು ಪ್ರಯತ್ನಿಸುವುದು. ಎಲ್ಲವನ್ನು ಹೇಳಿ ಗೋಳಾಡಿದಳು. ಎಲ್ಲವನ್ನು ಕೇಳಿಸಿಕೊಂಡ ಅತ್ತೆ ರಂಜಿನಿ ಒಳಗೊಳಗೆ ತನ್ನ ಮಗನೊಡನೆ ಹೋಲಿಸಿಕೊಂಡು ಮಂಜುಳಾಳ ಮಗನನ್ನು ಮನೋಚಿಕಿತ್ಸಕರ ಬಳಿ ಕರೆದೊಯ್ಯುವಂತೆ ಹೇಳಿ ಸಮಾಧಾನವನ್ನು ಪಡಿಸಿ, ಎಲ್ಲವೂ ಸರಿ ಹೋಗುವುದೆಂಬ ಭರವಸೆ ನೀಡಿದಳು. ಇದಾಗಿ ಕೆಲವು ದಿನಗಳಿಗೆ ಮಂಜುಳಾ ಮತ್ತೊಮ್ಮೆ ರಜೆ ಬೇಕೆಂದು ಕೇಳಿದಳು. ಆಗ ಏಕೆ ರಜೆ? ಎಂದು ವಿಚಾರಿಸಿದಾಗ ತಮ್ಮೂರಿನ ಬಳಿ ಇರುವ ದುರ್ಗಾಪರಮೇಶ್ವರಿ ಅಮ್ಮನವರಲ್ಲಿ ಹಿಂದೆ ಹರಕೆ ಹೊತ್ತುದಾಗಿಯೂ ಮಗ ಸರಿ ಹೋದರೆ ಅಲ್ಲಿ ಹೋಗಿ ದೇವರ ಹರಕೆ ತೀರಿಸಿ, ಮಗನಿಂದಲೇ ಪೂಜೆ ಮಾಡಿಸುವುದಾಗಿಯೂ ಬೇಡಿದ್ದಳು. ಈಗ ಮಗನಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಂಡುಬಂದಿದೆ. ಹಾಗಾಗಿ ನಾವು ಹೋಗಿ ಹರಕೆ ತೀರಿಸಬೇಕೆಂದು ಅದಕ್ಕಾಗಿ ರಜೆ ಬೇಕೆಂದು ಕೇಳಿದಳು. ಕೆಲಸದವಳಿಗೆ ರಜೆಗೆ ಒಪ್ಪಿಗೆ ನೀಡಿದ ರಂಜಿನಿ ಆ ದೇವಿಯ ಮಹಿಮೆ ತಿಳಿದು ತಾನೂ ಹರಕೆ ಹೊತ್ತಳು. ಆದರೆ ಒಮ್ಮೆ ಹೋಗಿ ದೇವಿಯಲ್ಲೇ ಬೇಡಿ ಬರೋಣ. ಒಮ್ಮೆ ಹೊರ ಹೋಗಿ ಸುತ್ತಾಡಿದಂತೆಯೂ ಆಗುತ್ತದೆ ಎಂದು ಈ ವಿಷಯವನ್ನು ವಸಂತಳಿಗೆ ತಿಳಿಸಿದಳು. ಈಗ ವಸಂತಳಿಗೆ ಹೇಗಾದರೂ ತನ್ನ ಸಂಸಾರ ಸರಿಪಡಿಸಿಕೊಳ್ಳುವ ಅನಿವಾರ್ಯತೆ ಬಿಟ್ಟರೆ ಬೇರೆ ಯಾವ ಯೋಚನೆ ಇರಲಿಲ್ಲ. ಪ್ರತಿದಿನ ಪ್ರತಿ ಕ್ಷಣ ಹಿಂದಿನ ದಿನಗಳ ನೆನೆಯುತ್ತಾ ಗಂಡನ ಪ್ರೀತಿಗಾಗಿ ಹಾತೊರೆಯುತ್ತಿದ್ದಳು.

ಒಂದು ಭಾನುವಾರ ನಾಲ್ಕು ಜನರು ದುರ್ಗಾಪರಮೇಶ್ವರಿ ಅಮ್ಮನ ಗುಡಿಗೆ ಹೊರಟರು. ಚೇತನನು ಉತ್ಸಾಹದಿಂದ, ಹೆಚ್ಚಿಗೆ ಲವಲವಿಕೆಯಿಂದ ಹೊರಟನು. ದಾರಿಯಲ್ಲಿ ಹಾಡುಗಳನ್ನು ಕೇಳುತ್ತಾ ತಮಾಷೆ, ಲೋಕಾಭಿರಾಮದ ಹರಟೆಯೊಂದಿಗೆ ದೇವಾಲಯ ತಲುಪಿದರು. ಪೂಜಾ ಸಾಮಗ್ರಿಗಳೊಂದಿಗೆ ಬೆಲೆಬಾಳುವ ರೇಷ್ಮೆ ಸೀರೆಯನ್ನು ರವಿಕೆ ಕಣವನ್ನು ಸಹ ದೇವತೆಗಾಗಿ ಅತ್ತೆ ಸೊಸೆ ಬಹಳ ಆಸಕ್ತಿಯಿಂದ ಆರಿಸಿ ತಂದಿದ್ದರು. ಎಲ್ಲವನ್ನು ಹಿಡಿದು ದೇವತೆ ಮುಂದೆ ನಿಂತು ಪ್ರಾರ್ಥಿಸಿದರು. ಇಲ್ಲಿನ ಅರ್ಚಕರು ಮುಖವನ್ನು ನೋಡಿ ಶಾಸ್ತ್ರವನ್ನು ಸಹ ಹೇಳುವರೆಂದು ಇವರಿಗೆ ತಿಳಿದಿರಲಿಲ್ಲ. ಅರ್ಚಕರು ಕುಟುಂಬದ ಹೆಸರಿನಲ್ಲಿ ದೇವಿಗೆ ಅರ್ಚಿಸಿ, ತೀರ್ಥ ಪ್ರಸಾದ ಕೊಡುವ ಸಂದರ್ಭದಲ್ಲಿ ಅತ್ತೆ ಸೊಸೆಗೆ ನೀವು ಬೇಡಿ ಬಂದಿರುವ ಕಾರ್ಯವನ್ನು ದೇವಿ ಬೇಗ ಪರಿಹರಿಸುತ್ತಾಳೆ. ಇದಕ್ಕೆ ಒಂದು ಹೆಣ್ಣೇ ಕಾರಣವಿರಬಹುದು. ನಿಮ್ಮ ಸಮಸ್ಯೆಗೆ ಬೇಗ ದಾರಿ ತೋರೆಂದು ತಾಯಿಯಲ್ಲಿ ಬೇಡಿಕೊಳ್ಳಿ ಎಂದು ನುಡಿದರು. ಎಲ್ಲವೂ ಬಯಸಿದಂತೆ ಸುಸೂತ್ರವಾಗಿ ನೆರವೇರಿತು. ತಾಯಿ ತೃಪ್ತಳಾದಳೋ ಇಲ್ಲವೋ ಈ ನಾಲ್ವರು ಮಾತ್ರ ತೃಪ್ತಿಯ ಆಶಾಕಿರಣದೊಂದಿಗೆ ಊರಿನಡೆಗೆ ಪಯಣ ಬೆಳೆಸಿದರು.

ಅರ್ಚಕರ ಮಾತಿಗೆ ಅತ್ತೆಯ ಮನದಲ್ಲೊಂದು ಸಂಶಯ ಸುಳಿಯಿತು. ಹೆಣ್ಣು ಎಂದರೆ ವಸಂತಳೇನಾದರೂ ಗಂಡನೊಡನೆ ಜಗಳವನ್ನು ಎಂದಾದರೂ ಆಡಿದಳೆ, ಸಾಧ್ಯವೇ ಇಲ್ಲ ಅವಳು ಬಂದಾಗಿನಿಂದ ಮಗಳಿಗಿಂತ ಹೆಚ್ಚಾಗಿ ಪ್ರೀತಿಸಲಿಗೆಯಿಂದ, ಯಾವುದೂ ತನ್ನಲ್ಲಿ ಮುಚ್ಚಿಡದೆ ಹೇಳಿದ್ದಾಳೆ. ಮತ್ತೊಮ್ಮೆ ಜಾತಕವನ್ನು ತೋರಿಸಿದ್ದಾಯಿತು. ಅದರಲ್ಲೂ ಅನ್ಯೂನ್ಯ ದಾಂಪತ್ಯವೆಂದೇ ಬರೆದಿದೆ. ಮಗನ ಮೇಲೆ ಅಪಾರ ನಂಬಿಕೆ. ಮದುವೆಗೆ ಮುನ್ನ ಎಲ್ಲಾ ವಿಷಯವನ್ನು ಹಂಚಿಕೊಳ್ಳುತ್ತಿದ್ದನು. ಗೆಳತಿಯರಿದ್ದರೂ ಮನಸ್ಸನ್ನು ಕೆಡಿಸಿಕೊಳ್ಳುವಂತಹ ಸಂಬಂಧ ಯಾವುದೂ ಇರಲಿಲ್ಲ. ವಸಂತಾಳಿಗೆ ತನ್ನ ಅತ್ತೆ ತನ್ನ ಮಗನ ಮೇಲಿರಿಸಿರುವ ನಂಬಿಕೆಗಿಂತಲೂ ತನ್ನ ಗಂಡನ ಮೇಲೆ ಅವಳಿಗೆ ಹೆಚ್ಚಿನ ನಂಬಿಕೆ. ನಾವಿಬ್ಬರು ಅರ್ಧನಾರೀಶ್ವರರಂತೆ ತನ್ನ ಬಾಲ್ಯದಿಂದ, ಇಂದಿನವರೆಗೂ ಪ್ರತಿರಾತ್ರಿ ತನ್ನ ದಿನದ ಚರಿತ್ರೆಯನ್ನು ವಸಂತಾಳಿಗೆ ಹೇಳಿಕೊಳ್ಳದೆ ಇಬ್ಬರ ರಾತ್ರಿಗಳು ಮುಗಿಯುತ್ತಲೇ ಇರಲಿಲ್ಲ. ಹಾಗಾಗಿ ಗೆಳತಿ ಇದ್ದಳೇನು? ಎಂಬ ಬಗ್ಗೆ ಯೋಚಿಸುವ ಅನಿವಾರ್ಯತೆಯೇನು ವಸಂತಳಿಗೆ ಬರಲಿಲ್ಲ. ಮಾವನವರು ಮಾತ್ರ ಹಲವು ದಿನಗಳು ಇದೆ ಮುಂದುವರೆಯಲು ಬಿಡಬಾರದು. ತನ್ನ ಸೊಸೆಯನ್ನು ಈ ನೋವಿನಿಂದ ಆದಷ್ಟು ಬೇಗ ಹೊರ ತರಬೇಕೆಂದು ಯೋಚಿಸುತ್ತಿದ್ದರು. ದಿನಪತ್ರಿಕೆ ಓದುತ್ತಿದ್ದ ಮಾವನವರು ಅಪರಾಧಗಳ ಪುಟದಲ್ಲಿ ಯಾವುದೋ ಘಟನೆ ಓದುತ್ತಿದ್ದರು. ಅಲ್ಲಿ ಮಂಪರು ಪರೀಕ್ಷೆಯ ವಿಧದಿಂದ 5-6 ವರ್ಷಗಳಿಂದ ಬಗೆಹರಿಯದ ಒಂದು ಅಪರಾಧಿ ಪತ್ತೆ ಪೂರ್ಣಗೊಂಡ ಪೊಲೀಸರ ಹೇಳಿಕೆಯನ್ನು ಓದಿ ನೋಡಿ, ಆ ಲೇಖನವನ್ನು ಸೊಸೆಗೆ ಓದಲು ಹೇಳಿದರು. ಈಗ ವಸಂತಳು ಅದೇ ಯೋಚನೆಯಲ್ಲಿ ಮುಳುಗಿದಳು. ಪರೀಕ್ಷೆಯ ವಿಧಿ ವಿಧಾನಗಳನ್ನು ತಿಳಿದು ಗಂಡನನ್ನು ಪರೀಕ್ಷೆಗೆ ಒಳಪಡಿಸಲು ಪ್ರಯತ್ನಿಸಿದರೆ, ಅವನಿಗೆ ಅನುಮಾನಿಸಿ, ಅವಮಾನಿಸಿದಂತೆ ಎನಿಸಿ ತನ್ನ ಬಗ್ಗೆ ತನಗೆ ನಾಚಿಕೆ ಎನಿಸಿತು.

ಇಷ್ಟೆಲ್ಲ ಮನೆಯವರ ಪ್ರಯತ್ನ ನಡೆಯುತ್ತಿದ್ದರೂ ಚೇತನ ತನ್ನ ವೃತ್ತಿಯನ್ನು ಯಾವುದೇ ಚ್ಯುತಿ ಇಲ್ಲದಂತೆ ಮನಃಪೂರ್ವಕವಾಗಿ ಮಾಡುತ್ತಿದ್ದನು. ಮನೆಯಿಂದ ಹೊರಗೆ ಅವನನ್ನು ಅಷ್ಟಾಗಿ ಕಾಡದ ಪ್ರಜ್ಞೆ ಮನೆಗೆ ಬಂದೊಡನೆ, ಹೆಂಡತಿ ಮುಖ ನೋಡಿದೊಡನೆ ಅಪರಾಧಿಭಾವ ಹೆಚ್ಚುತ್ತಿತ್ತು.ಅವಳು ಯುಗಾದಿಯಂದು ಧರಿಸಿದ ಆಭರಣ, ಅವಳ ರೂಪ ಕಣ್ಣ ಮುಂದೆ ಬಂದು ಪ್ರೀತಿ-ಹೆಮ್ಮೆ ಮೂಡಿಸದೆ ಸುಪ್ತಪ್ರಜ್ಞೆಯಲ್ಲಿ ವಂಚನೆಯ ಭಾವ ಮೂಡಿಸುತ್ತಿತ್ತು. ಅವನಿಗೆ ತಿಳಿಯದ ವಿಷಯವೇನು ಇಲ್ಲ. ತನ್ನ ಪ್ರೀತಿಯ ಮಡದಿಯ ನೋವು ಕಾಣುತ್ತಿದೆ. ತಪ್ಪೊಪ್ಪಿಕೊಳ್ಳುವ ಧೈರ್ಯ ಬರುತ್ತಿಲ್ಲ. ಹಾಗೆಂದು ಅವನಿಗೆ ಅಹಂಕಾರವೇನಿಲ್ಲ. ಎಂದೂ ತಪ್ಪು ಮಾಡದವನು ಹೇಗೆ ತಾನು ತಪ್ಪು ಮಾಡಿದ್ದನ್ನು ಬೇರೆಯವರಲ್ಲಿ ಹೇಳುವುದು

ಎಂದು ತಿಳಿಯುತ್ತಿಲ್ಲ. ತಂದೆ ತಾಯಿಯ ಸಂಕಟವೂ ತಿಳಿದಿದೆ. ಅವರೇ ಕಲಿಸಿದ ಉತ್ತಮ ಗುಣಗಳು ಅವನಲ್ಲಿವೆ. ಅವರಿಗೆ ನಿಜಾ ತಿಳಿದರೆ ನೋಯುವರು ಎಂದು ಆತ್ಮನಿಂದನೆ ಮಾಡಿಕೊಂಡು ತಾನೇ ನೋವನ್ನು ಅನುಭವಿಸುತ್ತಿದ್ದಾನೆ. ಮನೋಹರ್ ಅವನ ಸಹೋದ್ಯೋಗಿ ಮುಂಚೆ ಕಾಫಿ ಕುಡಿಯುವಾಗ, ಯಾವುದಾದರೂ ರೋಗಿಗಳಿಗೆ ಸಂಬಂಧಿಸಿದ ವಿಷಯವಾಗಿ ಚರ್ಚಿಸುವಾಗ, ಒಮ್ಮೊಮ್ಮೆ ಚಹಾ ಕೂಟದಲ್ಲಿ ಸಿಗುತ್ತಿದ್ದವನು. ಈ ನಡುವೆ ಹೆಚ್ಚಾಗಿ ಭೇಟಿ ಮಾಡಿ ಮಾತನಾಡುತ್ತಿದ್ದಾನೆ ಎಂಬುದು ಚೇತನ್ ಗಮನಿಸಿದ್ದಾನೆ. ತುಂಬಾ ದಿನಗಳಾದ ಮೇಲೆ ಪ್ರವಾಸ ಹೋದರೂ ಇದರ ಹಿಂದಿನ ಉದ್ದೇಶ ಬೇರೆಯೇ ಇದೆ ಎಂಬುದರ ಅರಿವಿದೆ. ಆದರೂ ಯಾವುದನ್ನು ಮನ ಬಿಚ್ಚಿ ಮಾತನಾಡಲಾರ.

ಅಂದು ಸಂಜೆ ಚೇತನ್ ಆಸ್ಪತ್ರೆಗೆ ಹೊರಡುವ ಸಮಯದಲ್ಲಿ ಚಹಾ ಕುಡಿಯುತ್ತಾ ತನ್ನ ಕೊಠಡಿಯ ಕಿಟಕಿಯಿಂದ ಹೊರ ನೋಡುತ್ತಾ ಕುಳಿತಿದ್ದನು. ಮನಸ್ಸು ಮಾತ್ರ ತನ್ನಲ್ಲಿರುವ ಗೊಂದಲವನ್ನು ಹೇಗೆ ಹೆಂಡತಿಗೆ ತಿಳಿಸುವುದೆಂದು ಯೋಚಿಸುತ್ತಿತ್ತು. ಹೊರಗಿರುವ ಮಾವಿನ ಮರಕ್ಕೆ ನೀರು ಹಾಕಲು ಹೋದ ವಸಂತ ಯಾರೊಡನೆಯೋ ಮಾತನಾಡುವುದು ಕೇಳಿಸಿತು. ಒಬ್ಬ 14-15 ವರ್ಷದ ಬಾಲಕ ತನ್ನ ಕೈಯಲ್ಲಿ ಎರಡು ಮಾವಿನಕಾಯಿ ಹಿಡಿದಿದ್ದಾನೆ. ಅದು ಚೇತನನ ಮನೆಯ ಮರದ ಮಾವಿನ ಕಾಯಿ, ಅವನೊಡನೆ ಮಾತನಾಡುವ ವಸಂತಳ ಮಾತುಗಳು ಚೇತನನಿಗೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. 'ಅಲ್ಲಪ್ಪ ನೀನು ನಮ್ಮ ಮರದ ಮಾವಿನಕಾಯಿ ನಮಗೆ ತಿಳಿಯದಂತೆ ಕೆಡವಿದ್ದೀಯಾ ಇದು ತಪ್ಪು, ನೀನು ಕಳ್ಳತನ ಮಾಡಿದ್ದು ನಿನಗೆ ತಪ್ಪು ಎಂದು ತಿಳಿದಿದೆ. ಆದರೆ ನಿನ್ನ ಅಮ್ಮನಿಗೆ ಇಷ್ಟ ಎಂದು ಕದ್ದಿದ್ದೀಯ ಅದರ ಬದಲಾಗಿ ನನ್ನನ್ನೇ ಕೇಳಿದ್ದರೆ ಆಗುತ್ತಿರಲಿಲ್ಲವೇ. ತಪ್ಪು ಮಾಡಿದರೆ ಕ್ಷಮೆ ಕೇಳಬೇಕು. ಇದರಿಂದ ಮನಸ್ಸು ನಿರಾಳವಾಗುತ್ತದೆ. ಅಪರಾಧಿಪ್ರಜ್ಞೆ ಕಾಡುವುದಿಲ್ಲ. ಪಶ್ಚಾತ್ತಾಪಕ್ಕಿಂತ ಶಿಕ್ಷೆ ಇಲ್ಲ, ಆದರೆ ಪಶ್ಚಾತ್ತಾಪ ಮನದೊಳಗೆ ನಡೆಯುವುದು. ನೀನು ಮನ ಬಿಚ್ಚಿ ಕ್ಷಮೆ ಕೇಳಿದಾಗ ಮನದೊಳಗೆ-ಹೊರಗೆ ಎರಡು ಬಳಿ ನಿರಾಳವಾದ ನಿರ್ಮಲ ಸ್ಥಿತಿ ನಿನ್ನದಾಗುವುದು' ಎಂದು ಬುದ್ಧಿ ಹೇಳುತ್ತಿದ್ದಳು. ಈ ಮಾತನ್ನು ಕೇಳಿದ ಕ್ಷಣದಿಂದ ಚೇತನನ ಮನಸ್ಸಿನಲ್ಲಿ ಒಂದು ಬಗೆಯ ಧೈರ್ಯ ತುಂಬಿ ಬಂದಿತ್ತು. ಮತ್ತೆ ಮತ್ತೆ ವಸಂತಳಾಡಿದ ಮಾತು ತನ್ನನ್ನು ಕುರಿತೇನೋ ಎನ್ನುವಂತೆ ನೆನಪಾಗುತ್ತಿತ್ತು. ರಾತ್ರಿ ಮನೆಗೆ ಬಂದು ಊಟದ ನಂತರ ತನ್ನ ಕೊಠಡಿಗೆ ತೆರಳಿದವನೇ ಇಂದು ನನ್ನ ಪಾಪಪ್ರಜ್ಞೆಯಿಂದ ಹೊರಗೆ ಬರಬೇಕು. ಹೇಗಾದರೂ ಅವಳಲ್ಲಿ ಕ್ಷಮೆ ಕೇಳಿ ನನ್ನ ಮನಸ್ಸನ್ನು ನಿರಾಳಗೊಳಿಸಬೇಕೆಂದು ನಿರ್ಧರಿಸಿದನು. ಎಂದಿನಂತೆ ರಾತ್ರಿಗಾಗಿ ಕುಡಿಯುವ ನೀರನ್ನು ಹಿಡಿದು ರೂಮಿನೊಳಗೆ ಕಾಲಿಟ್ಟ ವಸಂತಳನ್ನು ಕೈ ಹಿಡಿದು ತನ್ನ ಬಳಿ ಕರೆದು ಕೂರಿಸಿಕೊಂಡನು. ಇಷ್ಟು ಪ್ರೀತಿಯನ್ನು ಕಾಣದೆ ಬಹಳ ದಿನಗಳಾಗಿದ್ದ ವಸಂತ ಅವನೇನೇ ಹೇಳಲಿ, ಏನೇ ಮಾಡಲಿ ಕ್ಷಣ ಮಾತ್ರದಲ್ಲಿ ಸಹಿಸಲು ತಯಾರಾಗಿ ಕುಳಿತುಬಿಟ್ಟಳು ಚೇತನ್ ವಸಂತಳನ್ನು ಕುರಿತು ನಾನೇನೆ ಮಾಡಿದರು ಕ್ಷಮಿಸುತ್ತೀಯಾ? ನನ್ನ ಮೇಲೆ ನಂಬಿಕೆ ಇದೆಯೇ? ಎಂದೆಲ್ಲಾ ಕೇಳಿದಾಗ ವಸಂತ ನೀವು ಏನೇ ಮಾಡಿದರೂ ನಿಮ್ಮ ಅರಿವಿಗೆ ಬರದೆ ತಪ್ಪಾಗಿದೆಯೇ ಹೊರತು ನೀವು ಎಂದೂ ತಪ್ಪು ಮಾಡಲಾರಿರಿ ಎಂಬ ನಂಬಿಕೆ ಸಂಪೂರ್ಣವಾಗಿ ನನಗಿದೆ. ಅದೇನೇ ಇದ್ದರೂ ಸರಿ ಮಾಡಿ, ಬೇರಾರಿಗೂ ತಿಳಿಯದಂತೆ ಸಂಸಾರ ಸರಿಪಡಿಸಿಕೊಳ್ಳುವುದು ನನ್ನ ಕರ್ತವ್ಯ ಎಂದಳು. ಚೇತನ್ ನಡೆದ ವಿಷಯವನ್ನೆಲ್ಲ ವಿವರವಾಗಿ ಹೇಳಿದನು. ಆಗ ವಸಂತ ನೀವು ಒಂದು ಬಾರಿ ಮಾತ್ರ ಒಡವೆ ಹಿಂದಿರುಗಿಸಲು ಪ್ರಯತ್ನಿಸಿದಿರೇ ಎಂದು ಕೇಳಿದಳು. ಇಲ್ಲ ಇದುವರೆಗೂ ಯಾರೂ ಅದನ್ನು ಹುಡುಕಿ ಬಂದಿಲ್ಲ. ನಾನು ಮತ್ತೆರಡು ಬಾರಿ ಯುಗಾದಿ ಹಬ್ಬದ ಸಮಯದಲ್ಲಿ ಆ ಮನೆಗೆ ಹೋಗಿ ಅಕ್ಕ ಪಕ್ಕದವರನ್ನು ವಿಚಾರಿಸಿದೆ. ಆದರೆ ಆ ರಮಾ ಮಾತ್ರ ದೊರೆಯಲಿಲ್ಲ ಎಂದನು. ಹೆಂಡತಿಯ ತೊಡೆಯ ಮೇಲೆ ಮಲಗಿ ಮಗುವಿನಂತೆ ನಿದ್ರಿಸಿದ್ದ ಚೇತನನ ತಲೆಕೂದಲಿನಲ್ಲಿ ಬೆರಳನ್ನಾಡಿಸುತ್ತಾ, ಮುಗ್ಧ ಮುಖವನ್ನು ನೋಡುತ್ತಾ ವಸಂತ ಮನದೊಳಗೆ ಒಂದು ನಿರ್ಧಾರಕ್ಕೆ ಬಂದು ಬಿಟ್ಟಳು. ವಿಷ ವಿಷಯ ತುಂಬಿ ಗೊಂದಲದ ಗೂಡಾಗಿದ್ದ ಚೇತನನ ಮನಸ್ಸು ನಿರ್ಮಲವಾಗಿ, ನಿರಾಳವಾಗಿರುವುದು ಮಗುವಿನಂತಹ ಮುಖದಲ್ಲಿ ಕಂಡಿತು. ಚೇತನ್ ನೆಮ್ಮದಿಯ ಸುಖ ನಿದ್ರೆಗೆ ಜಾರಿದ್ದನು. ಯುಗಾದಿಗೆ ಎರಡು ದಿನ ಮುಂಚಿತವಾಗಿ ಮತ್ತೊಮ್ಮೆ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಪ್ರವಾಸ ಹೊರಟ ನಾಲ್ವರೂ ದೇವಾಲಯದೊಳಗೆ ಹೋಗಿ ಅರ್ಚನೆಗೆ ನೀಡಿದರು. ಅಷ್ಟರಲ್ಲಿ ದೊಡ್ಡ ತಟ್ಟೆಯಲ್ಲಿ ಸೀರೆ-ಕಣ ತನಗೆ ಚೇತನ್ ನೀಡಿದ್ದ ಉದ್ದ ಕಂಠಿಹಾರ, ಸಣ್ಣ ಹಾರ, ಬಳೆಗಳು, ನಾಲ್ಕು ಕಿವಿಯೋಲೆಯೊಡನೆ ಮಾಂಗಲ್ಯ ಸರವನ್ನು ತಪ್ಪು ಕಾಣಿಕೆಯಾಗಿ ಹಿಡಿದು ತಂದ ವಸಂತಳ ಮುಖದಲ್ಲಿ ಗೆಲುವಿನ ನಗೆ ಕಾಣುತ್ತಿತ್ತು. ನನಗಿಂತ ಈ ದೇವಿಗೆ ಚೆನ್ನಾಗಿ ಈ ಒಡವೆಗಳು ಒಪ್ಪುವುದೆಂದು ಅತ್ತೆ ಮಾವನಲ್ಲಿ ನುಡಿದಳು. ಅವಳ ಮಾತಿಗೆ ಮರುನುಡಿಯದ ಹಿರಿಯರು ಅವರ ಬದಲಾದ ದಾಂಪತ್ಯದ ಅನ್ಯೋನ್ಯತೆಯನ್ನು ಸ್ಪಷ್ಟವಾಗಿ ಗಮನಿಸಿದ್ದರು. ಚೇತನನ ಬಳಿ ಬಂದು ವಸಂತ 'ನೋಡಿ ಕಾಣದ ಹುಡುಗಿಯನ್ನು ಹುಡುಕುವ ಬದಲಿಗೆ ದೇವಿಯ ಮೊರೆ ಹೊಕ್ಕು ಕ್ಷಮೆ ಕೋರಿಬಿಡಿ. ಇಂದಿನಿಂದ ದೇವಿಯ ಅಲಂಕಾರಕ್ಕೆ ಈ ಒಡವೆಗಳು ಬಳಕೆಯಾಗುತ್ತವೆ. ನನಗೆ ನಿಮ್ಮ ತೋಳುಗಳ ಪ್ರೀತಿ ಹಾರವೇ ಸಾಕು' ಎಂದಳು. ಎಲ್ಲರೂ ಭಕ್ತಿಯಿಂದ ಪ್ರಾರ್ಥಿಸಿದರು. ಚೇತನ್ ಮಾತ್ರ ದುರ್ಗಾದೇವಿ ಅಲ್ಲದೆ ತನಗೆ ಜನ್ಮ ನೀಡಿದ ದೇವತೆಗಳು ಹಾಗೂ ತನ್ನ ಪ್ರೀತಿಗಾಗಿ ಕಾಯುತ್ತಿದ್ದ ದೇವತೆಗೆ ನೀಡಿದ್ದ ನೋವಿಗಾಗಿ ಮತ್ತೆ ಮತ್ತೆ ದೇವಿಯ ಮುಂದೆ ಕ್ಷಮೆಯಾಚಿಸಿದನು. ಹಿಂದೆ ನಿಂತಿದ್ದ ಭಕ್ತರಲ್ಲೊಬ್ಬರು ಇನ್ನೇನು ಯುಗಾದಿ ಹಬ್ಬ ಬಂದೇಬಿಟ್ಟಿತು. ಹೊಸ ವರ್ಷಕ್ಕೆ ಹೊಸ ಹರ್ಷ ತರುತ್ತಿದೆ ಎಂದು ಹೇಳುವ ಮಾತು ಮಾತ್ರ ಈ ನಾಲ್ವರ ಕಿವಿಯ ಮೇಲೂ ಸ್ಪಷ್ಟವಾಗಿ ಬೀಳುತ್ತಿತ್ತು.

# ಕವನ ಸಂಕಲನ









**ಮೀರಾ ಫಡಕೆ**
ಬೆಂಗಳೂರು

# ಬೃಂದಾವನ ನಡಿಗೆ

ಶ್ರಾವಣ ಶನಿವಾರದ
ಮುಂಜಾನೆಯ ಹೊಂಗಿರಣ
ಎಲೆ ಎಲೆಯಲಡುಗಿ
ಶಿಸ್ತಿನ ಸಿಪಾಯಿ ವೃಕ್ಷಗಳ
ಅಪ್ಪಿ ಬಳಸಿ
ಸರೋವರದ ನೀರಿನ
ಕಣಕಣ ಚುಂಬಿಸಲು
ಕಾತುರದಿ ಮುಗಿಬಿದ್ದು ಬರುತಿರಲು,
ಕಂಡು ಕನ್ನಡದ ಕಲರವವ
ಕೇಳಿ ಕಿಲ ಕಿಲ ನಗುವ
ನಿಂತನಲ್ಲೆ ಭಾನು ಕ್ಷಣಕಾಲ
ಬೃಂದಾವನದ ಗೋಪ ಗೋಪಿಯರ
ಚೆಂದದ ನಡಿಗೆಗೆ ಸಂಭ್ರಮಿಸುತ
ತನ್ನ ಕೆಲಸ ಮರೆಯುತಾ
ಕಲರವವು ಕರಗಲು
ಮುನ್ನಡೆದ ಸದ್ದಿಲ್ಲದೆ
ಮತ್ತೆಂದು ಕಂಡೆನೋ
ವೃಂದಾವನದ ಈ ಸುಂದರ ವದನಗಳ ಮತ್ತೊಮ್ಮೆಯೆನುತಾ ಮತ್ತೊಮ್ಮೆಯೆನುತಾ!



**ಶ್ಯಾಮಸುಂದರ್ .ಜಿ.ಸಿ.**
ಬೆಂಗಳೂರು

## ಇನ್ನು ತಾಳೆನು ಹೇಳಿಬಿಡು

ತಾರೆಯ ಗೊಂಚಲಲಿ ಕಂಗಳ ಅಡಗಿಸಿದೆ ಏಕೆ

ಬೆಳದಿಂಗಳ ಅಂಚಿನ ಓಣಿಯಲಿ ಒಬ್ಬಳೇ ಬರಲೇ

ದಾವಣಿಯ ರಂಗೆಲ್ಲ ನಿನ್ನ ನೆನಪಲ್ಲಿ ಸೊರಗುತ್ತಿದೆ

ಅರಳಿದ ಹೂಗಳು ಝೇಂಕಾರದ ಸವಿಗಾನಕೆ ಕಾದಿಹವು

ತೂಗು ಮಂಚದಲ್ಲಿ ಯಾರೋ ಇರಿಸಿದ ಗೊಂಬೆಗಳು

ನಿನ್ನ ಪ್ರೀತಿಯ ಮಾತಿನ ಪಂಜರದಿ ಬಚ್ಚಿಡಬಾರದೇ

ಹೋಳಿಯ ಧೂಳಿನ ಮೋಡದ ಗಿರಿಗಳ ನಡುವೆ

ಬೆರಳಲಿ ಗೀಚಿದೆ ನಿನದೇ ಹೆಸರ ನೂರಾರು ಸಲ

ತಲೆಬಾಗಿಹುದು ಮುಸ್ಸಂಜೆ ಆರತಿಗೆ

ದೀಪ ನರ್ತನಕೆ ಕಣ್ಣೀರ ಹನಿ ಬೀಳದಿರಲೆಂದು

ಜಾತ್ರೆಯ ತೇರಿನ ಎದುರಲ್ಲಿ ರಂಗವಲ್ಲಿ ಇಕ್ಕುವಾಗ

ಹರಟಿದ ಗೆಳತಿಯರಲ್ಲಿ ಒಬ್ಬಳು ನೀನೆ ಅಲ್ಲವೇ

ಗೌರವರ್ಣದ ಸೂರ್ಯ ರಷ್ಮಿಗೂ ಹೇಳಿರುವೆ

ನನ್ನ ಅಧರಗಳ ಚುಂಬಿಸಲು 'ನೀ' 'ನಲ್ಲ' ಮೊದಲು

ಪರಿಪರಿಯಾಗಿ ಕನವರಿಸಿ ಕೇಳಿರುವೆ

ನನ್ನ ಕಾಡಿಸಿ ಆವರಿಸುವ ಗೀಳು ಬಿಡಬೇಡ ಎಂದೂ.



**ಓ೦ಕಾರಮ್ಮ ಆರ್.ಎಸ್.**
ದಾವಣಗೆರೆ

# ಶ್ರೀಕೃಷ್ಣ ನಾಮ ಚೈತನ್ಯ ಧಾಮ

ಶ್ರೀ ಹರಿ..ವೇಣು ವಿಹಾರಿ
ಯಾವ ಹೆಸರಲಿ ಸ್ತುತಿಸಲಿ..?
ಒಂದೇ ಎರಡೇ ನೂರಾರು
ಹೆಸರು  ನಿನಗೆ...
ಯಾವ ಹೆಸರಲಿ ನಿನ್ನ
ಜಪಿಸಿದರೇನು..?
ಆತ್ಮ ಸಂತೋಷ ನಮಗೆ
ಸಿಗದೇನು..? ನಿನ್ನ ಅನುಗ್ರಹ
ನಮಗೆ ದೊರೆಯದೇನು...?
ನಂದಕಿಶೋರ,ನವನೀತಚೋರ
ಕೇಶವ ಮಾಧವ ..ಮುರಳೀಲೋಲ.
ಗೋಪಾಲಬಾಲ..ದೇವಕಿನಂದನ.
ಯದುಕುಲತಿಲಕ ಗೋಪೀಲೋಲ.
ಹರೇ ಮುರಾರಿ...
ಗೋವರ್ಧನ  ಗಿರಿಧಾರಿ..
ರುಕ್ಮಿಣಿ  ವಲ್ಲಭ...
ಸತ್ಯಭಾಮ ಪ್ರಿಯ,.ತುಂಟಕೃಷ್ಣ
ಬಾಲಕೃಷ್ಣ ..ಮುದ್ದು ಕೃಷ್ಣ
ಕಳ್ಳ ಕೃಷ್ಣ ..ಗೋಪಾಲಕೃಷ್ಣ
ವಸುದೇವಸುತ,ಯಶೋಧೆಯ ಕೃಷ್ಣ
ಮೀರಾ ಮಾಧವ..ರಾಧಾಮಾಧವ
ಗೀತಗೋವಿಂದ.. ನಿನ್ನ ಸ್ಮರಿಸುವ
ನಾಮಗಳೆಷ್ಟೇ ಇರಲಿ....ಅನುದಿನವೂ
ನಿನ್ನ ನಾಮಸ್ಮರಣೆ...ತಪ್ಪುವವು
ಭವರೋಗದ ಬವಣೆ .........



**ಕೆ ಲಕ್ಷ್ಮೀನಾರಾಯಣ**
ಬೆಂಗಳೂರು

# ಯಾರಿವರು?

'ಮಸಣದ ಚಲುವೊಂದಿಗೆ' ಪ್ರಣಯವಾಯ್ತೆ?
ಮಸಣದ ನೀರವತೆ ದಮನಿತರ
ದನಿಗೆ, ತಾ ಸ್ಫೂರ್ತಿಯಾಯ್ತೆ?
'ನಾ ಮೂಳೆ, ನಾ ಇಂಗೆ ಇರಲ್ಲಾ
ಕೂಗ್ತೀನಿ, ಸಿಡಿತೀನಿ,' ಎಂಬಿವನ ದನಿ
ಬಂಡಾಯದ ಕೂಗಾಯ್ತೆ?
'ತ್ರಾಣ, ಪ್ರಾಣ ಎಳ್ಡೂ ಇಲ್ದೆ
ತ್ವಡೆ ನಡ್ಗಿ ಸತ್ತೋಗೋರಾ,' ಎಂಬೀ ಕೂಗು
ನಮ್ಮಾಳೋರ ಬಡಿದೆಬ್ಬಿಸಿತೇ?
'ಟಾಟಾ, ಬಿರ್ಲಾ ಜೋಬಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ,' ಎಂದವನ ನಾದ
ಸಾಮಾಜಿಕ ನ್ಯಾಯಕ್ಕೆ ತಾ ನಾಂದಿಯಾಯ್ತೆ?
ಶೋಷಿತರ ದನಿಯಿಂದು ಸದ್ದಡಗಿಸಿತೆ?
ದಿವ್ಯ ಚೇತನಕೇತರ ಸಾವು?
ಸ್ಥಾವರಕಳಿವುಂಟು, ಜಂಗಮಕ್ಕುಂಟೇ?

***
(ಉತ್ತರ: ಬಂಡಾಯ ಕವಿ ಸಿದ್ಧಲಿಂಗಯ್ಯ)
*****

ಮೂರ್ತಿ ಚಿಕ್ಕದಾದರೂ
ಕೀರ್ತಿ ದೊಡ್ಡದಂತೆ
ಮೊದಲಾಟದಲ್ಲೇ ಸಿಡಿಯಿತಂತೆ
ಭರ್ಜರಿ ಚೊಚ್ಚಲ ಶತಕ
ಬ್ಯಾಟಿಂಗ್ ಕಲೆಯ ನಿಪುಣನೀತ
ನೂರೇರಿಸಿದಾಗೆಲ್ಲ ನಾವ್ ಸೋತಿಲ್ಲವಂತೆ
'ವಿಶ್ವ'ಮಾನ್ಯ ಕನ್ನಡಿಗನೀತ
ಸಜ್ಜನ ಕ್ರಿಕೆಟಿಗನಂತೆ

***
(ಉತ್ತರ: ಜಿ. ಆರ್. ವಿಶ್ವನಾಥ್)
*****

ಚಾಮಯ್ಯ ಮೇಷ್ಟ್ರ ಪ್ರೀತಿಯೇ
ಶಿಷ್ಯನಿಗೆ ಮುಳುವಾಯ್ತೆ?
ಸದಾಶಿವರಾಯರ ಅತಿಯಕ್ಕರೆಯೂ
ಮಿನುಗುತಾರೆಯ ಮರೆಸದಾಯ್ತೆ?
ದುರಂತಗಳಿಗೆ ಮುನ್ನುಡಿ ಬರೆವುದೆ
ಇವರ ಪಾತ್ರವಾಯ್ತೆ?
'ನಮ್ಮ ಮಕ್ಕಳೀ' ಪಾತ್ರಧಾರಿ
'ಸತ್ಯಮಾರ್ಗದಿ ನಡೆವ ಶಕ್ತಿ' ಬೇಡಿದರೇಕೆ?
***
(ಉತ್ತರ: ಕೆ. ಎಸ್.ಅಶ್ವತ್ಥ್)
*****

ಹೆಸರಲಿ ಶಾಂತನಾದರೂ
ಹೋರಾಟದ ಹಠವಂತನೆ?
ಕಾಗೋಡ ಗೂಡಿಗೆ ಲೋಹಿಯಾರ
ಕರೆತಂದ ಭಗೀರಥನಿವನೆ?
'ಅವಸ್ಥೆ'ಯ ಶೋಷಿತನಿವ
ಅರಸರ ಭೂಸುಧಾರಣೆಗೆ ಪ್ರೇರಣೆಯಾದನೆ?
ಏನವಸರವಿತ್ತೋ, ಬೇಗ ತೆರಳಿ
ಉತ್ಸಾಹಿಗಳೇಕೆ ಅಲ್ಪಾಯುಗಳೆಂದೆಮ್ಮ ಕಾಡಿದನೆ?

***
(ಉತ್ತರ: ಶಾಂತವೇರಿ ಗೋಪಾಲ ಗೌಡ)
*****

ವಿಷವುಂಡವನ ಬೀಡ ನರ್ತಕಿಗೆ
ಬೆಂಗಳೂರ ಬಿರುದೇಕೆ?
ಗೆಜ್ಜೆಪೂಜೆಗೆ ಕೊರಳೊಡ್ಡಿದರು, ನೃತ್ಯ, ಸಂಗೀತ
ಸಾಹಿತ್ಯಗಳ ಕರುಳಲೇ ಪಡೆದಳೆ?
ತನು, ಮನ, ಧನಗಳ ಗಾನಗುರು ತ್ಯಾಗಯ್ಯಗರ್ಪಿಸಿ
ಅವರಾರಾಧನೆಗೆ ನಾಂದಿ ಹಾಡಿದಳೆ?
ಕೀಳೆಂಬ ಹಣೆಪಟ್ಟಿ ಹೊತ್ತು ಸೆಣಸಿ
ಲೀನಳಾದಳಲ್ಲ ಗುರು ಚರಣದೊಳಗೆ!
***
(ಉತ್ತರ: ಬೆಂಗಳೂರು ನಾಗರತ್ನಮ್ಮ)
*****

# ಅಡಿಗೆ ಅರಮನೆ









**ಬಿಂದು ಪಿ**
ನ್ಯೂ ಜೆರ್ಸಿ

# ಗಣೇಶನಿಗೆ ಅರ್ಪಿಸಲು ಪಂಚಕಜ್ಜಾಯ






ಸಾಮಗ್ರಿಗಳು
ಕಡಲೆ ಬೇಳೆ – 1 ಕಪ್
ಹೆಸರುಬೇಳೆ  – 1 ಕಪ್
ತುರಿದ ಕೊಬ್ಬರಿ – 1 ಕಪ್
ಬೆಲ್ಲ – 1 ಕಪ್
ಎಳ್ಳು – ½ ಕಪ್

ಈ ಐದು ಮುಖ್ಯ ಸಾಮಗ್ರಿಗಳಿಂದಲೇ "ಪಂಚ ಕಜ್ಜಾಯ" ಎಂಬ ಹೆಸರು ಬಂದಿದೆ. ರುಚಿ ಹೆಚ್ಚಿಸಲು ತುಪ್ಪ ಮತ್ತು ಏಲಕ್ಕಿ ಪುಡಿ ಸೇರಿಸಬಹುದು.

ಮಾಡುವ ವಿಧಾನ
ಮೊದಲು ಕಡಲೆ ಬೇಳೆ ಮತ್ತು ಹೆಸರುಬೇಳೆಯನ್ನು ಹುರಿಯಿರಿ. ತಣ್ಣಗಾದ ಮೇಲೆ ಮಿಕ್ಸಿಯಲ್ಲಿ ಪುಡಿ ಮಾಡಿ.

ದಪ್ಪದ ತಳದ ಪಾತ್ರೆಯಲ್ಲಿ ಬೆಲ್ಲ ಹಾಕಿ ಸ್ವಲ್ಪ ನೀರು ಸೇರಿಸಿ ಕುದಿಸಿ. ಬೆಲ್ಲ ಕರಗಿಕೊಂಡು ಸಿಹಿ ಪಾಕವಾಗಿ ಕುದಿಯಲು ಶುರುವಾದಾಗ, ಅದಕ್ಕೆ ಬೇಳೆ ಪುಡಿ, ತುರಿದ ಕೊಬ್ಬರಿ, ಎಳ್ಳು, ತುಪ್ಪ, ಏಲಕ್ಕಿ ಪುಡಿ ಸೇರಿಸಿ ಚೆನ್ನಾಗಿ ಕಲಸಿರಿ.

ಮಿಶ್ರಣ ಮೃದುವಾಗಿದ್ದರೆ ಚಿಕ್ಕ ಉಂಡೆಗಳಾಗಿ ಮಾಡಬಹುದು. ಅಥವಾ ಹಾಗೆಯೇ ಹುಡಿ ಹುಡಿಯಾಗಿ ಕೂಡ ಬಿಡಬಹುದು. ಗಣೇಶನಿಗೆ ಅರ್ಪಿಸಲು ಭಕ್ತಿಯೊಂದಿದ್ದರೆ ಸಾಕು.

ಇಷ್ಟೇ! ಈಗ ಪಂಚ ಕಜ್ಜಾಯ ಸಿದ್ಧ. ಗಣೇಶನಿಗೆ ನೈವೇದ್ಯವಾಗಿ ಅರ್ಪಿಸಬಹುದು



**ವಿಶಾಲಾಕ್ಷಿ ಎಸ್ ಎನ್**
ಬೆಂಗಳೂರು

# ಶ್ರೀ ಗಣೇಶ ಹಬ್ಬಕ್ಕೆ ಮಾಡುವ ತಿಂಡಿಗಳು






ಗಣೇಶನಿಗೆ ಪ್ರಿಯವಾದ ಮೋದಕ ಮತ್ತು ಕರಿಗಡುಬು
ಬೇಕಾಗುವ ಪದಾರ್ಥಗಳು
ಮೈದಾ ಹಿಟ್ಟು - 1 ಲೋಟ (ಸುಮಾರು 250 ಗ್ರಾಂ)
ಚಿರೋಟಿ ರವೆ - 2 ಟೀ ಸ್ಪೂನ್
ಕೊಬ್ಬರಿ ತುರಿ - 3 /4 ಲೋಟ
ಸಕ್ಕರೆ - 1 /2 ಲೋಟ
ತುಪ್ಪದಲ್ಲಿ ಹುರಿದ ದ್ರಾಕ್ಷಿ, ಗೋಡಂಬಿ
ಏಲಕ್ಕಿ ಪುಡಿ - 2 ಚಿಟಿಕೆ (4 -5 ಏಲಕ್ಕಿ ಪುಡಿ )
ತುಪ್ಪ - 4 ಟೀ ಸ್ಪೂನ್
ಕರಿಯಲು ಎಣ್ಣೆ - 1/2 ಲೀಟರ್
ಅರಿಸಿನ - 1 ಚಿಟಿಕೆ
ಉಪ್ಪು - 1 ಚಿಟಿಕೆ

ಮಾಡುವ ವಿಧಾನ :

ಕಣಿಕ ಮಾಡುವ ವಿಧಾನ : ಮೈದಾ ಹಿಟ್ಟು, ಚಿರೋಟಿ ರವೆ, ಅರಿಸಿನ ಹಾಗು ಉಪ್ಪನ್ನು ಒಂದು ತಟ್ಟೆಯಲ್ಲಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ಈ ಮಿಶ್ರಣಕ್ಕೆ 3 ಟೀಸ್ಪೂನ್ ತುಪ್ಪವನ್ನು ಹಾಕಿ ಪುನಃ ಚೆನ್ನಾಗಿ ಕಲಸಬೇಕು. ಈ ಮಿಶ್ರಣಕ್ಕೆ ಸ್ವಲ್ಪ-ಸ್ವಲ್ಪ ನೀರನ್ನು ಸೇರಿಸಿ ಪೂರಿ ಹಿಟ್ಟಿನ ಹದಕ್ಕೆ ಬರುವಂತೆ ಕಲಸಬೇಕು. ಈ ರೀತಿ ಕಲಿಸಿದ ಹಿಟ್ಟನ್ನು ತಟ್ಟೆಯಿಂದ ಮುಚ್ಚಿ ಸುಮಾರು 2 ಗಂಟೆಗಳ ಕಾಲ ನೆನೆಯಲು ಬಿಡಬೇಕು.

ಹೂರಣ ಮಾಡುವ ವಿಧಾನ : ಮೊದಲು ಗೋಡಂಬಿಯನ್ನು ತುಪ್ಪದಲ್ಲಿ ಹುರಿದುಕೊಳ್ಳಬೇಕು. ನಂತರ ಸಿಪ್ಪೆ ತೆಗೆದು ತುರಿದ ಕೊಬ್ಬರಿ ತುರಿಯೊಂದಿಗೆ ಸಕ್ಕರೆ, ಗೋಡಂಬಿ, ದ್ರಾಕ್ಷಿ,ಏಲಕ್ಕಿ ಪುಡಿ(2 ಚಿಟಿಕೆ) ಗಳನ್ನು ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು.

ಮಾಡುವ ವಿಧಾನ : ಕಲಸಿದ ಕಣಕವನ್ನು ಚಿಕ್ಕ ಬಟ್ಟುಗಳನ್ನಾಗಿ ಮಾಡಿಕೊಳ್ಳಬೇಕು. ಈ ಬಟ್ಟನ್ನು ಹಾಳೆಯನ್ನಾಗಿ ಲಟ್ಟಿಸಿ ಮಧ್ಯ ಭಾಗದಲ್ಲಿ ಕೊಬ್ಬರಿ ಸಕ್ಕರೆ ಮಿಶ್ರಣವನ್ನು ಇಟ್ಟು ಕಡುಬು ಅಥವಾ ಮೋದಕ ಆಕಾರದಲ್ಲಿ ಮಡಿಚಿಕೊಳ್ಳಬೇಕು(ಹೂರಣ ಹೊರಕ್ಕೆ ಚೆಲ್ಲದಂತೆ ಮುಚ್ಚಬೇಕು). ಒಂದು ಬಾಣಲೆಯಲ್ಲಿ ಸುಮಾರು 1/2 ಲೀಟರ್ ಎಣ್ಣೆಯನ್ನು ಕಾಯಿಸಿಕೊಂಡು, ಲಟ್ಟಿಸಿಕೊಂಡ ಕಡುಬು(ಮೋದಕ) ಗಳನ್ನು ನಿಧಾನವಾಗಿ ಬಿಡಬೇಕು. ಮಧ್ಯಮ ಉರಿಯಲ್ಲಿ ಹೊಂಬಣ್ಣ ಬರುವರೆಗೂ ಎಣ್ಣೆಯಲ್ಲಿ ಕರಿಯಬೇಕು. ಈ ಹೊಂಬಣ್ಣ ಬಂದ ಕಡುಬುಗಳನ್ನು ಜಾಲರಿಯಿಂದ ತೆಗೆದು ಬಸಿಯುವ ತಟ್ಟೆಯಲ್ಲಿ ಹಾಕಿ ಆರಲು ಬಿಡಬೇಕು. ಆರಿದ ಮೇಲೆ ಗರಿ ಗರಿಯಾದ ಗಣೇಶನಿಗೆ ಪ್ರಿಯವಾದ ರುಚಿಕರವಾದ ಮೋದಕ, ಕರಿಗಡುಬು ನೈವೇದ್ಯ ಹಾಗು ಸೇವಿಸಲು ಸಿದ್ಧವಾಗುತ್ತವೆ.



**ರಾಗಿಣಿ ದರ್ಶನ್**
ನ್ಯೂ ಜೆರ್ಸಿ

# ಖಾರ ಬ್ರೆಡ್



ಬೇಕಾಗುವ ಸಾಮಾನುಗಳು :
೪ - ೫ ಕಪ್ (೮ oz ಕಪ್ ) ಮೈದಾ ಅಥವಾ ಬ್ರೆಡ್ ಹಿಟ್ಟು
೪ ಟೇಬಲ್ ಸ್ಪೂನ್ ಎಣ್ಣೆ .
೨ ಕಪ್ (೮ oz ಕಪ್ ) ಬಿಸಿ ನೀರು. (೧೦೫-೧೧೫ ಡಿಗ್ರೀ )
೧ ಟೇಬಲ್ ಸ್ಪೂನ್ active dry yeast ..
೧/೪ ಕಪ್ ಸಕ್ಕರೆ
೧ ಟೀ ಸ್ಪೂನ್ ಜೀರಿಗೆ
೮-೧೦ ಹಸಿ ಮೆಣಸಿಕಾಯಿ - ಸಣ್ಣಗೆ ಹೆಚ್ಚಿದ್ದು
೨ ಟೀ ಸ್ಪೂನ್ ಅಚ್ಚ ಮೆಣಸಿನಕಾಯಿ ಪುಡಿ
೨ ಟೇಬಲ್  ಸ್ಪೂನ್ ಬೆಳ್ಳುಳ್ಳಿ ಪುಡಿ
೨ ದಪ್ಪ ಈರುಳ್ಳಿ ಸಣ್ಣಗೆ ಹೆಚ್ಚಿದ್ದು
೪ ಎಸಳು ಬೆಳ್ಳುಳ್ಳಿ (pod) ಸಣ್ಣಗೆ ಹೆಚ್ಚಿದ್ದು
೧ ಎಸಳು ಕರಿಬೇವು ಸಣ್ಣಗೆ ಹೆಚ್ಚಿದ್ದು
೧/೨ ಕಪ್ ಕೋತ್ತಂಬರಿ  ಸೊಪ್ಪು ಹೆಚ್ಚಿದ್ದು
೨  ಟೀ ಸ್ಪೂನ್ ಉಪ್ಪು (ರುಚಿಗೆ ತಕ್ಕಷ್ಟು)

ಮಾಡುವ ವಿಧಾನ
ಬಿಸಿ ನೀರಿಗೆ ಈಸ್ಟ್ ಮತ್ತು ೧ ಟೀ ಸ್ಪೂನ್ ಸಕ್ಕರೆ ಹಾಕಿ ೧೦ ನಿಮಿಷ ನೊರೆ ಬರುವವರೆಗೆ ಬಿಡಿ.
ಒಂದು ದೊಡ್ಡ ಪಾತ್ರೆಗೆ ೩ ಕಪ್ ಬ್ರೆಡ್ ಅಥವಾ ಮೈದಾ ಹಿಟ್ಟು ಹಾಕಿ ಉಳಿದಿರುವ ಎಲ್ಲಾ ಸಾಮಗ್ರಿಗಳನ್ನು ಹಾಕಿ  ನೊರೆ ಬಂದಿರುವ ನೀರು ಹಾಕಿ ಕಲಸಿ, ಉಳಿದ ೨ ಕಪ್ ಹಿಟ್ಟನ್ನು ಸ್ವಲ್ಪ ಸ್ವಲ್ಪ ಹಾಕಿ  ಚಪಾತಿ ಹಿಟ್ಟಿನ ಹದಕ್ಕೆ ಕಲಸಿ, ತೀರ ಗಟ್ಟಿ ಮಾಡಬೇಡಿ, ಸ್ವಲ್ಪ ಅಂಟು ಇದ್ದರು ಪರವಾಗಿಲ್ಲ. ಕಲಸಿದ ಹಿಟ್ಟನ್ನು ಸುಮಾರು ೧೦ ನಿಮಿಷ ಕೌಂಟರ್ ಟಾಪ್ ಮೇಲೆ ಮಿದಿಯಿರಿ (kneed),  ಪಾತ್ರೆಗೆ ಎಣ್ಣೆ ಸವರಿ kneed ಮಾಡಿದ ಹಿಟ್ಟನ್ನು ಒದ್ದೆ ಬಟ್ಟೆಯಲ್ಲಿ  ಮುಚ್ಚಿ ೧.೫ ಗಂಟೆಗಳ ಕಾಲ ಉಬ್ಬಲು ಬಿಡಿ. ಹೀಗೆ ಉಬ್ಬಿದ ಹಿಟ್ಟಿನಲ್ಲಿ ಗಾಳಿ ತುಂಬಿರುತ್ತೆ, ಅದನ್ನು ಮುಷ್ಟಿ ಕೈಲಿ ಚೆನ್ನಾಗಿ ಗುದ್ದಿ ಗಾಳಿ (air out) ಯನ್ನು ತೆಗೆಯಿರಿ, ಕೌಂಟರ್ ಮೇಲ್ ಹಾಕಿ ಬೆರಳಿನಲ್ಲಿ ಅದಮಿ  air bubble ತೆಗಿಯಿರಿ, ನಂತರ ಹಿಟ್ಟನ್ನು ಎರಡು ಭಾಗ ಮಾಡಿ ಲಾಗ್ shape ಮಾಡಿ . ೨ loaves panಗೆ ಪಾರ್ಚಮೆಂಟ್ ಶೀಟ್ ಹಾಕಿ ಅಥವಾ ಎಣ್ಣೆ ಸವರಿ ಹಿಟ್ಟನ್ನು ಹಾಕಿ ಮತ್ತೆ ಒದ್ದೆ ಬಟ್ಟೆ ಮುಚ್ಚಿ ೪೫ ನಿಮಿಷ ಉಬ್ಬುಲು  ಬಿಡಿ.


ಬೇಕಿಂಗ್
ಒವೆನ್ ೩೫೦ ಡಿಗ್ರೀ ಬಿಸಿ ಆದಮೇಲೆ  ೨ loaf pan ಗಳನ್ನು ಒವೆನ್ ನಲ್ಲಿ ಇಟ್ಟು  ೩೦-೩೩ ನಿಮಿಷಗಳ ವರೆಗೆ ಬೇಕ್ ಮಾಡಿ. ಸುಮಾರು ೧೫ ರಿಂದ ೩೦ ನಿಮಿಷಗಳವರೆಗೆ ಕೂಲಿಂಗ್ rack ಮೇಲೆ  ಬ್ರೆಡ್ ಅನ್ನು ತಣ್ಣಗೆ ಆಗುವವೆರೆಗೊ  ಬಿಡಿ. ನಂತರ slice ಮಾಡಿ ಬೆಣ್ಣೆ ,ಪುದೀನ ಚಟ್ನಿ ಹಚ್ಚಿ ಸವಿಯಿರಿ .  ತಪ್ಪದೆ ನಿಮ್ಮ ಹೊಸ ರುಚಿಯ  ಫೋಟೋ ತೆಗೆದು ಬೃಂದಾವನ ವಾಣಿಗೆ ಕಳುಹಿಸಿ .

# ಚಿಣ್ಣರ ಲೋಕ







**ನವಿಷ್ಕ ಮಂಜುನಾಥ್**
12 ವರ್ಷ, ಬೆಂಗಳೂರು











**ಶಿವಾನಿ ಸೌಮ್ಯ ರವಿ**

7 ವರ್ಷ,ನ್ಯೂ ಜೆರ್ಸಿ








**ಪ್ರದ್ಯೋತ್ ಹೆಬ್ಬಾರ್**
8 ವರ್ಷ, ನ್ಯೂ ಜೆರ್ಸಿ





**ಪ್ರಶಸ್ತ್ ಹೆಬ್ಬಾರ್**
13 ವರ್ಷ, ನ್ಯೂ ಜೆರ್ಸಿ

# ಶ್ರೀಕೃಷ್ಣದೇವರಾಯ

ಕೃಷ್ಣದೇವರಾಯ ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದರು. ಅವರು ತುಳುವ ವಂಶದವರಾಗಿದ್ದರು. ವಿಜಯನಗರ ಸಾಂರಾಜ್ಯವು ಅವರ ಆಡಳಿತದಲ್ಲಿ ಉತ್ತುಂಗಕ್ಕೆ ಏರಿತು. ಅವರು ಸಮರ್ಥವಾಗಿ ರಾಜ್ಯಭಾರ ನಡೆಸಿ, ಸಂಗೀತ, ಸಾಹಿತ್ಯ, ಚಿತ್ರಕಲೆಗಳನ್ನು ಪ್ರೋತ್ಸಾಹಿಸಿದರು. ಸಾಮ್ರಾಜ್ಯವನ್ನು ವಿಸ್ತಾರಗೊಳಿಸಿದರು. ಅವರ ಕಾಲದಲ್ಲಿ ನವರತ್ನಗಳನ್ನು ದಾರಿಯಲ್ಲಿ ಮಾರುತ್ತಿದ್ದರು. ಅವರು "ಆಮುಕ್ತ ಮಾಲ್ಯದ" ವನ್ನು ಬರೆದರು. ಅವರ ಆಸ್ಥಾನದಲ್ಲಿ ಅಷ್ಟದಿಗ್ಗಜರು ಇದ್ದರು. ತೆನಾಲಿ ರಾಮ ಅವರಲ್ಲಿ ಒಬ್ಬರು. ಅವರು ಚತುರರಾಗಿದ್ದರು. ಅವರನ್ನು ವಿಕಟಕವಿ ಎಂದು ಕರೆಯುತ್ತಾರೆ.

# ಕ್ಯಾಮೆರಾ ಕಣ್ಣಲ್ಲಿ



# ಕ್ಯಾಮರಾ ಕಣ್ಣಲ್ಲಿ



**ಸಂಧ್ಯಾ ಮಲ್ಲಿಕ್**
ನ್ಯೂ ಜೆರ್ಸಿ







**ಸಂಧ್ಯಾ ಮಲ್ಲಿಕ್**
ನ್ಯೂ ಜೆರ್ಸಿ







ಶ್ರೀವಿದ್ಯಾ ಪ್ರಶಾಂತ್
ನ್ಯೂ ಜೆರ್ಸಿ








**ಶ್ರೀವಿದ್ಯಾ ಪ್ರಶಾಂತ್**
ನ್ಯೂ ಜೆರ್ಸಿ





# ಬೃಂದಾವನ ವಾಣಿ ೫೨ನೆಯ ಸಂಚಿಕೆಯ ಬಗ್ಗೆ ಓದುಗರ ಅನಿಸಿಕೆ ಅಭಿಪ್ರಾಯಗಳು


ಪ್ರತಿ ಸಂಚಿಕೆಯಲ್ಲೂ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಜ್ಞಾನದ ಮಿಶ್ರಣ ಕಾಣುತ್ತದೆ. ಲೇಖನಗಳು ಓದುಗರ ಮನಸ್ಸಿಗೆ ತಲುಪುವಂತೆ ಇದೆ. ಸಂಪಾದಕೀಯ ತಂಡಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು ಮತ್ತು ಶುಭಾಶಯಗಳು. 💐
-Sandhya Mallik

ಎಲ್ಲ Articles ,front cover ಚೆನ್ನಾಗಿದೆ. ತುಂಬ ಧನ್ಯವಾದಗಳು ಪ್ರಕಟಣೆಗಾಗಿ !!💐 -Yashashwini

ಬೃಂದಾವನ ವಾಣಿ 52 ಸಂಚಿಕೆ ತುಂಬ ಸುಂದರವಾಗಿ ಮೂಡಿ ಬಂದಿದೆ..ಮನ ಸೆಳೆಯುವ ಆಕರ್ಷಕ ಮುಖ ಪುಟದ ವಿನ್ಯಾಸ, ಕತೆ, ಕವನ, ಲೇಖನಗಳು, ಗುಂಪು ಚಟುವಟಿಕೆಗಳು, ಇತ್ಯಾದಿ ಅದರೊಳಗಿನ ಸವಿ ಹೂರಣವಾಗಿವೆ.. ವೈವಿಧ್ಯಮಯ ವಿಷಯಗಳಿಂದ ಕೂಡಿದ ಸಂಚಿಕೆ ಓದುಗರ ಮನಸೆಳೆವಂತಿದೆ.. Onkaramma Rudramuniswamy

ರಾಗಿಣಿ, ಬೇಸಿಗೆಯಲ್ಲಿ ರಜೆ, ಅಂದು ಇಂದು, ಅಧ್ಯಕ್ಷರ ನುಡಿ, ಅಗೌರವ ಮತ್ತು ಅಸಹಕಾರ ಚೈತ್ರದ ಚಿತ್ತಾರ, ಶ್ರೀರಾಮನವಮಿ ಉತ್ಸವ, ಓದಿದೆ, ತುಂಬಾ ಚೆನ್ನಾಗಿದೆ ನಿಮ್ಮ ಕರ್ನಾಟಕ ಸಂಘದ ಚಟುವಟಿಕೆಗಳು, ಇಷ್ಟೆಲ್ಲಾ ನೆಡೆಯುತ್ತಿರುವುದರಿಂದಲೇ ನಿಮಗೆ ದೂರದ ಅಮೇರಿಕ ದಲ್ಲಿ ಇದ್ದರೂ ಕರ್ನಾಟಕದಲ್ಲೇ ಇದ್ದಂತೆ ಭಾಸವಾಗುತ್ತದೆ, ಆದ್ದರಿಂದಲೇ ನಿಂಗು ಬೇಜಾರಿಲ್ಲ, ಖುಷಿಯಾಗಿದ್ದೀಯ 👍
ಇನ್ನೂ ನೀನೂ ಬರೆದಿರುವ ಆರ್ಟಿಕಲ್ ಅಂತೂ ಎಲ್ಲದಕ್ಕಿಂತ ಚೆನ್ನಾಗಿದೆ, ನಮ್ಮ ಬಾಲ್ಯವನ್ನೂ ನೆನಪಿಸುತ್ತದೆ 👌 -
-Anasuya Bangalore




ಬೃಂದಾವನ ವಾಣಿ ಹಿಂದಿನ ಸಂಚಿಕೆಗಳನ್ನು ಇಲ್ಲಿ ಓದಬಹುದು :
https://brindavana.org/brindavanavani/



**ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :**

**brindavanavani@gmail.com**

**ಮುಂದಿನ ಸಂಚಿಕೆಯಲ್ಲಿ ಸಿಗೋಣ...**